ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 20 ಸೋಮವಾರ 2023

ಸಂಪುಟ: 43 | ಸಂಚಿಕೆ: 302 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮಂಡಕಳ್ಳಿ ಬಳಿ ಮೈಸೂರಿನ ಮೊದಲ ಆಟೋನಗರ ನಿರ್ಮಾಣಕ್ಕೆ ಗುದ್ದಲಿ ಪೂಜೆ

10.10 ಎಕರೆ ಪ್ರದೇಶದಲ್ಲಿ 4.5 ಕೋಟಿ ರೂ. ಯೋಜನೆಗೆ ಶಾಸಕರಾದ ಎಸ್.ಎ.ರಾಮದಾಸ್, ಜಿಟಿಡಿ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಚಾಲನೆ

ಮೈಸೂರು, ಫೆ.19(ಆರ್‌ಕೆ)–ಮೈಸೂರಿನ ನಂಜನಗೂಡು ರಸ್ತೆಯ ಮಂಡಕಳ್ಳಿ ಗ್ರಾಮದ ಸರ್ವೆ ನಂಬರ್ 64 ಮತ್ತು 65ರ 10.10 ಎಕರೆ ಪ್ರದೇಶದಲ್ಲಿ ನಿರ್ಮಿಸಲುದ್ದೇಶಿಸಿರುವ ಮೊದಲ ಆಟೋ ನಗರ ನಿರ್ಮಾಣ ಯೋಜನೆಗೆ ಇಂದು ಚಾಲನೆ ದೊರೆತಿದೆ.

ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ ಹಾಗೂ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರು 4.5 ಕೋಟಿ ರೂ. ಅಂದಾಜು ವೆಚ್ಚದ ಆಟೋನಗರ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು. ಮೈಸೂರಿನ ವಿವಿಧೆಡೆ 700ಕ್ಕಿಂತಲೂ ಹೆಚ್ಚು ಕಡೆಗಳಲ್ಲಿ ಹಲವು ಬಗೆಯ ವಾಹನಗಳ ರಿಪೇರಿ ಕಾರ್ಯ ನಡೆಯುತ್ತಿದ್ದು, ಜನ ವಸತಿ ಪ್ರದೇಶದಲ್ಲಿ ವಾಹನ ರಿಪೇರಿ ಮಾಡಲು ಸ್ಥಳಾವಕಾಶದ ಕೊರತೆಯಿರುವುದರಿಂದ ನಗರದ ಹೊರ ಭಾಗದ ನಾಲ್ಕೂ ದಿಕ್ಕುಗಳಲ್ಲಿ ಒಂದೇ ಸೂರಿನಡಿ ವಾಹನ ದುರಸ್ತಿ, ಪೇಂಟಿಂಗ್, ಟಿಂಕರಿಂಗ್ ಕೆಲಸ ಮಾಡಲು ಆಟೋನಗರ ನಿರ್ಮಿಸಬೇಕೆಂದು ಶಾಸಕ ಎಸ್.ಎ.ರಾಮದಾಸ್ ಅವರು ಸರ್ಕಾರಕ್ಕೆ ಮನವಿ ಮಾಡಿದ್ದರು.

ಯೋಜನೆ ಅನುಷ್ಠಾನಗೊಳಿಸಲು ಮೈಸೂರು ತಾಲೂಕು, ಮಂಡಕಳ್ಳಿ ಗ್ರಾಮದ ಸರ್ವೆ ನಂಬರ್ 64 ಮತ್ತು 65ರಲ್ಲಿ ಆಟೋನಗರ ನಿರ್ಮಿಸುವ ಬಗ್ಗೆ 2012ರ ನವೆಂಬರ್ 26ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದಿತ್ತು ಈ ನಡುವೆ ಭೂ ಮಾಲೀಕರು ನ್ಯಾಯಾಲಯದ ಮೊರೆ ಹೋಗಿದ್ದರಿಂದ ಯೋಜನೆ ನೆನೆಗುದಿಗೆ ಬಿದ್ದಿತ್ತು.

ಇದೀಗ ಭೂ ಮಾಲೀಕತ್ವ ಸಂಬಂಧ ನ್ಯಾಯಾಲಯವು ಮುಡಾ ಪರವಾಗಿ ತೀರ್ಪು ನೀಡಿರುವುದರಿಂದ ಆಟೋನಗರ ಯೋಜನೆಗೆ ಚಾಲನೆ ನೀಡಲಾಗಿದ್ದು, ಅಲ್ಲಿ ರಸ್ತೆ ನೀರು, ವಿದ್ಯುತ್, ಒಳಚರಂಡಿ, ಉದ್ಯಾನವನ, ಬಯಲು ಜಾಗ, ▶ 6ನೇ ಪುಟಕ್ಕೆ



ಮೈಸೂರಿನ ಮಂಡಕಳ್ಳಿ ಸಮೀಪ ನಂಜನಗೂಡು ರಸ್ತೆಗೆ ಹೊಂದಿಕೊಂಡಂತಿರುವ ಜಾಗದಲ್ಲಿ ಮುಡಾದಿಂದ ನಿರ್ಮಿಸಲುದ್ದೇಶಿಸಿರುವ ಆಟೋ ನಗರಕ್ಕೆ ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ ಹಾಗೂ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ದೇವರಾಜ್ ಅವರು ಭಾನುವಾರ ಗುದ್ದಲಿ ಪೂಜೆ ನೆರವೇರಿಸಿದರು. ಮೈಸೂರು ಸಿಟಿ ಮೋಟಾರ್ ವೆಹಿಕಲ್ಸ್ ಮೆಕ್ಯಾನಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎನ್.ಮಹೇಶ್ ರಾಜೇ ಅರಸ್, ಉಪಾಧ್ಯಕ್ಷರಾದ ಸೈಯ್ಯದ್ ನಯಾಜ್ ಅಹಮದ್, ಅಮಾನುಲ್ಲಾ, ಡಿ.ನಾಗರಾಜ್, ಪದಾಧಿಕಾರಿಗಳಾದ ಎಂ.ಎಲ್.ಶಂಕರ್, ಪದ್ಮನಾಭ್, ಜಯರಾಮ್ ಹಾಗೂ ಇತರರನ್ನು ಕಾಣಬಹುದು.

169 ಮುಡಾ ಸಿಎ ನಿವೇಶನಗಳ ಹಂಚಿಕೆಗೆ ಸಂಘ–ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಮೈಸೂರು, ಫೆ.19(ಆರ್‌ಕೆ)–ಈಗಾಗಲೇ 305 ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ ಪ್ರಕ್ರಿಯೆ ಅಂತಿಮ ಹಂತದಲ್ಲಿರುವ ಬೆನ್ನಲ್ಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು, ವಿವಿಧ ಬಡಾವಣೆಗಳಲ್ಲಿ ಲಭ್ಯವಿರುವ 169 ಸಿಎ ನಿವೇಶನಗಳಿಗಾಗಿ ಸಂಘ–ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿದೆ.



ಮೈಸೂರಿನ ಆಲನಹಳ್ಳಿ, ಅಯ್ಯಾಜಯ್ಯನ ಹುಂಡಿ, ಬೆಳವಾಡಿ, ಭುಗತಹಳ್ಳಿ, ಬೋಗಾದಿ, ಚಾಮಲಾಪುರ, ಚಿಕ್ಕಳ್ಳಿ, ದೇವನೂರು, ದಡದಹಳ್ಳಿ, ಗೊರೂರು, ಹಂಚ್ಯಾ, ಹಾಲಾಳು, ಇಲವಾಲ, ಕೇರ್ಗಳ್ಳಿ, ಕುಪ್ಪಲೂರು, ಮಾದಗಳ್ಳಿ, ಮಂಡಕಳ್ಳಿ, ನಾಡನಹಳ್ಳಿ, ನಗರ್ತಹಳ್ಳಿ, ನಂಜನಗೂಡು, ಶ್ಯಾದನಹಳ್ಳಿ, ಶ್ರೀರಾಂಪುರ, ವಸಂತನಗರ, ಲಿಂಗಾಂಬುದಿ, ಮರಟ್ಟಿ ಕ್ಯಾತನಹಳ್ಳಿ, ಹುಯಿಲಾಳು, ಕೆಂಚಲಗೂಡು, ಗೊರೂರು, ಬೆಳವಾಡಿ, ಕಲ್ಲಾಪುರ, ಬೋಗಾದಿ, ಮೇಟಗಳ್ಳಿ, ಲಲಿತಾದ್ರಿಪುರ, ಚೌಡಳ್ಳಿ, ಮಂಡಕಳ್ಳಿ, ವಾಜಮಂಗಲ, ಹೆಬ್ಬಾಳು, ವಿಜಯನಗರ 2ನೇ ಹಂತ, ಕೆ.ಹೆಮ್ಮನಹಳ್ಳಿ, ಮದರಗಳ್ಳಿ, ಗೋಹಳ್ಳಿ, ಮಾದಾಪುರ, ಧನಗಳ್ಳಿ, ದೇವಲಾಪುರ, ಯಾಂದಹಳ್ಳಿ, ಸರ್ಕಾರಿ ಉತ್ತನಹಳ್ಳಿ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ▶ 8ನೇ ಪುಟಕ್ಕೆ

ಕರ್ಮ ನಿಮ್ಮನ್ನು ಬಿಡುವುದಿಲ್ಲ: ರೋಹಿಣಿ ವಿರುದ್ಧ ಡಿ.ಕೆ.ರವಿ ಪತ್ನಿ ಟ್ವೀಟ್



ಬೆಂಗಳೂರು, ಫೆ.19– ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಐಪಿಎಸ್ ಅಧಿಕಾರಿ ಡಿ.ರೂಪ ಸರಣಿ ಆರೋಪಗಳನ್ನು ಮಾಡಿರುವ ಬೆನ್ನಲ್ಲೇ ದಿವಂಗತ ಐಎಎಸ್ ಅಧಿಕಾರಿ ಡಿ.ಕೆ ರವಿ ಪತ್ನಿ ಕುಸುಮಾ ಟ್ವೀಟ್ ಮಾಡಿರುವುದು ತೀವ್ರ ಕುತೂಹಲ ಮೂಡಿಸಿದೆ.

ರೋಹಿಣಿ ಸಿಂಧೂರಿ ವಿರುದ್ಧದ ಆರೋಪದಲ್ಲಿ ರೂಪಾ ಅವರು ಡಿ.ಕೆ.ರವಿ ಸಾವಿನ ಪ್ರಕರಣವನ್ನು ಉಲ್ಲೇಖಿಸಿದ್ದರು. ಈ ಹಿನ್ನೆಲೆಯಲ್ಲಿ ಡಿ.ಕೆ.ರವಿ ಪತ್ನಿ ಟ್ವೀಟ್ ಮಹತ್ವ ಪಡೆದುಕೊಂಡಿದೆ. ಕೇವಲ ಒಂದು ಸಾಲಿನಲ್ಲಿ ಟ್ವೀಟ್ ಮಾಡಿರುವ ಡಿ.ಕೆ.ರವಿ ಪತ್ನಿ, "Karma will get back at you , sooner or later ▶ 8ನೇ ಪುಟಕ್ಕೆ

ಸಿಂಧೂರಿಯ ಸಂಧಾನ ಸಿಂಧುತ್ವ ಪ್ರಶ್ನಿಸಿದ ರೂಪಾ

● ಸಿಂಧೂರಿ ಖಾಸಗಿ ಫೋಟೋ ವೈರಲ್ ● ಸಾಮಾಜಿಕ ಜಾಲತಾಣದಲ್ಲಿ 19 ಖಡಕ್ ಪ್ರಶ್ನೆ

ಬೆಂಗಳೂರು, ಫೆ. 19– ಕೆ.ಆರ್.ನಗರ ಶಾಸಕ ಸಾರಾ ಮಹೇಶ್ ಜೊತೆ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಸಂಧಾನಕ್ಕೆ ಪ್ರಯತ್ನಿಸಿರುವ ಕ್ರಮವನ್ನು ಪ್ರಶ್ನಿಸಿರುವ ಐಪಿಎಸ್ ಅಧಿಕಾರಿ ಡಿ. ರೂಪಾ ಅವರು, ರೋಹಿಣಿಯವರ ಕೆಲವು ಖಾಸಗಿ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿ ಅವರಿಗೆ 19 ಖಡಕ್ ಪ್ರಶ್ನೆಗಳನ್ನು ಕೇಳಿದ್ದಾರೆ.

ಐಎಎಸ್ ಅಧಿಕಾರಿ ಪಿ.ಮಣಿವಣ್ಣನ್ ಮೂಲಕ ರೋಹಿಣಿ ಸಿಂಧೂರಿ ಸಂಧಾನಕ್ಕೆ ಬಂದಿದ್ದರು ಎಂದು ವಿಧಾನಸಭೆಯಲ್ಲಿ ಶಾಸಕ ಸಾರಾ ಮಹೇಶ್ ಬಹಿರಂಗಪಡಿದ ಬೆನ್ನಲ್ಲೇ ಡಿ. ರೂಪಾ ಅವರು ರೋಹಿಣಿ ವಿರುದ್ಧ ಕಿಡಿಕಾರಿದ್ದಾರೆ. ಶಾಸಕ ಸಾರಾ ಮಹೇಶ್ ಬಳಿ ರೋಹಿಣಿ ಸಿಂಧೂರಿ ಸಂಧಾನಕ್ಕೆ ಹೋಗುವುದು ಎಂದರೆ ಏನರ್ಥ? ಯಾವ ಐಎಎಸ್ ಅಧಿಕಾರಿ ಕೂಡ ತಾವು ನಿರ್ವಹಿಸಿದ ಕರ್ತವ್ಯದ ನಿಮಿತ್ತ ಶಾಸಕ ಅಥವಾ ರಾಜಕೀಯ ವ್ಯಕ್ತಿಗಳ ಜೊತೆ ಸಂಧಾನಕ್ಕೆ ಹೋಗಿದ್ದಾರೆ ಎಂಬುದನ್ನು ಇದೇ ಮೊದಲು ನಾನು ಕೇಳಿದ್ದೇನೆ. ಹಾಗಾದರೆ ರೋಹಿಣಿ ಸಂಧಾನದ ಮೂಲಕ ಏನನ್ನು ಮುಚ್ಚಿಕೊಳ್ಳಲು ಪ್ರಯತ್ನ ನಡೆಸಿದ್ದಾರೆ. ತಮ್ಮ ಕರ್ತವ್ಯ ಲೋಪದ ಬಗ್ಗೆಯೋ ಅಥವಾ ಭ್ರಷ್ಟಾಚಾರದ ಬಗ್ಗೆಯೋ ಎಂದು ಪ್ರಶ್ನಿಸಿದ್ದಾರೆ. ಶಾಸಕ ಸಾರಾ ಮಹೇಶ್ ▶ 8ನೇ ಪುಟಕ್ಕೆ



ಡಿ.ರೂಪಾ

ಕಾನೂನು ಹೋರಾಟಕ್ಕೆ ಸಿದ್ಧ

ಬೆಂಗಳೂರು, ಫೆ.19– ಐಪಿಎಸ್ ಅಧಿಕಾರಿ ರೂಪಾ ಮಾಡಿರುವ ಸಾಲು–ಸಾಲು ಆರೋಪಗಳಿಗೆ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮಾಧ್ಯಮ ಹೇಳಿಕೆ ಮೂಲಕ ಪ್ರತಿಕ್ರಿಯಿಸಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ವೈಯಕ್ತಿಕ ಹಗೆ ಸಾಧಿಸಲು ಹೊರಡುವುದು ಸಮಾಜಕ್ಕೆ ಬಹಳಷ್ಟು ಅಪಾಯಕಾರಿ. ರೂಪಾ ಅವರು, ಜವಾಬ್ದಾರಿಯುತ ಸ್ಥಾನದಲ್ಲಿದ್ದು, ನನ್ನ ಮೇಲೆ ವೈಯಕ್ತಿಕ ಹಗೆ ಸಾಧಿಸಲು ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡಿರುವವರ ರೀತಿಯಲ್ಲಿ ಆಡುತ್ತಿದ್ದಾರೆ ಎಂದಿದ್ದಾರೆ.



ಇತ್ತೀಚಿನ ವರ್ಷಗಳಲ್ಲಿದ್ದ ಎಲ್ಲಾ ಹುದ್ದೆಗಳಲ್ಲಿ ಇದೇ ರೀತಿಯ ಆಧಾರರಹಿತ ಆರೋಪಗಳನ್ನು ಮಾಡುವ ಮೂಲಕ ಮಾಧ್ಯಮಗಳ ಗಮನ ಸೆಳೆಯುವ ಹಾಗೂ ತಾವು ದ್ವೇಷಿಸುವ ವ್ಯಕ್ತಿಗಳ ಮೇಲೆ ವೈಯಕ್ತಿಕವಾಗಿ ಹಗೆತನ ಸಾಧಿಸಲು ಪ್ರಯತ್ನಿಸುತ್ತಾರೆ. ಅವರು ಯಾವಾಗಲೂ ಸುದ್ದಿಯಲ್ಲಿರಬೇಕು ಎನ್ನುವುದನ್ನು ಬಯಸುತ್ತಾರೆ ಹಾಗೂ ಅದಕ್ಕೆ ಬೇಕಾದಂತಹ ಪೋಸ್ಟ್‌ಗಳನ್ನು ತಮ್ಮ ಸಾಮಾಜಿಕ ಮಾಧ್ಯಮದ ಪುಟಗಳಲ್ಲಿ ಹಾಕುವ ಮೂಲಕ ಸುದ್ದಿಯ ಕೇಂದ್ರಬಿಂದುವಾಗುತ್ತಾರೆ ಎಂದಿದ್ದಾರೆ

ವೈಯಕ್ತಿಕ ನಿಂದನೆಯ ಅಭಿಯಾನ : ಜವಾಬ್ದಾರಿಯುತ ಸ್ಥಾನದಲ್ಲಿದ್ದು ಒಳ್ಳೆಯ ಕೆಲಸಗಳ ಕಡೆ ಗಮನ ಹರಿಸುವುದನ್ನ ಬಿಟ್ಟು ಒಬ್ಬ ವ್ಯಕ್ತಿ ಅಥವಾ ಇನ್ನೊಬ್ಬರನ್ನು ಗುರಿಯಾಗಿಸಿಕೊಂಡು ಅವರ ತೇಜೋವಧೆ ಮಾಡುವುದೇ ಅವರ ಪ್ರಾಥಮಿಕ ಕೆಲಸ ಎಂದು ತೋರಿಸುತ್ತದೆ. ಅದರಲ್ಲೂ ನನ್ನ ವಿರುದ್ಧ ಯಾವುದೋ ವೈಯಕ್ತಿಕ ಹಗೆಯನ್ನಿಟ್ಟುಕೊಂಡು ಸುಳ್ಳು, ವೈಯಕ್ತಿಕ ನಿಂದನೆಯ ▶ 8ನೇ ಪುಟಕ್ಕೆ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ರಾಜ್ಯ ಪ್ರವಾಸ

ಬೆಂಗಳೂರು, ಫೆ.19– ವಿಧಾನಸಭೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ರಾಷ್ಟ್ರೀಯ ಪಕ್ಷಗಳ ನಾಯಕರು ರಾಜ್ಯಕ್ಕೆ ಬಂದು ಹೋಗುತ್ತಿದ್ದಾರೆ. ಫೆ.20 ಹಾಗೂ 21ರಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ರಾಜ್ಯದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವುದು ನಡ್ಡಾ ಅವರ ಪ್ರವಾಸದ ಉದ್ದೇಶ. ಈ ಕಾರಣ ಪಕ್ಷಕ್ಕೆ ಸಂಬಂಧಿಸಿದ ವಿವಿಧ ಚಟುಚಟಿಕೆಗಳಲ್ಲಿ ಅವರು ಭಾಗವಹಿಸಲು ಬರುತ್ತಿದ್ದಾರೆ ಎಂದು ರಾಜ್ಯ ಬಿಜೆಪಿ ತಿಳಿಸಿದೆ. ಮಂಗಳೂರಿಗೆ ಭಾನುವಾರ ರಾತ್ರಿ ಆಗಮಿಸಲಿರುವ ನಡ್ಡಾ ಅವರು ಅಲ್ಲೇ ತಂಗಲಿದ್ದಾರೆ. ಮರುದಿನ ಉಡುಪಿ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳ ಭಾಗಗಳಲ್ಲಿ ಎರಡು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ರಾಜ್ಯ ಬಿಜೆಪಿ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದ್ದಾರೆ.



ಕರ್ನಾಟಕದ ಸ್ಥಿತಿ ಚಿಂತಾಜನಕ; ರಕ್ಷಣೆಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ

ಪತ್ರಕರ್ತರು ಅತ್ಯಂತ ನಿರ್ಣಾಯಕ ಪಾತ್ರ ವಹಿಸಬೇಕಿದೆ

ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಅಭಿಮತ



ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಮೂರು ಕೃತಿಗಳನ್ನು ಬಿಡುಗಡೆಗೊಳಿಸಿದರು.

ಮೈಸೂರು,ಫೆ.19(ಪಿಎಂ)– ಚಿಂತಾಜನಕ ಸ್ಥಿತಿಯಲ್ಲಿರುವ ಕರ್ನಾಟಕದ ರಕ್ಷಣೆ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪತ್ರಕರ್ತರು ಅತ್ಯಂತ ನಿರ್ಣಾಯಕ ಪಾತ್ರ ವಹಿಸಬೇಕಿದೆ ಎಂದು ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ವಿಸ್ಮಯ ಬುಕ್ ಹೌಸ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪತ್ರಕರ್ತ ಸುದೇಶ ದೊಡ್ಡಪಾಳ್ಯ ಅವರ 'ಈಶಾನ್ಯ ದಿಕ್ಕಿನಿಂದ (ಅಂಕಣ ಬರಹ)', 'ಹಂಗರಹಳ್ಳಿಯ ಬರ್ಬರ ಸಂಕೋಲೆಗಳು (ವಿಭಿನ್ನ ಬರಹಗಳ ಕಟ್ಟು)' ಮತ್ತು 'ಒಲವು ನಮ್ಮ ಬದುಕು (ಪ್ರೇಮ ಕಥನಗಳ ಸರಣಿ–ಮೂರನೇಯ ಮುದ್ರಣ)' ಮೂರು ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ನಮ್ಮ ರಾಜ್ಯ ಈಗ ಬಿದ್ದು ಹೋಗುವ ಸ್ಥಿತಿಯಲ್ಲಿ ತುತ್ತತುದಿ ಮುಟ್ಟಿದೆ. ಇದನ್ನು ತಪ್ಪಿಸುವ ಶಕ್ತಿ ಪತ್ರಕರ್ತರು, ಪ್ರಕಾಶಕರಲ್ಲಿ ವಿಶೇಷವಾಗಿದೆ. ಹೀಗಾಗಿ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಈ ವರ್ಗ ಅತ್ಯಂತ ನಿರ್ಣಾಯಕ ಪಾತ್ರ ವಹಿಸಬೇಕಿದೆ. ಕೆಲ ಮಾಧ್ಯಮಗಳು ಒಂದೇ ಸಿದ್ಧಾಂತ ಎನ್ನುವಂತೆ ಕಾರ್ಯನಿರ್ವಹಿಸುತ್ತಿವೆ. ಜಾಹೀರಾತುಗಳು ರಾರಾಜಿಸುವಂತಾಗಿದ್ದು, ಆ ಮೂಲಕ ಸುಳ್ಳನ್ನು ನಯವಾಗಿ ಹೇಳುವಂತಹ ವಾತಾವರಣ ಸೃಷ್ಟಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ದೇಶದ ಪ್ರಧಾನಮಂತ್ರಿಯಿಂದ ಹಿಡಿದು ಮುಖ್ಯಮಂತ್ರಿಗಳವರೆಗೆ ಸುಳ್ಳುಗಳ ಕಂತೆಗೆ ಕೊನೆ ಇಲ್ಲ. ಅವರು ಸುಳ್ಳು ಹೇಳುತ್ತಿದ್ದರೆ ಅವುಗಳನ್ನು ವರ್ಣಿಸುವುದು ನಮ್ಮ ಪಾತ್ರವೇ? ಎಂದು ಪತ್ರಿಕಾರಂಗ ಅವಲೋಕಿಸಬೇಕಿದೆ. ಯಾವುದೇ ಪಕ್ಷದವರಾದರೂ ದೆಹಲಿ ಪುಢಾರಿಗಳು, ಸ್ಥಳೀಯ ಮುಖಂಡರು ಹೇಳಿಕೆ ಕುರಿತಂತೆ ವಾಸ್ತವಾಂಶ ಪರಿಶೀಲಿಸಬೇಕು. ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಅಲ್ಲಿನ ರಾಷ್ಟ್ರಾಧ್ಯಕರ ಭಾಷಣ ಒಂದೆಡೆ ಪ್ರಕಟಿಸಿದರೆ, ಅದರ ಪಕ್ಕದಲ್ಲೇ ಅವರು ಭಾಷಣದ ಸತ್ಯಾಂಶ ಪ್ರಕಟಿಸಲಾಗುತ್ತದೆ. ಇಂತಹ ಪರಿಪಾಠ ನಮ್ಮಲ್ಲಿಯೂ ಬೆಳೆಯಬೇಕು ಎಂದು ಹೇಳಿದರು.

ಸುದ್ದಿ ಮತ್ತು ಅಭಿಪ್ರಾಯ ಪ್ರತ್ಯೇಕವಾಗಿರಬೇಕೆಂಬ ದೊಡ್ಡ ತತ್ವ ಪಾಲನೆಯಾಗುತ್ತಿದೆ. ಇದು ಸುಳ್ಳುಗಳನ್ನು ಮುದ್ರಿಸಲು ಪರವಾನಗಿ ಇದ್ದಂತೆ. ಸಮಾಜಕ್ಕೆ ಅಹಿತಕರ ಆಗಿರುವುದನ್ನು ಕೈಬಿಡುವಂತಹ ಪತ್ರಿಕೋದ್ಯಮ ರೂಢಿಗೆ ಬರಬೇಕು. ವಿಶೇಷವಾಗಿ ಇದು ಕನ್ನಡ ಪತ್ರಿಕೋದ್ಯಮದಲ್ಲಿ ಆಗಬೇಕು. ನಮ್ಮ (ಪತ್ರಕರ್ತರು) ಕರ್ತವ್ಯ ಪೋಸ್ಟ್‌ಮ್ಯಾನ್ ರೀತಿಯಲ್ಲಿ ತಂದು ಹಾಕುವುದಲ್ಲ. ನಾವು ಸ್ಟೆನೋಗ್ರಾಫರ್ಸ್ ಅಲ್ಲ. ಇದನ್ನು ತಿಳಿದುಕೊಳ್ಳುವುದು ಅತ್ಯಂತ ಮುಖ್ಯ. ಈ ಅಂಶವನ್ನು ಅರಿಯದೇ ಕರ್ನಾಟಕ ದುಸ್ಥಿತಿಗೆ ತಲುಪಿದರೆ ಪತ್ರಿಕಾರಂಗ ಕಾರಣವಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಗ್ರೀನ್ ಆಸ್ಕರ್ ಪ್ರಶಸ್ತಿ ಪುರಸ್ಕೃತ ಪರಿಸರವಾದಿಗಳಾದ ಕೃಪಾಕರ, ಸೇನಾನಿ, ಕೃತಿಗಳ ಕರ್ತೃ ಸುದೇಶ ದೊಡ್ಡಪಾಳ್ಯ, ವಿಸ್ಮಯ ಬುಕ್‌ಹೌಸ್‌ನ ಪ್ರಕಾಶ್ ಚಿಕ್ಕಪಾಳ್ಯ ಮತ್ತಿತರರು ಹಾಜರಿದ್ದರು.

ವಿಜೃಂಭಣೆಯ ಬಂಡೀಪುರದ ತಾವರೆಕಟ್ಟೆ ಮಹಾದೇಶ್ವರ ಜಾತ್ರೆ



ಬಂಡೀಪುರ,ಫೆ.19(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ತಾವರೆಕಟ್ಟೆ ಮಹದೇಶ್ವರ ದೇವಾಲಯದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವ ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ಬಂಡೀಪುರ ಹಳೆ ಸಫಾರಿ ಕೇಂದ್ರದ ಬಳಿ ಇರುವ ತಾವರೆಕಟ್ಟೆ ಮಹಾದೇಶ್ವರ (ಕಾಡುಮಲ್ಲೇಶ್ವರ) ದೇವಾಲಯ ವರ್ಷಕ್ಕೆ ಒಂದೇ ದಿನ ಮಾತ್ರ ತೆರೆಯಲಿದ್ದು, ಶಿವರಾತ್ರಿ ದಿನ ಬಂಡೀಪುರ ಅರಣ್ಯದ ಸುತ್ತಮುತ್ತಲಿನ ಹಾಡಿ, ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಹಾಡಿಗಳಿಂದ ಬುಡಕಟ್ಟು ಸಮುದಾಯ ಜನರು ಆಗಮಿಸಿ ಪೂಜಿಸುವ ಸಂಪ್ರದಾಯವಿದೆ. ಶಿವರಾತ್ರಿ ದಿನ ರಾತ್ರಿ ಎರಡೂ ರಾಜ್ಯಗಳಿಂದ ಆಗಮಿಸುವ ಬುಡಕಟ್ಟು ಸಮುದಾಯ ಜನರು ಸಂಪ್ರದಾಯದಂತೆ ದೇವಾಲಯದ ಮುಂದೆ ಸಾಂಪ್ರದಾಯಿಕ ಕುಣಿತ ಪ್ರದರ್ಶಿಸಿ, ದೇವರನ್ನು ತಮ್ಮದೇ ಸಂಪ್ರದಾಯದಂತೆ ಆಹ್ವಾನಿಸುವ ವಾಡಿಕೆ ಇದೆ.

ಮರು ದಿನ ವಿವಿಧ ಗ್ರಾಮಗಳ ಜನರು ಹಾಗೂ ಬುಡಕಟ್ಟು ಸಮುದಾಯ ಜನರು ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಿ, ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸುವ ಪದ್ಧತಿ ರೂಢಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಇಂದು ನಡೆದ ಜಾತ್ರಾ ಮಹೋತ್ಸವದಲ್ಲಿ ನೂರಾರು ಮಂದಿ ಗ್ರಾಮಸ್ಥರು ಪಾಲ್ಗೊಂಡಿದ್ದರು. ದೇವಾಲಯಕ್ಕೆ ಬರುವವರಿಗಾಗಿ ಹಳೆ ಕ್ಯಾಂಪಸ್‌ನಿಂದ ಸಫಾರಿ ಬಸ್ ವ್ಯವಸ್ಥೆ ಮಾಡಲಾಗಿತ್ತು. ಗ್ರಾಮಗಳಿಂದ ತಮ್ಮ ವಾಹನಗಳಲ್ಲಿ ಬರುವ ಭಕ್ತರು ಕ್ಯಾಂಪಸ್‌ನಲ್ಲಿ ತಮ್ಮ ವಾಹನ ನಿಲ್ಲಿಸಿ, ಸಫಾರಿ ಬಸ್‌ನಲ್ಲಿ ಉಚಿತವಾಗಿ ತಾವರೆಕಟ್ಟೆ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿ, ಪ್ರಸಾದ ಸ್ವೀಕರಿಸಿದರು.

> **“ ಬಂಡೀಪುರದ ತಾವರೆಕಟ್ಟೆ ಜಾತ್ರೆಗೆ ಸ್ಥಳೀಯರ ಭಾವನೆಗೆ ಧಕ್ಕೆ ಬಾರದಂತೆ ಕಟ್ಟೆಚ್ಚರವಹಿಸಲಾಗಿದೆ. ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ದರ್ಶನ ಪಡೆದಿದ್ದಾರೆ. ಹಳೆ ಕ್ಯಾಂಪಸ್ ನಿಂದ ಉಚಿತವಾಗಿ ವಾಹನ ವ್ಯವಸ್ಥೆ ಮಾಡಲಾಗಿತ್ತು. ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನೂ ಮಾಡಲಾಗಿತ್ತು**
> – ಡಾ.ಪಿ.ರಮೇಶ್ ಕುಮಾರ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಅರಣ್ಯ ಇಲಾಖೆ ವತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಅನ್ನ, ಸಾಂಬರ್, ಪಾಯಸವನ್ನು ಭಕ್ತರಿಗೆ ಉಣಬಡಿಸಲಾಯಿತು. ರಾತ್ರಿಯಿಡಿ ದೇವಾಲಯದ ಬಳಿಯೇ ವಾಸ್ತವ್ಯ ಹೂಡಿದ್ದ ಭಕ್ತರ ಭದ್ರತೆಗೆ ಕ್ರಮ ಕೈಗೊಳ್ಳಲಾಗಿತ್ತು. ದೇವಾಲಯಕ್ಕೆ ಬರುವವರು ಅರಣ್ಯ ಪ್ರದೇಶದತ್ತ ನುಸುಳದಂತೆ ಕಟ್ಟೆಚ್ಚರವಹಿಸಲಾಗಿತ್ತು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಎಸಿಎಫ್‌ಗಳಾದ ನವೀನ್, ಪರಮೇಶ್, ರವೀಂದ್ರ, ಆರ್‌ಎಫ್‌ಗಳಾದ ದೀಪಾ, ನವೀನ್‌ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಬುಡಕಟ್ಟು ಗೀತೆಗೆ ಹೆಜ್ಜೆ ಹಾಕಿದ ಅರಣ್ಯಾಧಿಕಾರಿ: ತಾವರೆಕಟ್ಟೆ ಮಹಾದೇಶ್ವರ ದೇವಾಲಯದ ಬಳಿ ಸಾಂಪ್ರದಾಯಿಕ ಸಂಗೀತಕ್ಕೆ ಹೆಜ್ಜೆ ಹಾಕುತ್ತಿದ್ದ ಬುಡಕಟ್ಟು ಮಹಿಳೆಯರೊಂದಿಗೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿಪ್ರಿಯಾ ಅವರು ಹೆಜ್ಜೆ ಹಾಕಿ ಗಮನ ಸೆಳೆದರು.

ನಿಧನ



ಕೆ.ವಿಠ್ಠಲ್ ದಾಸ್

ಮೈಸೂರು, ಫೆ.19– ಮೈಸೂರಿನ ಕನಕದಾಸನಗರ ನಿವಾಸಿ ಕೆ.ವಿಠ್ಠಲ್ ದಾಸ್(79) ಅವರು ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಭಾನುವಾರ ಬೆಳಗ್ಗೆ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲೂ ಬಿಜೆಪಿ ವಿರುದ್ಧ ಕಾಂಗ್ರೆಸ್ ಪೋಸ್ಟರ್ ಅಭಿಯಾನಕ್ಕೆ ಚಾಲನೆ

'ಬಿಜೆಪಿಯೇ ಭರವಸೆ' ಶೀರ್ಷಿಕೆ ಪೇಂಟಿಂಗ್ ಪಕ್ಕ 'ಕಿವಿ ಮೇಲೆ ಹೂವ' ಪೋಸ್ಟರ್ ಅಂಟಿಸಿದ ಕಾಂಗ್ರೆಸಿಗರು



ಮೈಸೂರಿನಲ್ಲಿ ಕಾಂಗ್ರೆಸ್ ಮುಖಂಡರು ಬಿಜೆಪಿ ವಿರುದ್ಧ ಪೋಸ್ಟರ್ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಿದರು.

ಮೈಸೂರು,ಫೆ.19(ಪಿಎಂ)– ಮೈಸೂರು ನಗರದಲ್ಲೂ ಬಿಜೆಪಿ ವಿರುದ್ಧ ಕಾಂಗ್ರೆಸ್‌ನ ಪೋಸ್ಟರ್ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ನಗರದ ವಿವಿಧೆಡೆ ಕಾಂಪೌಂಡ್, ಕಟ್ಟಡದ ಗೋಡೆಗಳ ಮೇಲೆ ಚಿತ್ರಿಸಿರುವ 'ಬಿಜೆಪಿಯೇ ಭರವಸೆ' ಶೀರ್ಷಿಕೆಯ ಪೇಂಟಿಂಗ್ ಪಕ್ಕದಲ್ಲಿ 'ಭರವಸೆ, ಭರವಸೆ–ಬುರುಡೆ ಭರವಸೆ ಸಾಕು ; ಕಿವಿ ಮೇಲೆ ಹೂವ' ಎಂಬ ಶೀರ್ಷಿಕೆಯ ಪೋಸ್ಟರ್ ಅಂಟಿಸುವ ಅಭಿಯಾನಕ್ಕೆ ಭಾನುವಾರ ಕಾಂಗ್ರೆಸ್ ಮುಖಂಡರು ಚಾಲನೆ ನೀಡಿದರು.

ಮೈಸೂರಿನ ಜೆಕೆ ಮೈದಾನದ ಎದುರಿನ ಕೆಆರ್ ಆಸ್ಪತ್ರೆ (ಚೆಲುವಾಂಬ ಆಸ್ಪತ್ರೆ) ಕಾಂಪೌಂಡ್ ಮೇಲೆ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಫೋಟೋ ಒಳಗೊಂಡಂತೆ ಚಿತ್ರಿಸಿರುವ 'ಬಿಜೆಪಿಯೇ ಭರವಸೆ' ಶೀರ್ಷಿಕೆಯ ಪೇಂಟಿಂಗ್ ಪಕ್ಕದಲ್ಲಿ 'ಕಿವಿ ಮೇಲೆ ಹೂವ' ಎಂಬ ಪೋಸ್ಟರ್ ಅಂಟಿಸುವ ಮೂಲಕ ಬಿಜೆಪಿ ವಿರುದ್ಧ ಕಾಂಗ್ರೆಸ್, ಪೋಸ್ಟರ್ ಅಭಿಯಾನ ಆರಂಭಿಸಿತು. ಬಳಿಕ ಇದೇ ಗೋಡೆಯ ಇನ್ನೊಂದು ಬದಿಯಲ್ಲಿ ಅಂಟಿಸಿದ್ದ ಪ್ರಧಾನಿ ನರೇಂದ್ರ ಮೋದಿ ಫೋಟೋ ಒಳಗೊಂಡ ಪೇಂಟಿಂಗ್ ಪಕ್ಕದಲ್ಲೂ ಪೋಸ್ಟರ್ ಅಂಟಿಸಲಾಯಿತು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಎಐಸಿಸಿ–ಕೆಪಿಸಿಸಿ ನಿರ್ದೇಶನದ ಮೇರೆಗೆ ಮೈಸೂರು ನಗರ–ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಪೋಸ್ಟರ್ ಅಭಿಯಾನಕ್ಕೆ ಚಾಲನೆ ನೀಡಿದ್ದೇವೆ. ನಗರದ ಎಲ್ಲಾ ವಾರ್ಡ್‌ಗಳಲ್ಲಿ ಬಿಜೆಪಿ ಪೇಂಟಿಂಗ್ ಪಕ್ಕದಲ್ಲಿ ನಮ್ಮ ಪಕ್ಷದ ಪಾಲಿಕೆ ಸದಸ್ಯರು, ಮಾಜಿ ಸದಸ್ಯರ ನೇತೃತ್ವದಲ್ಲಿ ಪೋಸ್ಟರ್ ಅಂಟಿಸುವ ಅಭಿಯಾನ ಮುಂದುವರೆಯಲಿದೆ ಎಂದು ತಿಳಿಸಿದರು. ಐತಿಹಾಸಿಕ ನಗರವಾದ ಇಡೀ ಮೈಸೂರಿನಲ್ಲಿ ಬಿಜೆಪಿ ಪೇಂಟಿಂಗ್ ರಾರಾಜಿಸುತ್ತಿವೆ. ನಿರ್ಬಂಧಿತ ಪ್ರದೇಶ, ಸರ್ಕಾರಿ ಕಟ್ಟಡಗಳೂ ಒಳಗೊಂಡಂತೆ ಎಲ್ಲೆಡೆ ಬಿಜೆಪಿ ಪೇಂಟಿಂಗ್ ವಿಜೃಂಭಿಸುವಂತೆ ಮಾಡಿದ್ದಾರೆ. ಕಾನೂನು ಉಲ್ಲಂಘಿಸಿ ಈ ರೀತಿ ಮಾಡಿದ್ದಾರೆ ಎಂದು ದೂರಿದರು. ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಬಿಜೆಪಿಯವರ ಬುರುಡೆ ಭರವಸೆ ಬಗ್ಗೆ ಜನಸಾಮಾನ್ಯರು ಅರ್ಥ ಮಾಡಿಕೊಳ್ಳಬೇಕು. ಕಳೆದ ಬಾರಿಯ 2.65 ಲಕ್ಷ ಕೋಟಿ ರಾಜ್ಯ ಬಜೆಟ್‌ನಲ್ಲಿ ಕೇವಲ 50ರಷ್ಟು ಭರವಸೆ ಈಡೇರಿಸಿಲ್ಲ. ಅದರಲ್ಲೂ ಎಸ್‌ಸಿ–ಎಸ್‌ಟಿಗೆ ಮೀಸಲಿಟ್ಟ ಅನುದಾನದಲ್ಲಿ ಶೇ.15ರಷ್ಟರ ಮೇಲೆ ಬಳಸಿಕೊಂಡಿಲ್ಲ. ರಾಜ್ಯದಲ್ಲಿ 40 ಪರ್ಸೆಂಟ್ ಲಂಚಾವತಾರದ ಭ್ರಷ್ಟ ಸರ್ಕಾರ ಇದೆ. ಕಳೆದ 8 ತಿಂಗಳಿಂದ ಅಧಿಕಾರಿ ವರ್ಗ, ಗುತ್ತಿಗೆದಾರರ ಸಂಘದ ಈ ಆರೋಪಕ್ಕೆ ಸರ್ಕಾರದಿಂದ ಉತ್ತರವೇ ಇಲ್ಲ ಎಂದು ಕಿಡಿಕಾರಿದರು.

ಇಡೀ ರಾಜ್ಯದಲ್ಲಿ ಸುಮಾರು 5,683 ಕ್ರಿಮಿನಲ್ ಕೇಸ್‌ಗಳು ದಾಖಲಾಗಿವೆ ಎಂದು ಬಜೆಟ್ ಮಂಡನೆ ವೇಳೆ ಮುಖ್ಯಮಂತ್ರಿಗಳು ಸದನಕ್ಕೆ ತಿಳಿಸಿದ್ದಾರೆ. ಇದು ಬಿಜೆಪಿ ಭರವಸೆಯೇ? ಇವರು ರಾಜ್ಯವನ್ನು 30 ವರ್ಷ ಹಿಂದಕ್ಕೆ ತಳ್ಳಿದ್ದಾರೆ. ಕಳೆದ ಮೂರೂವರೆ ವರ್ಷಗಳ ಬಿಜೆಪಿ ಆಡಳಿತದಲ್ಲಿ 3 ಲಕ್ಷ ಕೋಟಿ ಸಾಲ ಮಾಡಲಾಗಿದೆ. ರಾಜ್ಯ ಸರ್ಕಾರವು ರಾಜ್ಯದ ಪ್ರತಿಯೊಬ್ಬರ ಮೇಲೆ ಒಂದೂವರೆ ಲಕ್ಷ ರೂ. ಸಾಲ ಹೊರಿಸಿದ್ದರೆ, ಕೇಂದ್ರ ಸರ್ಕಾರವು ಮೂರೂವರೆ ಲಕ್ಷ ಸಾಲ ಹೊರಿಸಿದೆ. ಒಟ್ಟಾರೆ ರಾಜ್ಯದ ಪ್ರತಿ ಪ್ರಜೆಯ ಮೇಲೆ ಇವರು 5 ಲಕ್ಷ ರೂ. ಸಾಲ ಹೊರಿಸಿದ್ದಾರೆ. ಆ ಮೂಲಕ ಅದಾನಿ–ಅಂಬಾನಿ ಉದ್ಧಾರ ಮಾಡುತ್ತಿದ್ದಾರೆ. ಇದೇ ಬಿಜೆಪಿ ಭರವಸೆ. ಹಾಗಾಗಿ ನಮ್ಮ ಈ ಪೋಸ್ಟರ್ ಅಭಿಯಾನವನ್ನು ಜನಸಾಮಾನ್ಯರು ಮುನ್ನಡೆಸಬೇಕು ಎಂದು ಕೋರಿದರು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ಮಾಧ್ಯಮ ವಕ್ತಾರ ಕೆ.ಮಹೇಶ್, ಪಕ್ಷದ ಮುಖಂಡರಾದ ಹೆಡತಲೆ ಮಂಜುನಾಥ್, ಶಿವಪ್ರಸಾದ್, ಗಿರೀಶ್, ಹುಣಸೂರು ಬಸವಣ್ಣ, ಸಂತೋಷ್, ರಾಹುಲ್, ಮನೋಜ್ ಮತ್ತಿತರರು ಹಾಜರಿದ್ದರು.

ಅಧಿಕಾರಿ ವರ್ಗದ ವಿರುದ್ಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕಿಡಿ

ರಾಜ್ಯ ಮಾತ್ರವಲ್ಲದೆ, ಮೈಸೂರಿನ ಎಲ್ಲಡೆ ಬಿಜೆಪಿಯವರು ಕಾನೂನು ಉಲ್ಲಂಘಿಸಿ ಈ ರೀತಿ ಪೇಂಟಿಂಗ್ ಮಾಡಿಸಿದ್ದು, ಇದರ ವಿರುದ್ಧ ಸುಮೊಟೊ (ಸ್ವಯಂ ಪ್ರೇರಿತ) ಕೇಸ್ ಏಕೆ ದಾಖಲಿಸಲಿಲ್ಲ ಎಂದು ಅಧಿಕಾರಿ ವರ್ಗದ ವಿರುದ್ಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕಿಡಿಕಾರಿದರು.

ಪೋಸ್ಟರ್, ಬ್ಯಾನರ್ ಅಳವಡಿಸಲು ಪಾಲಿಕೆಯಿಂದ ಅನುಮತಿ ಪಡೆಯಬೇಕೆಂಬ ನಿಯಮವಿದೆ. ಸ್ವಯಂ ಪ್ರೇರಿತವಾಗಿ ಅಳವಡಿಸಿದರೆ ಅದರ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿದೆ. ನಾವು 'ಪೇ ಸಿಎಂ' ಪೋಸ್ಟರ್ ಅಂಟಿಸಿದ ಕಾರಣಕ್ಕೆ ರಾಜ್ಯಾದ್ಯಂತ ನಮ್ಮ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಸ್ವಯಂ ಪ್ರೇರಿತವಾಗಿ ಆಯಾಯ ಉಪವಿಭಾಗಾಧಿಕಾರಿಗಳಿಂದ ದೂರು ಪಡೆದು ನಮ್ಮವರ ವಿರುದ್ಧ ಪ್ರಕರಣ ದಾಖಲಿಸಿದ ಪೊಲೀಸರು ಈಗ ಏಕೆ ಸುಮ್ಮನಿದ್ದಾರೆ ಎಂದು ಪ್ರಶ್ನಿಸಿದರು.

ಪಾಲಿಕೆ, ಜಿಲ್ಲಾಡಳಿತ, ಪೊಲೀಸ್ ಇಲಾಖೆಯವರೇನು ಬಿಜೆಪಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರಾ? ಅಥವಾ ಸಾರ್ವಜನಿಕ ಸೇವೆ ಮಾಡುತ್ತಿದ್ದಾರಾ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಒಂದು ಪಕ್ಷದ ಪರವಾಗಿ ಸರ್ಕಾರಿ ನೌಕರರು ಕೆಲಸ ಮಾಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ. ಎಷ್ಟೇ ಒತ್ತಡವಿದ್ದರೂ ಪಕ್ಷಾತೀತವಾಗಿ ಕೆಲಸ ಮಾಡಬೇಕು. ಇನ್ನು ಎರಡು ತಿಂಗಳು ಮಾತ್ರ. ಮುಂದೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೆ ಎಂದು ಎಚ್ಚರಿಕೆ ನೀಡಿದರು.

ಪಕ್ಷ ಸಂಘಟನೆಯಲ್ಲಿ ಯುವಕರು ಹೆಚ್ಚು ಸಕ್ರಿಯರಾಗಬೇಕು

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್



ಮೈಸೂರಿನ ಆಲನಹಳ್ಳಿಯಲ್ಲಿ ಕಾಂಗ್ರೆಸ್ ಮುಖಂಡ ಚೇತನ್ ಆರಂಭಿಸಿದ ಪಕ್ಷದ ಕಚೇರಿಯನ್ನು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಕೆಪಿಸಿಸಿ ಸದಸ್ಯ ಕೆ.ಮರೀಗೌಡ, ಚಾಮುಂಡೇಶ್ವರಿ ಬ್ಲಾಕ್ ಅಧ್ಯಕ್ಷ ಸತೀಶ್ ಕುಮಾರ್ ಮತ್ತಿತರರ ಗ್ಯಾರೊಡಗೂಡಿ ಉದ್ಘಾಟಿಸಿದರು.

ಮೈಸೂರು, ಫೆ.19(ಎಸ್‌ಬಿಡಿ)– ಪಕ್ಷ ಸಂಘಟನೆಯಲ್ಲಿ ಯುವ ಕಾರ್ಯಕರ್ತರು ಹೆಚ್ಚು ಸಕ್ರಿಯರಾಗಬೇಕು ಎಂದು ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಹೇಳಿದರು.

ಮೈಸೂರಿನ ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ವ್ಯಾಪ್ತಿಯ ಆಲನಹಳ್ಳಿಯಲ್ಲಿ ಭಾನುವಾರ ಕಾಂಗ್ರೆಸ್ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಡಿ.ದೇವರಾಜ ಅರಸು ಅವರ ನಂತರ ರಾಜ್ಯದ ಮುಖ್ಯಮಂತ್ರಿಯಾಗಿ 5 ವರ್ಷ ಯಶಸ್ವಿ ಆಡಳಿತ ನಡೆಸಿರುವ ಸಿದ್ದರಾಮಯ್ಯನವರು ಮಾದರಿ ರಾಜಕಾರಣಿ. ಅವರ ಆಡಳಿತಾವಧಿಯಲ್ಲಾಗಿರುವ ಯೋಜನೆಗಳು, ಕಾರ್ಯಕ್ರಮಗಳು ಜನರ ಮನಸ್ಸಿನಲ್ಲಿ ಹಸಿರಾಗಿದೆ. ನಾಡಿನ ಹಿರಿಯ ರಾಜಕೀಯ ಮುತ್ಸದ್ದಿ ಸಿದ್ದರಾಮಯ್ಯನವರ ಶಕ್ತಿ ಹೆಚ್ಚಿಸುವ ನಿಟ್ಟಿನಲ್ಲಿ ಯುವ ಕಾರ್ಯಕರ್ತರ ಪಾತ್ರ ಪ್ರಮುಖವಾಗಿದೆ. ಪಕ್ಷದ ಸಿದ್ಧಾಂತದ ಮೇಲೆ ನಂಬಿಕೆಯುಳ್ಳ ಯುವಕರು ಕಾಂಗ್ರೆಸ್ ಸೇರ್ಪಡೆಗೊಂಡು ಸಂಘಟನೆಯಲ್ಲಿ ಸಕ್ರಿಯರಾಗಬೇಕು ಎಂದರು.

ಕೆಪಿಸಿಸಿ ಸದಸ್ಯ ಕೆಮರೀಗೌಡ ಮಾತನಾಡಿ, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ವ್ಯಾಪ್ತಿಯಲ್ಲಿ ಆಲನಹಳ್ಳಿ ಗ್ರಾಮ ಪಂಚಾಯ್ತಿ ಪ್ರಮುಖವಾಗಿದ್ದು, ಈ ಭಾಗದ ಮುಖಂಡರು ಎಂದಿಗೂ ಕಾಂಗ್ರೆಸ್ ಪರವಾಗಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ 337 ಬೂತ್‌ಗಳಲ್ಲಿ ತಲಾ 13 ಸದಸ್ಯರು, ಓರ್ವ ಬಿಎಲ್‌ಎ–2 ಸೇರಿದಂತೆ ಒಟ್ಟು 4718 ಮಂದಿ ಶಿಸ್ತಿನ ಸಿಪಾಯಿಗಳಂತೆ ಪಕ್ಷ ಸಂಘಟನೆಗೆ ಶ್ರಮಿಸುತ್ತಿದ್ದಾರೆ. 138 ವರ್ಷಗಳ ಇತಿಹಾಸವುಳ್ಳ ಕಾಂಗ್ರೆಸ್, 65 ವರ್ಷಗಳ ಆಡಳಿತ ನಡೆಸಿ ದೇಶದ ಪ್ರಗತಿಗಾಗಿ ದುಡಿದಿದೆ. ಐತಿಹಾಸಿಕ ಪಕ್ಷದ ತತ್ವ–ಸಿದ್ಧಾಂತಗಳನ್ನು ಯುವ ಕಾರ್ಯಕರ್ತರು ಹೆಚ್ಚು ಪ್ರಚುರಪಡಿಸಬೇಕು ಎಂದು ತಿಳಿಸಿದರು.

ಬಿಜೆಪಿ ಸರ್ಕಾರ ಕೇಂದ್ರ ಮತ್ತು ರಾಜ್ಯದಲ್ಲಿ ಜನ ವಿರೋಧಿ ಆಡಳಿತ ನಡೆಸುತ್ತಿದೆ. ರೈತರು, ಬಡವರು, ಮಧ್ಯಮ ವರ್ಗದವರ ಜೀವನವನ್ನು ದುಸ್ತರಗೊಳಿಸಿದೆ. ಈ ಬಗ್ಗೆ ಜನರಲ್ಲಿ ಮನವರಿಕೆ ಮಾಡಿಕೊಡಬೇಕು. ಹಾಗೆಯೇ ಕಾಂಗ್ರೆಸ್‌ನ ಜನಪರ ಯೋಜನೆಗಳನ್ನು ತಿಳಿಸಿಕೊಡಬೇಕು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಇನ್ನಿತರ ನಾಯಕರು ಮುಂದಿನ ವಿಧಾನಸಭಾ ಚುನಾವಣಾ ಪ್ರಣಾಳಿಕೆಯ ಮೂರು ಮಹತ್ವದ ಕಾರ್ಯಕ್ರಮ ಘೋಷಿಸಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಉಚಿತ, ಕುಟುಂಬದ ಮುಖ್ಯಸ್ಥೆಗೆ 2 ಸಾವಿರ ರೂ. ಮಾಸಿಕ ಸಹಾಯಧನ, ಕುಟುಂಬದ ಪ್ರತಿ ಸದಸ್ಯರಿಗೆ 10 ಕೆಜಿ ಅಕ್ಕಿ ವಿತರಿಸಲಾಗುವುದು ಎನ್ನುವುದನ್ನು ಪ್ರಸಾರ ಮಾಡಬೇಕೆಂದು ಕಿವಿಮಾತು ಹೇಳಿದರು. ಇದೇ ವೇಳೆ ಪಕ್ಷದ ಕಚೇರಿ ತೆರೆದಿರುವ ಯುವ ಮುಖಂಡ ಚೇತನ್‌ಗೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ಅಭಿನಂದಿಸಲಾಯಿತು. ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜೆ.ಸತೀಶ್ ಕುಮಾರ್, ಮಾವಿನಹಳ್ಳಿ ಸಿದ್ದೇಗೌಡರು, ಬೀರಿಹುಂಡಿ ಬಸವಣ್ಣ, ಮಾದೇಗೌಡರು, ಕೆಂಪನಾಯಕ, ಆಲನಹಳ್ಳಿ ಗ್ರಾಪಂನ ಎಂ.ಪ್ರಸಾದ್, ನಾಡನಹಳ್ಳಿ ರವಿ, ಕೆಪಿಸಿಸಿ ರಾಜ್ಯ ಸಂಚಾಲಕ ಪುಟ್ಟಸ್ವಾಮಿ, ಹಿರಿಯ ಮುಖಂಡರಾದ ಎಂ.ಬಿ.ನಾಯಕ್, ಮುಖಂಡರಾದ ರಾಜಣ್ಣ, ಎಸ್‌ಟಿ ಘಟಕದ ಅನಂತು, ರಾಜುರವರು, ನಿಂಗರಾಜು, ಕಾರ್ತಿಕ್, ಮಹೇಶ್, ಸುರೇಶ್, ಶಂಕರಪ್ಪ, ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಇಂದು ವಿದ್ಯುತ್ ಅದಾಲತ್

ಮೈಸೂರು, ಫೆ.19– ಜ್ಯೋತಿನಗರ, ನರಸಿಂಹರಾಜ ಮೊಹಲ್ಲಾ ಚಾಮುಂಡಿಪುರ ಹಾಗೂ ವರುಣಾ ಉಪವಿಭಾಗಗಳ ವ್ಯಾಪ್ತಿಯಲ್ಲಿರುವ ಗ್ರಾಹಕರಿಗೆ ಫೆ.20ರ ಸೋಮವಾರ ಬೆಳಗ್ಗೆ 11 ಗಂಟೆಗೆ ಎಲ್ಲಾ ಉಪವಿಭಾಗ ಕಚೇರಿಗಳಲ್ಲಿ ವಿದ್ಯುತ್ ಅದಾಲತ್ ನಡೆಸಲು ಉದ್ದೇಶಿಸಲಾಗಿದೆ.

ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳು ಇದ್ದಲ್ಲಿ ಆಯಾಯ ಉಪವಿಭಾಗದ ವ್ಯಾಪ್ತಿಯ ಆಯ್ದ ಗ್ರಾಮಗಳಲ್ಲಿ ನಡೆಯುವ ವಿದ್ಯುತ್ ಅದಾಲತ್ ಕಾರ್ಯಕ್ರಮದಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ.

ಚಾಮುಂಡಿಪುರಂ ಉಪವಿಭಾಗದ ಸೋಮೇಶ್ವರಪುರ, ವರುಣಾ ಉಪವಿಭಾಗದ ಗಳಿಗರಹುಂಡಿ, ಕೇಂದ್ರ ಉಪವಿಭಾಗ, ಚಾಮುಂಡಿಪುರಂ ಉಪವಿಭಾಗದ ತಳೂರು, ಜ್ಯೋತಿನಗರ ಉಪವಿಭಾಗದ ಜ್ಯೋತಿನಗರ ಹಾಗೂ ನರಸಿಂಹರಾಜ ಮೊಹಲ್ಲಾ ಉಪವಿಭಾಗದ ಬೆಲವತ್ತ ಪ್ರದೇಶಗಳಲ್ಲಿ ವಿದ್ಯುತ್ ಅದಾಲತ್ ನಡೆಯಲಿದೆ ಎಂದು ಸೆಸ್ಕಾಂ ಪ್ರಕಟಣೆ ತಿಳಿಸಿದೆ.

ಪತ್ನಿಯ ಕೊಂದ ಪತಿರಾಯನಿಗೆ ಜೀವಾವಧಿ ಶಿಕ್ಷೆ

ಮೈಸೂರು, ಫೆ.19–ಕಪಾಳಕ್ಕೆ ಹೊಡೆದು, ವೇಲ್‌ನಿಂದ ಕುತ್ತಿಗೆ ಬಿಗಿದು ಪತ್ನಿಯನ್ನು ಕೊಲೆ ಮಾಡಿದ್ದ ಪತಿರಾಯನಿಗೆ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಹುಣಸೂರು ತಾಲೂಕು ರಾಮೇನಹಳ್ಳಿಯ ನಿವಾಸಿ ಕಂಚೀಗೌಡ ಎಂಬಾತನೇ ಜೀವಾವಧಿ ಶಿಕ್ಷೆಗೆ ಗುರಿಯಾದ ಅಪರಾಧಿ.

ಬೊಪ್ಪನಹಳ್ಳಿ ಗ್ರಾಮದ ಬೊಮ್ಮೇಗೌಡರ ಮಗಳಾದ ಸುಂದರಮ್ಮ ಅವರನ್ನು ರಾಮೇನಹಳ್ಳಿ ಗ್ರಾಮದ ಕಂಚೀಗೌಡ ವಿವಾಹವಾಗಿದ್ದು, ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಕಂಚೀಗೌಡ ಪತ್ನಿಯ ಮೇಲೆ ಸಂಶಯಪಟ್ಟು, ಆಕೆಗೆ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡುತ್ತಿದ್ದ.

ಇದರಿಂದ ಬೇಸರಗೊಂಡ ಸುಂದರಮ್ಮ ಒಬ್ಬಳು ಮಗಳನ್ನು ಮೈಸೂರಿನ ಮಹಾರಾಣಿ ಕಾಲೇಜಿಗೆ ಸೇರಿಸಿ, ಮತ್ತೊಬ್ಬಳು ಮಗಳೊಂದಿಗೆ ಬೆಂಗಳೂರಿಗೆ ತೆರಳಿ, ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿ ಜೀವನ ನಡೆಸುತ್ತಿದ್ದು, ಆಗಾಗ, ಹಬ್ಬ–ಹರಿದಿನಗಳಲ್ಲಿ ರಾಮೇನಹಳ್ಳಿಗೆ ಬಂದು–ಹೋಗುತ್ತಿದ್ದರು.

ಅದರಂತೆ 2019ರ ಜೂ.8ರಂದು ಸುಂದರಮ್ಮ ಗ್ರಾಮದಲ್ಲಿ ನಡೆಯುತ್ತಿದ್ದ ಮಾರಿ ಹಬ್ಬಕ್ಕೆ ಬಂದಿದ್ದಳು. ಮರುದಿನ ಜೂ.9ರಂದು ರಾತ್ರಿ 9 ಗಂಟೆ ಸಮಯದಲ್ಲಿ ಪತಿ ಕಂಚೀಗೌಡ ಬಂದು ಪತ್ನಿಗೆ ಬೆಂಗಳೂರಿಗೆ ಹೋಗದಂತೆ ಜಗಳ ಮಾಡಿದ್ದ. ಜೂ.10ರಂದು ಸುಂದರಮ್ಮ ಮನೆಯಲ್ಲಿದ್ದಾಗ, ಕಂಚೀಗೌಡ ಮನೆಗೆ ಬಂದು ಬೆಂಗಳೂರಿಗೆ ಹೋಗದಂತೆ ಮತ್ತೆ ಜಗಳವಾಡಲಾರಂಭಿಸಿದ.

ನಾನು ಊರಿನಲ್ಲಿ ನಿನ್ನ ಜೊತೆ ಇರಲ್ಲ. ಇಲ್ಲಿದ್ದರೆ ನೀನು ಜಗಳ ಮಾಡಿ ಹಿಂಸೆ ಕೊಡ್ತೀಯಾ. ಆದ್ದರಿಂದ ಬೆಂಗಳೂರಿಗೇ ಹೋಗುತ್ತೇನೆ ಎಂದು ಸುಂದರಮ್ಮ ತಿಳಿಸಿದ್ದರಿಂದ ಕುಪಿತಗೊಂಡ ಕಂಚೀಗೌಡ, ಆಕೆಯ ಕಪಾಳಕ್ಕೆ ಬಲವಾಗಿ ಹೊಡೆದ. ಇದರಿಂದ ಆಕೆ ಸ್ಥಳದಲ್ಲೇ ಕುಸಿದು ಬಿದ್ದಾಗ, ಅಲ್ಲೇ ಬಿದ್ದಿದ್ದ ವೇಲ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದ.

ಈ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಅಂದಿನ ಇನ್ಸ್‌ಪೆಕ್ಟರ್ ಪೂವಯ್ಯ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಈ ಸಂಬಂಧ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಅವರು ಕಂಚೀಗೌಡನಿಗೆ ಜೀವಾವಧಿ ಶಿಕ್ಷೆ ಮತ್ತು 17 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಸರ್ಕಾರದ ಪರವಾಗಿ 5ನೇ ಅಧಿಕ ಸರ್ಕಾರಿ ಅಭಿಯೋಜಕರಾದ ನಾಗಪ್ಪ ಸಿ.ನಾಕ್‌ಮನ್ ಅವರು ವಾದ ಮಂಡಿಸಿದ್ದರು.


ರಾಮನಗರ ಬಳಿ ಮುಂಜಾನೆ ಕಾರು ಅಪಘಾತ: ಮೈಸೂರಿನ ಇಬ್ಬರಿಗೆ ಗಾಯ

ಮೈಸೂರು, ಫೆ.19(ಆರ್‌ಕೆ)–ರಾಮನಗರ ಬಳಿ ಇಂದು ಮುಂಜಾನೆ ಸಂಭವಿಸಿದ ಕಾರು ಅಪಘಾತದಲ್ಲಿ ಮೈಸೂರಿನ ಇಬ್ಬರು ಗಾಯಗೊಂಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರ ನಿವಾಸಿ ವಿಮಲಾ ಹಾಗೂ ಅವರ ಪುತ್ರಿ ಅಪೂರ್ವ ಗಾಯಗೊಂಡವರಾಗಿದ್ದು, ಅವರನ್ನು ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಶಿವರಾತ್ರಿ ರುದ್ರ ಪೂಜೆಗೆಂದು ಚನ್ನಪಟ್ಟಣ ಬಳಿ ಇರುವ ಆರ್ಟ್ ಆಫ್ ಲಿವಿಂಗ್ ಕೇಂದ್ರಕ್ಕೆ ತೆರಳಿದ್ದ ಅವರು, ಹುಂಡೈ ವೆನ್ಯೂ ಕಾರಿನಲ್ಲಿ ಮೈಸೂರಿಗೆ ಬರುತ್ತಿದ್ದಾಗ ಇಂದು ಮುಂಜಾನೆ ಸುಮಾರು 2.30 ಗಂಟೆ ವೇಳೆ ರಾಮನಗರ ಸಮೀಪ ಚರ್ಚ್ ಎದುರು ಬ್ಯಾರಿಕೇಡ್‌ಗೆ ಕಾರು ಅಪ್ಪಳಿಸಿತು.

ನಾನು ಕಾರು ಚಾಲನೆ ಮಾಡಿಕೊಂಡು ಬರುತ್ತಿದ್ದೆ. ಪುತ್ರಿ ಅಪೂರ್ವ ಹಿಂದಿನ ಸೀಟಿನಲ್ಲಿ ಮಲಗಿದ್ದಳು. ಆ ವೇಳೆ ಹಿಂದಿನಿಂದ ವೇಗವಾಗಿ ಬಂದ ವಾಹನವೊಂದು ರಭಸದಲ್ಲಿ ಮುಂದೆ ಹೋಗಿದ್ದಷ್ಟೇ ಗೊತ್ತು. ನಾನು ಕಣ್ಣು ಬಿಟ್ಟಾಗ ಜನರು ನನ್ನನ್ನು ಕಾರಿನಿಂದ ಕೆಳಗಿಳಿಸುತ್ತಿದ್ದರು. ಆ ನಡುವೆ ಏನಾಯಿತೆಂಬುದೇ ತಿಳಿಯಲಿಲ್ಲ ಎಂದು ವಿಮಲ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ವಾಹನ ಮುಂದೆ ಪಾಸಾದಾಗ ಆ ರಭಸದಲ್ಲಿ ನಾನು ನಿಯಂತ್ರಣ ಕಳೆದುಕೊಂಡು ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದು ಕಾರು ನಿಂತಿರಬಹುದು. ನನಗೆ ಅಷ್ಟೇನೂ ಗಾಯಗಳಾಗಿಲ್ಲ. ಆದರೆ ಪುತ್ರಿ ಗಾಯಗೊಂಡಿದ್ದಾಳೆ. ರಾಮನಗರ ಠಾಣೆ ಪೊಲೀಸರು ನನ್ನ ವಾಹನವನ್ನು ಟೋ ಮಾಡಿಕೊಂಡು ಹೋಗಿದ್ದಾರೆ ಎಂದು ವಿಮಲ ಅವರು ನುಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.2.2023 ಸೋಮವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ :** 51ನೇ ವರ್ಷದ ಮಹಾ ಶಿವರಾತ್ರಿ ಪೂಜೆ, ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಕಾಳಸರ್ಪ ಶಾಂತಿ, ಮೃತ್ಯುಂಜಯ ಹೋಮ, ಮಾಂಗಲ್ಯ ಮಂಗಳ ಚಂಡಿಕಾ ಹೋಮ, ಸ್ವಯಂವರ ಪಾರ್ವತಿ ಹೋಮ, ದಕ್ಷಿಣಾಮೂರ್ತಿ, ಧನ್ವಂತರಿ ಹೋಮ, ಸುಬ್ರಮಣ್ಯ ಕುಜ ಶಾಂತಿ ಹೋಮ, ಸ್ಥಳ: ದೇವಸ್ಥಾನದ ಆವರಣ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ೦ಯಾತ್ರೆ: ಲೇಖನ ಮತ್ತು ಪ್ರಸ್ತುತಿ:– ಡಾ.ಬಿ.ಎನ್. ಮನೋರಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾ೦ಯನ– ಸಿ. ವಿಶ್ವನಾಥ್, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ– ಡಾ.ಜ್ಯೋತಿ ಶಂಕರ್, 7.25 ಭಾವಗೀತೆ: ಎಲ್.ಎನ್. ಶಾಸ್ತ್ರಿ, 9.00 ನೆನಪಿನಂಗಳ: ಹಿರಿಯ ಸಾಹಿತಿ ಚದುರಂಗ ಅವರೊಂದಿಗೆ ಜಿ.ಹೆ. ನಾಯಕ್ ಅವರು ನಡೆಸಿದ್ದ ಸಂವಾದ, 10.00 ಲಯ ಸಂಭ್ರಮ– ಕರ್ನಾಟಕದ ವಿಶೇಷ ನೃತ್ಯ ಸಂಪ್ರದಾಯವಾದ ಗೌಂಡಲಿ ಮತ್ತು ಪೇರಣಿಯಲ್ಲಿ ಮೃದಂಗದ ಪಾತ್ರ ಕುರಿತು ತಿಳಿಸಿಕೊಡುತ್ತಾರೆ ಡಾ. ತುಳಸೀ ರಾಮಚಂದ್ರ ಪ್ರಸ್ತುತಿ– ಹೆಚ್.ಎಲ್. ಶಿವಶಂಕರಸ್ವಾಮಿ, 2.30 ದೇವರನಾಮ– ವಿಜಯಲಕ್ಷ್ಮಿ ಆರ್. ವೇದವಲ್ಲಿ.

ಮಧ್ಯಾಹ್ನ: 12.45 ನಮ್ಮ ಆರೋಗ್ಯ: ಸುಸ್ಥಿರ ಆರೋಗ್ಯಕ್ಕಾಗಿ ಆಹಾರ ಕುರಿತು ಡಾ.ಟಿ. ಶಿವಕುಮಾರ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆ: ವಾಣಿ ಸತೀಶ್, 3.00 ಡಾ. ಆರ್.ಎನ್. ಶ್ರೀಲತಾ– ಹಾಡುಗಾರಿಕೆ

ಸಂಜೆ: 4.00 ಮಹಿಳಾರಂಗ: 'ವಿದ್ಯಾ ದದಾತಿ ವಿನಯಂ' ಈ ಕುರಿತು ಮಾತನಾಡುತ್ತಾರೆ ಹೆಚ್.ಎಸ್. ಸಾವಿತ್ರಿ, 2. ನೈಸರ್ಗಿಕ ಅಲಂಕಾರ ಸಾಧನಗಳು ಕುರಿತು ತಿಳಿಸುತ್ತಾರೆ ಡಾ. ಶಾಂತಲಾ ಪ್ರಿಯದರ್ಶಿನಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ 'ಕಿಸಾನ್ ವಾಣಿ' ಸಿರಿಧಾನ್ಯಗಳ ಸಂಸ್ಕರಣೆ ಹಾಗೂ ಮೌಲ್ಯ ವರ್ಧನೆಗೆ C.F.T.R.I.ನ ತಂತ್ರಜ್ಞಾನಗಳು ಕುರಿತು ಮಾತನಾಡುತ್ತಾರೆ ಡಾ.ಆರ್.ವಿ. ಶ್ರೀಧರ್. **ರಾತ್ರಿ:** ಡಾ.ಆರ್.ವಿ. ಶ್ರೀಧರ್, 9.30 ವಿದ್ವಮಾನ, 10.30 ಸವಿನೆನಪು.

■ **ಸಾರ್ವಜನಿಕ ಶಿಕ್ಷಣ ಇಲಾಖೆ (ಬೆಂಗಳೂರು), ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ (ಮೈಸೂರು), ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ (ಮೈಸೂರು) :** ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆಯಿಂದ.



ಮಾ.31ರಿಂದ ಐಪಿಎಲ್ ಪಂದ್ಯಾವಳಿ

ಬೆಂಗಳೂರು, ಫೆ.19– ಪ್ರಸಕ್ತ ಸಾಲಿನ 16ನೇ ಆವೃತ್ತಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ವೇಳಾಪಟ್ಟಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶುಕ್ರವಾರ ಬಿಡುಗಡೆಗೊಳಿಸಿದೆ. ಮಾ.31ರಂದು ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ಸ್ ಗುಜರಾತ್ ಟೈಟನ್ಸ್ ಮತ್ತು ಮಾಜಿ ಚಾಂಪಿಯನ್ಸ್ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಅಹ್ಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಕಾದಾಟ ನಡೆಸಲಿವೆ.



ಕೊರೊನಾ ಹಿನ್ನೆಲೆಯಲ್ಲಿ ಕಳೆದ 3 ವರ್ಷಗಳಿಂದ ಹಳೇ ಮಾದರಿಯಲ್ಲಿ ಟೂರ್ನಿ ಆಯೋಜಿಸಲು ಸಾಧ್ಯವಾಗಿ ರಲಿಲ್ಲ. ಈ ಬಾರಿ ಹಳೇ ಮಾದರಿಯಲ್ಲಿ ಹೋಮ್ ಅಂಡ್ ಅವೇ ರೀತಿಯಲ್ಲಿ ಪಂದ್ಯಗಳ ಆಯೋಜನೆ ಆಗಲಿದೆ. ಬೆಂಗ ಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬರೋಬ್ಬರಿ 3 ವರ್ಷಗಳ ಬಳಿಕ ಐಪಿಎಲ್ ಪಂದ್ಯಗಳನ್ನು ಅಭಿಮಾನಿಗಳು ಕಣ್ತುಂಬಿ ಕೊಳ್ಳಲು ಈ ಮೂಲಕ ಸಾಧ್ಯವಾಗಲಿದೆ.

ಟೂರ್ನಿಯನ್ನು ಆಯೋಜಿಸಲು 12 ನಗರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಹ್ಮದಾಬಾದ್, ಮೊಹಾಲಿ, ಲಖನೌ, ಹೈದರಾಬಾದ್, ಬೆಂಗಳೂರು, ಚೆನ್ನೈ, ಡೆಲ್ಲಿ, ಕೋಲ್ಕತಾ, ಜೈಪುರ, ಮುಂಬೈ, ಗುವಾಹಟಿ ಮತ್ತು ಧರ್ಮಶಾಲಾ ಕ್ರೀಡಾಂಗಣಗಳಲ್ಲಿ ಪಂದ್ಯಗಳನ್ನು ಆಯೋಜಿಸಲು ಬಿಸಿಸಿಐ ಮುಂದಾಗಿದೆ.

ಏ.2ರಂದು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧದ ಕಣಕ್ಕಿಳಿಯುವ ಮೂಲಕ ರಾಯಲ್ ಚಾಲೆಂಜರ್ಸ್ ಬೆಂಗಳೂರು ತನ್ನ ಅಭಿಯಾನ ಆರಂಭಿಸಲಿದೆ. ಮಧ್ಯಾಹ್ನದ ಪಂದ್ಯಗಳು 3:30ಕ್ಕೆ ಹಾಗೂ ರಾತ್ರಿ ಪಂದ್ಯಗಳು 7:30ಕ್ಕೆ ಶುರುವಾಗಲಿವೆ. ಕಳೆದ ಬಾರಿಯಂತೆ ಈ ಬಾರಿಯೂ ಒಟ್ಟು 70 ಪಂದ್ಯಗಳು ನಡೆಯಲಿವೆ. ಇದರಲ್ಲಿ 18 ದಿನ ಡಬಲ್ ಹೆಡರ್ ಪಂದ್ಯಗಳ ಆಯೋಜನೆ ಆಗಲಿದೆ. ಮೇ 28ರಂದು ಅಹ್ಮದಾಬಾದ್‌ನಲ್ಲಿ ಫೈನಲ್ ಪಂದ್ಯ ನಡೆಯಲಿದೆ.

ದಿನಾಂಕ	ಸಮಯ	ಪಂದ್ಯಗಳು	ಸ್ಥಳ
ಮಾ.31	ಸಂಜೆ 7:30	ಗುಜರಾತ್ V/s ಚೆನ್ನೈ	ಅಹ್ಮದಾಬಾದ್
ಏ. 1	ಮಧ್ಯಾಹ್ನ 3:30	ಪಂಜಾಬ್ V/s ಕೋಲ್ಕತ್ತಾ	ಮೊಹಾಲಿ
ಏ. 1	ಸಂಜೆ 7:30	ಲಖನೌ V/s ಡೆಲ್ಲಿ	ಲಖನೌ
ಏ. 2	ಮಧ್ಯಾಹ್ನ 3:30	ಹೈದರಾಬಾದ್ V/s ರಾಜಾಸ್ತಾನ್	ಹೈದರಾಬಾದ್
ಏ. 2	**ಸಂಜೆ 7:30**	**ಆರ್‌ಸಿಬಿ V/s ಮುಂಬೈ**	**ಬೆಂಗಳೂರು**
ಏ. 3	ಸಂಜೆ 7:30	ಚೆನ್ನೈ V/s ಲಖನೌ	ಚೆನ್ನೈ
ಏ. 4	ಸಂಜೆ 7:30	ಡೆಲ್ಲಿ V/s ಗುಜರಾತ್	ಡೆಲ್ಲಿ
ಏ. 5	ಸಂಜೆ 7:30	ರಾಜಸ್ತಾನ್ V/s ಪಂಜಾಬ್	ಗುವಾಹಟಿ
ಏ. 6	**ಸಂಜೆ 7:30**	**ಕೋಲ್ಕತ್ತಾ V/s ಆರ್‌ಸಿಬಿ**	**ಕೋಲ್ಕತ್ತಾ**
ಏ. 7	ಸಂಜೆ 7:30	ಲಖನೌ V/s ಹೈದರಾಬಾದ್	ಲಖನೌ
ಏ. 8	ಮಧ್ಯಾಹ್ನ 3:30	ರಾಜಾಸ್ತಾನ V/s ಡೆಲ್ಲಿ	ಗುವಾಹಟಿ
ಏ. 8	ಸಂಜೆ 7:30	ಮುಂಬೈ V/s ಚೆನ್ನೈ	ಮುಂಬೈ
ಏ. 9	ಮಧ್ಯಾಹ್ನ 3:30	ಗುಜರಾತ್ V/s ಕೋಲ್ಕತ್ತಾ	ಅಹ್ಮದಾಬಾದ್
ಏ. 9	ಸಂಜೆ 7:30	ಹೈದರಾಬಾದ್ V/s ಪಂಜಾಬ್	ಹೈದರಾಬಾದ್
ಏ. 10	**ಮಧ್ಯಾಹ್ನ 3:30**	**ಆರ್‌ಸಿಬಿ V/s ಲಖನೌ**	**ಬೆಂಗಳೂರು**
ಏ. 11	ಸಂಜೆ 7:30	ಡೆಲ್ಲಿ V/s ಮುಂಬೈ	ಡೆಲ್ಲಿ
ಏ. 12	ಸಂಜೆ 7:30	ಚೆನ್ನೈ V/s ರಾಜಾಸ್ತಾನ್	ಚೆನ್ನೈ
ಏ. 13	ಸಂಜೆ 7:30	ಪಂಜಾಬ್ V/s ಗುಜರಾತ್	ಮೊಹಾಲಿ
ಏ. 14	ಸಂಜೆ 7:30	ಕೋಲ್ಕತ್ತಾ V/s ಹೈದರಾಬಾದ್	ಕೋಲ್ಕತ್ತಾ
ಏ. 15	**ಮಧ್ಯಾಹ್ನ 3:30**	**ಆರ್‌ಸಿಬಿ V/s ಡೆಲ್ಲಿ**	**ಬೆಂಗಳೂರು**
ಏ. 15	ಸಂಜೆ 7:30	ಲಖನೌ V/s ಪಂಜಾಬ್	ಲಖನೌ
ಏ. 16	ಮಧ್ಯಾಹ್ನ 3:30	ಮುಂಬೈ V/s ಕೋಲ್ಕತ್ತಾ	ಮುಂಬೈ
ಏ. 16	ಸಂಜೆ 7:30	ಗುಜರಾತ್ V/s ರಾಜಾಸ್ತಾನ್	ಅಹ್ಮದಾಬಾದ್
ಏ. 17	**ಸಂಜೆ 7:30**	**ಆರ್‌ಸಿಬಿ V/s ಚೆನ್ನೈ**	**ಬೆಂಗಳೂರು**
ಏ. 18	ಸಂಜೆ 7:30	ಹೈದರಾಬಾದ್ V/s ಮುಂಬೈ	ಹೈದರಾಬಾದ್
ಏ. 19	ಸಂಜೆ 7:30	ರಾಜಾಸ್ತಾನ್ V/s ಲಖನೌ	ಜೈಪುರ
ಏ. 20	**ಮಧ್ಯಾಹ್ನ 3:30**	**ಪಂಜಾಬ್ V/s ಆರ್‌ಸಿಬಿ**	**ಮೊಹಾಲಿ**
ಏ. 20	ಸಂಜೆ 7:30	ಡೆಲ್ಲಿ V/s ಕೋಲ್ಕತ್ತಾ	ಡೆಲ್ಲಿ
ಏ. 21	ಸಂಜೆ 7:30	ಚೆನ್ನೈ V/s ಹೈದರಾಬಾದ್	ಚೆನ್ನೈ
ಏ. 22	ಮಧ್ಯಾಹ್ನ 3:30	ಲಖನೌ V/s ಗುಜರಾತ್	ಲಖನೌ
ಏ. 22	ಸಂಜೆ 7.30	ಮುಂಬೈ V/s ಪಂಜಾಬ್	ಮುಂಬೈ
ಏ. 23	ಮಧ್ಯಾಹ್ನ 3.30	ಆರ್‌ಸಿಬಿ V/s ರಾಜಸ್ತಾನ್	ಬೆಂಗಳೂರು
ಏ. 23	ಸಂಜೆ 7.30	ಕೋಲ್ಕತ್ತಾ V/s ಚೆನ್ನೈ	ಕೋಲ್ಕತ್ತಾ
ಏ. 24	ಸಂಜೆ 7.30	ಹೈದರಾಬಾದ್ V/s ಡೆಲ್ಲಿ	ಹೈದರಾಬಾದ್
ಏ. 25	ಸಂಜೆ 7.30	ಗುಜರಾತ್ V/s ಮುಂಬೈ	ಅಹಮದಾಬಾದ್
ಏ. 26	ಸಂಜೆ 7.30	ಬೆಂಗಳೂರು V/s ಕೋಲ್ಕತ್ತಾ	ಬೆಂಗಳೂರು
ಏ. 27	ಸಂಜೆ 7.30	ರಾಜಸ್ತಾನ್ V/s ಚೆನ್ನೈ	ಜೈಪುರ
ಏ. 28	ಸಂಜೆ 7.30	ಪಂಜಾಬ್ V/s ಲಖನೌ	ಮೊಹಾಲಿ
ಏ. 29	ಸಂಜೆ 3.30	ಕೋಲ್ಕತ್ತಾ V/s ಗುಜರಾತ್	ಕೋಲ್ಕತ್ತಾ
ಏ. 29	ಸಂಜೆ 7.30	ಡೆಲ್ಲಿ V/s ಹೈದರಾಬಾದ್	ಡೆಲ್ಲಿ
ಏ. 30	ಮಧ್ಯಾಹ್ನ 3:30	ಚೆನ್ನೈ Vs ಪಂಜಾಬ್	ಚೆನ್ನೈ
ಏ. 30	ಸಂಜೆ 7:30	ಮುಂಬೈ Vs ರಾಜಾಸ್ತಾನ್	ಮುಂಬೈ
ಮೇ 1	**ಸಂಜೆ 7:30**	**ಲಖನೌ Vs ಆರ್‌ಸಿಬಿ**	**ಲಖನೌ**
ಮೇ 2	ಸಂಜೆ 7:30	ಗುಜರಾತ್ Vs ಡೆಲ್ಲಿ	ಅಹ್ಮದಾಬಾದ್
ಮೇ 3	ಸಂಜೆ 7:30	ಪಂಜಾಬ್ Vs ಮುಂಬೈ	ಮೊಹಾಲಿ
ಮೇ 4	ಮಧ್ಯಾಹ್ನ 3:30	ಲಖನೌ Vs ಚೆನ್ನೈ	ಲಖನೌ
ಮೇ 4	ಸಂಜೆ 7:30	ಹೈದರಾಬಾದ್ Vs ಕೋಲ್ಕತ್ತಾ	ಹೈದರಾಬಾದ್
ಮೇ 5	ಸಂಜೆ 7:30	ರಾಜಾಸ್ತಾನ್ Vs ಗುಜರಾತ್	ಜೈಪುರ
ಮೇ 6	ಮಧ್ಯಾಹ್ನ 3:30	ಚೆನ್ನೈ Vs ಮುಂಬೈ	ಚೆನ್ನೈ
ಮೇ 6	**ಸಂಜೆ 7:30**	**ಡೆಲ್ಲಿ Vs ಆರ್‌ಸಿಬಿ**	**ಡೆಲ್ಲಿ**
ಮೇ 7	ಮಧ್ಯಾಹ್ನ 3:30	ಗುಜರಾತ್ Vs ಲಖನೌ	ಅಹಮದಬಾದ್
ಮೇ 7	ಸಂಜೆ 7:30	ರಾಜಸ್ತಾನ್ Vs ಹೈದರಾಬಾದ್	ಜೈಪುರ
ಮೇ 8	ಸಂಜೆ 7:30	ಕೋಲ್ಕತ್ತಾ Vs ಪಂಜಾಬ್	ಕೋಲ್ಕತ್ತಾ
ಮೇ 9	ಸಂಜೆ 7:30	ಮುಂಬೈ Vs ಬೆಂಗಳೂರು	ಮುಂಬೈ
ಮೇ 10	ಸಂಜೆ 7:30	ಚೆನ್ನೈ Vs ಡೆಲ್ಲಿ	ಚೆನ್ನೈ
ಮೇ 11	ಸಂಜೆ 7:30	ಕೋಲ್ಕತ್ತಾ Vs ರಾಜಸ್ತಾನ್	ಕೋಲ್ಕತ್ತಾ
ಮೇ 12	ಸಂಜೆ 7:30	ಮುಂಬೈ Vs ಗುಜರಾತ್	ಮುಂಬೈ
ಮೇ 13	ಮಧ್ಯಾಹ್ನ 3:30	ಹೈದರಾಬಾದ್ Vs ಲಖನೌ	ಹೈದರಾಬಾದ್
ಮೇ 13	ಸಂಜೆ 7:30	ಡೆಲ್ಲಿ Vs ಪಂಜಾಬ್	ಡೆಲ್ಲಿ
ಮೇ 14	ಸಂಜೆ 7:30	ರಾಜಸ್ಥಾನ್ Vs ಬೆಂಗಳೂರು	ಜೈಪುರ
ಮೇ 14	ಸಂಜೆ 7:30	ಚೆನ್ನೈ Vs ಕೋಲ್ಕತ್ತಾ	ಚೆನ್ನೈ
ಮೇ 15	ಸಂಜೆ 7:30	ಗುಜರಾತ್ Vs ಹೈದರಾಬಾದ್	ಅಹ್ಮದಾಬಾದ್
ಮೇ 16	ಸಂಜೆ 7:30	ಲಖನೌ Vs ಮುಂಬೈ	ಲಖನೌ
ಮೇ 17	ಸಂಜೆ 7:30	ಪಂಜಾಬ್ Vs ಡೆಲ್ಲಿ	ಧರ್ಮಶಾಲಾ
ಮೇ 18	ಸಂಜೆ 7:30	ಹೈದರಾಬಾದ್ Vs ಆರ್‌ಸಿಬಿ	ಹೈದರಾಬಾದ್
ಮೇ 19	ಸಂಜೆ 7:30	ಪಂಜಾಬ್ Vs ಆರ್‌ಸಿಬಿ	ಧರ್ಮಶಾಲಾ
ಮೇ 20	ಮಧ್ಯಾಹ್ನ 3:30	ಡೆಲ್ಲಿ Vs ಚೆನ್ನೈ	ಡೆಲ್ಲಿ
ಮೇ 20	ಸಂಜೆ 7:30	ಕೋಲ್ಕತ್ತಾ Vs ಲಖನೌ	ಕೋಲ್ಕತ್ತಾ
ಮೇ 21	ಮಧ್ಯಾಹ್ನ 3:30	ಮುಂಬೈ Vs ಹೈದರಾಬಾದ್	ಮುಂಬೈ
ಮೇ 21	ಸಂಜೆ 7:30	ಆರ್‌ಸಿಬಿ Vs ಗುಜರಾತ್	ಬೆಂಗಳೂರು

ಮೇ 23–26ರವರೆಗೆ ಪ್ಲೇ–ಆಫ್ಸ್ ಪಂದ್ಯಗಳು
ಮೇ 28 ಫೈನಲ್, ಅಹ್ಮದಾಬಾದ್

ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಹೇಳಿಕೆ

ಮೈಸೂರಲ್ಲಿ ಫೆ.25 ರಂದು ಪ್ರತಿಭಟನಾ ರ್‍ಯಾಲಿ

ಸಂಘ ಸಂಸ್ಥೆಗಳ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ

ಮೈಸೂರು, ಫೆ19(ಎಂಕೆ)– ಟಿಪ್ಪು ಸುಲ್ತಾನ್‌ನಂತೆ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಬೇಕು ಎಂದು ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಅಶ್ವಥ್ ನಾರಾಯಣ್ ವಿರುದ್ಧ ಫೆ.25 ರಂದು ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಲು ಕಾಂಗ್ರೆಸ್, ಕುರುಬ ಸಮಾಜ, ವಿವಿಧ ಸಂಘ–ಸಂಸ್ಥೆಗಳ ಮುಖಂಡರು, ಅಭಿಮಾನಿಗಳು ನಿರ್ಧರಿಸಿದ್ದಾರೆ.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಕಾಂಗ್ರೆಸ್, ಕುರುಬ ಸಮಾಜದ ಮುಖಂಡರು, ಸಿದ್ದರಾಮಯ್ಯ ಅವರ ಅಭಿಮಾನಿಗಳು ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಸೇರಿ ನಡೆಸಿದ ಪೂರ್ವಭಾವಿ ಸಭೆಯಲ್ಲಿ ಜಾತ್ಯಾತೀತ ಹಾಗೂ ಪಕ್ಷಾತೀತವಾಗಿ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಲು ನಿರ್ಧರಿಸಲಾಯಿತು.

ಅಂದು ಬೆಳಗ್ಗೆ ಸುಮಾರು 10 ಗಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿ, ನಂತರ ಜಿಲ್ಲಾಧಿಕಾರಿಗಳಿಗೆ ದೂರು ನೀಡುವುದ ಜೊತೆಗೆ ಸಚಿವ ಅಶ್ವಥ್ ನಾರಾಯಣ್ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸುವಂತೆ ಆಗ್ರಹಿಸಿ, ಪ್ರತಿಭಟನೆ ನಡೆಸಲು ತೀರ್ಮಾನಿಸಲಾಯಿತು.

ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಸಿದ್ದರಾಮಯ್ಯ ಅವರು ಯಾವುದೇ ಜಾತಿ ಸಮುದಾಯಕ್ಕೆ ಸೀಮಿತರಾದವರಲ್ಲ. ಅವರನ್ನು ಹೊಡೆದು ಹಾಕಬೇಕು ಎಂಬ ಹೇಳಿಕೆ ನೀಡಿರುವ ಅಶ್ವಥ್ ನಾರಾಯಣ್ ವಿರುದ್ಧ ಜಾತ್ಯಾತೀತವಾಗಿ ಹೋರಾಟ ನಡೆಸಬೇಕು. ಎಲ್ಲರನ್ನು ಒಗ್ಗೂಡಿಸಿಕೊಂಡು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತಿಭಟನಾ ಸಭೆಗಳನ್ನು ನಡೆಸಬೇಕು. ಸಿದ್ದರಾಮಯ್ಯ ಎಷ್ಟು ಮುಖ್ಯ ಎಂಬುದು ದೇಶದ ಜನತೆಗೆ ಅರ್ಥಮಾಡಿಸಬೇಕಾಗಿದೆ. ಒಂದು ಕಡೆ ಪ್ರತಿಭಟನೆ ನಡೆಸಿದ ನಂತರ ಅದೇ ಮಾದರಿಯಲ್ಲಿ ಎಲ್ಲೆಡೆ ಹಂತ ಹಂತವಾಗಿ ಪ್ರತಿಭಟನೆಗಳಾಗಬೇಕು ಎಂದು ಸಲಹೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯ ರಾಷ್ಟ್ರನಾಯಕ. ಪ್ರಧಾನಿ ಮೋದಿ, ಅಮಿತ್ ಶಾ, ನಡ್ಡಾ ಅವರ್‍ಯಾರು ಸಿದ್ದರಾಮಯ್ಯ ಅವರಿಗೆ ಸಾಟಿಯಿಲ್ಲ. ಏಕೆಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಭ್ರಷ್ಟಾಚಾರ ತುಂಬಿದ ಆಡಳಿತವೇ ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಕೊಲೆ ಮಾಡಿ ಎಂದು ಪ್ರಚೋದನೆ ನೀಡುವುದು ಕೂಡ ಅಪರಾಧ ಎಂದರಲ್ಲದೆ ಪ್ರತಿಭಟನೆಯಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಸೇರಬೇಕು. ಈ ನಿಟ್ಟಿನಲ್ಲಿ ಪೂರ್ವ ತಯಾರಿಯಾಗಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಮಣ್ಯ ಮಾತನಾಡಿ, ಜಾತ್ಯಾತೀತ ನಾಯಕರಾಗಿರುವ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ನುಡಿದಂತೆ ನಡೆದಿದ್ದಾರೆ. ಅವರ ಮೇಲೆ ಆರ್‌ಎಸ್‌ಎಸ್ ಹಾಗೂ ಬಿಜೆಪಿಯವರು ನಿರಂತರವಾಗಿ ಮುಗಿ ಬೀಳುತ್ತಿದ್ದಾರೆ. ಮುಂಬರುವ ವಿಧಾನ ಸಭಾ ಚುನಾವಣೆಯ ಸಮೀಕ್ಷೆಗಳ ಪ್ರಕಾರ ಶೇ.65 ರಷ್ಟು ಕಾಂಗ್ರೆಸ್ ಗೆಲ್ಲುವುದು ನಿಶ್ಚಿತ ಎಂಬುದನ್ನರಿತ ಬಿಜೆಪಿಯವರು, ಸಿದ್ದರಾಮಯ್ಯ ಅವರು ಚುನಾವಣೆಯಿಂದ ದೂರ ಹೋಗುವಂತೆ ಮಾಡಲು ಯತ್ನಿಸುತ್ತಿದ್ದಾರೆ ಎಂದು ದೂರಿದರು.

ಕಾಂಗ್ರೆಸ್ ಮುಖಂಡ ಕೆ.ಮರೀಗೌಡ ಮಾತನಾಡಿ, ಆರ್‌ಎಸ್‌ಎಸ್ ಮತ್ತು ಬಿಜೆಪಿ ಸಿದ್ದರಾಮಯ್ಯ ಅವರ ವಿರುದ್ಧ ಷಡ್ಯಂತ್ರ ಮಾಡುತ್ತಿದೆ. ಸಂವಿಧಾನಕ್ಕೆ ವಿರುದ್ಧವಾಗಿ ಆಡಳಿತ ನಡೆಸುವುದು, ಜಾತಿ–ಸಮುದಾಯದ ನಡುವೆ ಒಗ್ಗಟ್ಟನ್ನು ಹಾಳುಮಾಡುವುದೇ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಮುಖ್ಯ ಧ್ಯೇಯವಾಗಿದೆ. ಸಿದ್ದರಾಮಯ್ಯ ಅವರ ಮೇಲೆ ಐಟಿ, ಇಡಿ ಮೂಲಕ ದಾಳಿ ಮಾಡಿಸಲಾಗದ ಬಿಜೆಪಿ, ಸಿದ್ದರಾಮಯ್ಯ ಅವರನ್ನು ಕಟ್ಟಿಹಾಕದಿದ್ದರೆ ನಮಗೆ ಉಳಿಗಾಲವಿಲ್ಲವೆಂದು ಈ ರೀತಿಯ ಪ್ರಚೋದನಕಾರಿ ಹೇಳಿಕೆ ಮೂಲಕ ಕುಗ್ಗಿಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ವೈಯಕ್ತಿಕವಾಗಿ ಟಾರ್ಗೆಟ್: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಅಹಿಂದ ನಾಯಕ ಸಿದ್ದರಾಮಯ್ಯ ಅವರನ್ನು ಚುನಾವಣೆ ಸಂದರ್ಭದಲ್ಲಿ ವೈಯಕ್ತಿಕ ನಿಂದನೆ ಮೂಲಕ ಟಾರ್ಗೆಟ್ ಮಾಡಲಾಗುತ್ತಿದೆ. ಈ ಮೊದಲು ರಂಗಾಯಣದಲ್ಲಿ ನಾಟಕದ ಮೂಲಕ ಅವಹೇಳನ ಮಾಡಲಾಗಿತ್ತು. ಬರ ಅಧ್ಯಯನಕ್ಕೆಂದು ಮಡಿಕೇರಿಗೆ ಭೇಟಿ ನೀಡಿದ್ದ ವೇಳೆ ಅವರ ಕಾರಿನ ಮೇಲೆ ಮೊಟ್ಟೆ ಎಸೆಯಲಾಯಿತು. ಈಗ ಹೊಡೆದುಹಾಕಿ ಎಂದು ಹೇಳುವ ಮೂಲಕ ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರಲ್ಲದೆ ಸಾರ್ವಜನಿಕವಾಗಿ ಕೊಲೆಗೆ ಪ್ರಚೋದನೆ ನೀಡುತ್ತಿದ್ದಾರೆ ಎಂದರೆ ನಮ್ಮಲ್ಲೀರ ಪ್ರಭುತ್ವ, ಅಸ್ತಿತ್ವ ಎಂತಹ ಹೀನಾಯ ಪರಿಸ್ಥಿತಿಯಲ್ಲಿದೆ ಎಂಬುದು ತಿಳಿಯುತ್ತಿದೆ. ಪದೇ ಪದೆ ನಿಂದನೆ ಮೂಲಕ ಬಿಜೆಪಿ ಹಾಗೂ ಆರ್‌ಎಸ್‌ಎಸ್ ವ್ಯವಸ್ಥಿತ ಪಿತೂರಿ ಮಾಡುತ್ತಿರುವುದನ್ನು ಖಂಡಿಸಿ ಬೃಹತ್ ಪ್ರತಿಭಟನೆ ಮೂಲಕ ಎಚ್ಚರಿಕೆ ಸಂದೇಶ ನೀಡಬೇಕು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಪ್ರದೀಪ್‌ಕುಮಾರ್, ಬೀರಿಹುಂಡಿ ಬಸವಣ್ಣ, ಮಾವಿನಹಳ್ಳಿ ಸಿದ್ದೇಗೌಡ, ಮಾದೇಗೌಡ, ಪಾಲಿಕೆ ಸದಸ್ಯ ಜೆ.ಗೋಪಿ, ಸೀತಾರಾಮು, ಸುರೇಶ್, ಉಗ್ರನರಸಿಂಹೇಗೌಡ, ಗಂಟಯ್ಯ, ಹಿನಕಲ್ ಪ್ರಕಾಶ್, ರವಿನಂದನ್, ಕೆಂಡಗಣ್ಣಸ್ವಾಮಿ, ಡಿ.ನಾಗಭೂಷಣ್, ನಾಗೇಶ್ ಮತ್ತಿತರರಿದ್ದರು.

ಮೈಸೂರು ಬಂದ್‌ಗೆ ಸಲಹೆ...

ಟಿಪ್ಪು ಸುಲ್ತಾನ್‌ನಂತೆ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಬೇಕು ಎಂದು ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಅಶ್ವಥ್ ನಾರಾಯಣ್ ವಿರುದ್ಧ ಪ್ರತಿಭಟನೆ ಜೊತೆಗೆ ಮೈಸೂರಿನಲ್ಲಿ ಒಂದು ದಿನ ಬಂದ್ ಮಾಡಬೇಕು ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಸಲಹೆ ನೀಡಿದರು.

ವಿಧಾನಸಭಾ ಚುನಾವಣೆಗೆ ಇನ್ನೂ 60 ದಿನಗಳಷ್ಟೇ ಬಾಕಿ ಇದ್ದು, ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಪಕ್ಷದ ನಾಯಕರಿಗೆ ಯಾವುದೇ ರೀತಿಯಲ್ಲೂ ಹಿನ್ನಡೆಯಾಗದಂತೆ ಪ್ರತಿಭಟನೆ ರೂಪಿಸುವಂತೆ ಸೂಚಿಸಿದರಲ್ಲದೆ ಬಿಜೆಪಿ ನಡೆಸಿರುವ ಸಮೀಕ್ಷೆಯಲ್ಲೇ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಆದ್ದರಿಂದ ಪ್ರತಿನಿತ್ಯ ಒಬ್ಬೊಬ್ಬರಂತೆ ಸಿದ್ದರಾಮಯ್ಯ ಅವರ ವಿರುದ್ಧ ಮಾತನಾಡುವಂತೆ ಆರ್‌ಎಸ್‌ಎಸ್ 10–15 ಮಂದಿಯನ್ನು ತಯಾರಿಸಿದೆ ಎಂದು ದೂರಿದರು.

2ನೇ ಟೆಸ್ಟ್: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ 6 ವಿಕೆಟ್‌ಗಳ ಭರ್ಜರಿ ಜಯ

ನವದೆಹಲಿ, ಫೆ19– ಪ್ರವಾಸಿ ಆಸ್ಟ್ರೇಲಿಯಾ ವಿರುದ್ಧದ 2ನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ 6 ವಿಕೆಟ್ ಗಳ ಭರ್ಜರಿ ಜಯ ಸಾಧಿಸಿದ್ದು, ಆ ಮೂಲಕ 4 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿದೆ.



ದೆಹಲಿಯಲ್ಲಿ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದ 2ನೇ ಇನ್ನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ನೀಡಿದ್ದ 115 ರನ್ ಗಳ ಸಾಧಾರಣ ಗುರಿಯನ್ನು ಬೆನ್ನು ಹತ್ತಿದ ಭಾರತ ತಂಡ 4 ವಿಕೆಟ್ ಕಳೆದುಕೊಂಡು 118ರನ್ ಗಳಿಸಿ ಗುರಿ ಮುಟ್ಟಿತು. ಆ ಮೂಲಕ 6 ವಿಕೆಟ್‌ಗಳ ಅಂತರದಲ್ಲಿ 2ನೇಟೆಸ್ಟ್ ಪಂದ್ಯವನ್ನು ಗೆದ್ದುಕೊಂಡಿದೆ. ಈ ಗೆಲುವಿನ ಮೂಲಕ ಭಾರತ ತಂಡ 4 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿದೆ.

ಆಸ್ಟ್ರೇಲಿಯಾ ನೀಡಿದ್ದ 115 ರನ್‌ಗಳ ಸಾಧಾರಣ ಗುರಿ ಬೆನ್ನು ಹತ್ತಿದ್ದ ಭಾರತ ಕೂಡ ಆರಂಭಿಕ ಆಘಾತ ಎದುರಿಸಿತ್ತು. ಆರಂಭಿಕ ಆಟಗಾರ ರಾಹುಲ್ ಕೇವಲ 1 ರನ್ ಗಳಿಸಿ ಲಿಆನ್ ಬೌಲಿಂಗ್‌ನಲ್ಲಿ ಔಟಾಗಿದ್ದರು. ಈ ಹಂತದಲ್ಲಿ ಪೂಜಾರ ಜೊತೆಗೂಡಿದ ರೋಹಿತ್ ಶರ್ಮಾ ತಂಡವನ್ನು ಆರಂಭಿಕ ಆಘಾತದಿಂದ ಹೊರತರುವ ಪ್ರಯತ್ನ ಮಾಡಿದರು. ರೋಹಿತ್ ಶರ್ಮಾ–ಪೂಜಾರ ಜೋಡಿ ನಿಧಾನವಾಗಿ ರನ್ ಗಳಿಸಿ ತಂಡಕ್ಕೆ ಆಸರೆಯಾಗುವ ಸೂಚನೆ ನೀಡಿದರಾದರೂ 31 ರನ್ ಗಳಿಸಿದ್ದ ವೇಳೆ ರೋಹಿತ್ ಶರ್ಮಾ ಅನಗತ್ಯವಾಗಿ ರನೌಟ್‌ಗೆ ಬಲಿಯಾದರು. ಬಳಿಕ ಪೂಜಾರಾ ಜೊತೆಗೂಡಿದ ವಿರಾಟ್ ಕೊಹ್ಲಿ ತಮ್ಮ ಅಂತಾರಾಷ್ಟ್ರೀಯ ವೃತ್ತಿ ಜೀವನದ 25 ಸಾವಿರ ರನ್ ಗಳಿಸಿದ ದಾಖಲೆ ಮಾಡಿದರು.

ಆದರೆ ಅವರೂ ಕೂಡ 20 ರನ್ ಗಳಿಸಿ ಮರ್ಫಿ ಬೌಲಿಂಗ್ ಔಟಾದರು. ಬಳಿಕ ಪೂಜಾರ ಜೊತೆಗೂಡಿದ ಶ್ರೇಯಸ್ ಅಯ್ಯರ್ 12 ಗಳಿಸಿ ಔಟಾದರೆ, ಪೂಜಾರ ಜೊತೆಗೂಡಿದ ಉದಯೋನ್ಮುಖ ಆಟಗಾರ ಶ್ರೀಕಾರ್ ಭರತ್ 23 ರನ್ ಗಳಿಸಿ ಗೆಲುವಿನ ಔಪಚಾರಿಕತೆ ಮುಗಿಸಿದರು. ಪೂಜಾರ 31 ರನ್ ಗಳಿಸಿ ಅಜೇಯರಾಗಿ ಉಳಿದರು. ಆಸ್ಟ್ರೇಲಿಯಾ ಪರ ನಾಥನ್ ಲಯಾನ್ 2 ವಿಕೆಟ್ ಪಡೆದರೆ, ಮರ್ಫಿ 1 ವಿಕೆಟ್ ಪಡೆದರು.

ಗುಂಡಿನ ಚಕಮಕಿ; ತಮಿಳ್ನಾಡು ಬೇಟೆಗಾರ ಬಲಿ

ಪಾಲಾರ್ ನದಿಯಲ್ಲಿ ಶವ ಪತ್ತೆ

ಮಲೆಮಹದೇಶ್ವರ ಬೆಟ್ಟ, ಫೆ19–ಅರಣ್ಯ ಸಿಬ್ಬಂದಿ ಮತ್ತು ಬೇಟೆಗಾರರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ತಮಿಳುನಾಡಿನ ಬೇಟೆಗಾರ ನೋರ್ವ ಸಾವನ್ನಪ್ಪಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಕಾವೇರಿ ವನ್ಯಧಾಮದ ಬೇಟೆಗಾರ ಗೋಪಿನಾಥಂ ಅರಣ್ಯ ವಲಯದ ಅಡಿಪಾಲಾರ್ ಅರಣ್ಯ ಪ್ರದೇಶದ ಕೊಕ್ಕರೆಹಳ್ಳ ಎಂಬಲ್ಲಿ ಫೆ14ರಂದು ರಾತ್ರಿ ಗುಂಡಿನ ಚಕಮಕಿ ನಡೆದಿದ್ದು, ಈ ಚಕಮಕಿ ವೇಳೆ ತಮಿಳುನಾಡಿನ ಬೇಟೆಗಾರರು ಪಾಲಾರ್ ನದಿಗೆ ಧುಮುಕಿ ಪರಾರಿ ಯಾಗಿದ್ದರು. ಅವರಲ್ಲಿ ಓರ್ವನ ಮೃತದೇಹ ಶುಕ್ರವಾರ ಈರೋಡು ಜಿಲ್ಲೆಯಲ್ಲಿ ಹಾದು ಹೋಗುವ ಪಾಲಾರ್ ನದಿಯಲ್ಲಿ ಪತ್ತೆಯಾಗಿದ್ದು, ಈತ ಫೆ14ರಂದು ರಾತ್ರಿ ನಡೆದ ಗುಂಡಿನ ಚಕಮಕಿಯಲ್ಲಿ ಸಾವನ್ನಪ್ಪಿದ್ದಾನೆ ಎಂಬುದು ಖಚಿತಪಟ್ಟಿದೆ.

ಗುಂಡಿನ ಚಕಮಕಿಯಲ್ಲಿ ಮೃತಪಟ್ಟವನನ್ನು ರಾಜು ಎಂದು ಗುರುತಿಸಲಾಗಿದ್ದು, ಈತ ವೃತ್ತಿಪರ ಬೇಟೆಗಾರನೆಂಬುದನ್ನು ತಮಿಳುನಾಡು ಅರಣ್ಯಾಧಿಕಾರಿಗಳು ಖಚಿತಪಡಿಸಿದ್ದಾರೆ. 2014ರಲ್ಲಿ ಅರಣ್ಯ ಸಿಬ್ಬಂದಿ ಯೊಂದಿಗೆ ನಡೆದಿದ್ದ ಗುಂಡಿನ ಚಕಮಕಿಯಲ್ಲಿ ಪಳನಿ ಎಂಬ ಬೇಟೆಗಾರ ಸಾವನ್ನಪ್ಪಿದ್ದು, ಆ ಸಂದರ್ಭದಲ್ಲಿ ರಾಜು ಕೂಡ ಬೇಟೆಗಾರರ ತಂಡದಲ್ಲಿದ್ದು, ಅರಣ್ಯ ಸಿಬ್ಬಂದಿಗೆ ಸಿಗದೆ ಪರಾರಿಯಾಗಿದ್ದ ಎಂದು ತಿಳಿದು ಬಂದಿದೆ.

ವಿವರ: ಫೆ.14ರಂದು ರಾತ್ರಿ ವೀರಪ್ಪನ್ ಹುಟ್ಟೂರು ಗೋಪಿನಾಥಂ ಸಮೀಪದ ಅಡಿಪಾಲಾರು ಅರಣ್ಯ ಪ್ರದೇಶದಲ್ಲಿರುವ ಜೇನುಕಲ್ಲು ವಾಚ್ ಟವರ್‌ನಲ್ಲಿ ಕೊಕ್ಕರೆಹಳ್ಳಿ ಗಸ್ತಿನ ಅರಣ್ಯ ರಕ್ಷಕ ಮಲ್ಲಿಕಾರ್ಜುನ್ ಅವರು ಮತ್ತೋರ್ವ ಅರಣ್ಯ ರಕ್ಷಕನೊಡಗೂಡಿ ರಾತ್ರಿ ಗಸ್ತು ನಡೆಸುತ್ತಿದ್ದ ವೇಳೆ ರಾತ್ರಿ 8 ಗಂಟೆ ಸುಮಾರಿನಲ್ಲಿ ಅಡಿಪಾಲಾರ್ ಅರಣ್ಯ ಪ್ರದೇಶದಲ್ಲಿ ಬೇಟೆಗಾರರು ತಲೆಗೆ ಟಾರ್ಚ್‌ಲೈಟ್ ಕಟ್ಟಿಕೊಂಡು ಸಂಚರಿಸುತ್ತಿರುವುದು ಕಂಡು ಬಂದಿದೆ.

ಈ ಹಿನ್ನೆಲೆಯಲ್ಲಿ ಅವರು ರವಾನಿಸಿದ ಸಂದೇಶವನ್ನಾಧರಿಸಿ ಉಪ ವಲಯ ಅರಣ್ಯಾಧಿಕಾರಿ ದಿನೇಶ್ ನೇತೃತ್ವದಲ್ಲಿ ಕೊಕ್ಕರೆಹಳ್ಳ ಗೇಟ್‌ನಲ್ಲಿದ್ದ ಅರಣ್ಯ ಸಿಬ್ಬಂದಿ ಮತ್ತು ಪಾಲಾರ್ ವನ್ಯಜೀವಿ ವಲಯದ ಅರಣ್ಯ ರಕ್ಷರಾದ ಸುನೀಲ್ ಯಮನಪ್ಪ ವಾಚರ್‌ಗಳಾದ ಶಿವಕುಮಾರ್, ಮಾದೇಶ್ ಅವರುಗಳು ಎರಡು ತಂಡಗಳಾಗಿ ಬೇಟೆಗಾರರಿಗಾಗಿ ಶೋಧ ಕಾರ್ಯ ಕೈಗೊಂಡಿದ್ದಾರೆ. ಈ ವೇಳೆ ಅಡಿಪಾಲಾರ್ ಅರಣ್ಯ ಪ್ರದೇಶದ ಪಾಲಾರ್ ನದಿಯ ಹಿನ್ನೀರಿನ ದಡದ ಕೊಂಗರಟ್ಟಿ ಮುಂದೆ ಎಂಬ ಸ್ಥಳದಲ್ಲಿ ಒಂದು ತೆಪ್ಪ ಕಂಡು ಬಂದಿದೆ. ಈ ತೆಪ್ಪವು ಬೇಟೆಗಾರರದ್ದಿರಬಹುದು ಎಂದು ಭಾವಿಸಿದ ಅರಣ್ಯ ಸಿಬ್ಬಂದಿ ಬೇಟೆಗಾರರು ಇಲ್ಲಿಗೆ ಬಂದೇ ಬರುತ್ತಾರೆ ಎಂದು ಬಂಡೆಯೊಂದರ ಹಿಂದೆ ಅಡಗಿ ಕುಳಿತಿದ್ದರು.

ರಾತ್ರಿ 12 ಗಂಟೆ ಸುಮಾರಿನಲ್ಲಿ ಅರಣ್ಯದಲ್ಲಿ ಎರಡು ಬಾರಿ ಗುಂಡು ಹಾರಿಸಿದ ಶಬ್ದ ಕೇಳಿ ಬಂದಿದೆ. 1.30ರ ಸುಮಾರಿನಲ್ಲಿ ತೆಪ್ಪ ನಿಲ್ಲಿಸಿದ್ದ ಜಾಗಕ್ಕೆ ಬೇಟೆಗಾರರು ಬರುತ್ತಿದ್ದ ಅದೇ ವೇಳೆ ನದಿಯ ಮತ್ತೊಂದು ದಡದಿಂದ ತಮಿಳುನಾಡಿನ ಅರಣ್ಯ ಸಿಬ್ಬಂದಿ ಟಾರ್ಚ್‌ಲೈಟ್ ಬೆಳಕು ಹರಿಸಿದಾಗ ಅದು ಕರ್ನಾಟಕ ಅರಣ್ಯ ಸಿಬ್ಬಂದಿ ಮೇಲೆ ಬಿದ್ದ ಪರಿಣಾಮ ಅವರನ್ನು ಕಂಡ ಬೇಟೆಗಾರರು 20 ರಿಂದ 25 ಮೀಟರ್ ಅಂತರದಲ್ಲಿ ಕರ್ನಾಟಕ ಅರಣ್ಯ ಸಿಬ್ಬಂದಿ ಮೇಲೆ ಗುಂಡು ಹಾರಿಸಿದ್ದಾರೆ. ಆದರೆ ಈ ಗುಂಡುಗಳು ಬಂಡೆ ಮೇಲೆ ತಾಗಿದ್ದರಿಂದ ಅರಣ್ಯ ಸಿಬ್ಬಂದಿ ಅಪಾಯದಿಂದ ಪಾರಾಗಿದ್ದಾರೆ. ತಕ್ಷಣವೇ ಸುಧಾರಿಸಿಕೊಂಡ ಅರಣ್ಯ ರಕ್ಷಕರಾದ ಮಲ್ಲಿಕಾರ್ಜುನ, ಸುನೀಲ್ ಮತ್ತು ಯಮನಪ್ಪ, ತಮ್ಮ ಬಳಿ ಇದ್ದ ಒಂಟಿ ನಳಿಕೆ ಬಂದೂಕಿನಿಂದ ಬೇಟೆಗಾರರತ್ತ ಗುಂಡು ಹಾರಿಸಿದ್ದಾರೆ.

ಈ ವೇಳೆ ಕೆಲವರು ಕತ್ತಲೆಯಲ್ಲಿ ನದಿ ದಡದಲ್ಲಿ ಓಡಿ ಹೋದರೆ, ಇಬ್ಬರು ಬೇಟೆಗಾರರು ಪಾಲಾರ್ ನದಿಯಲ್ಲಿ ಧುಮುಕಿ ಈಜಿಕೊಂಡು ಪರಾರಿಯಾಗಿದ್ದಾರೆ. ಈ ಸಂದರ್ಭದಲ್ಲಿ ಅರಣ್ಯ ಸಿಬ್ಬಂದಿ ಗುಂಡು ಹಾರಿಸಿದ್ದರಿಂದ ಯಾರಾದರೂ ಬೇಟೆಗಾರರಿಗೆ ಗಾಯವಾಗಿತ್ತೇ ಅಥವಾ ಯಾರಾದರೂ ಮೃತಪಟ್ಟರೇ ಎಂಬುದು ಗೊತ್ತಾಗಿರಲಿಲ್ಲ. ಈ ಕಾರ್ಯಾಚರಣೆಯಲ್ಲಿ ಅರಣ್ಯ ಸಿಬ್ಬಂದಿ ಬೇಟೆಗಾರರು ಬೇಟೆಯಾಡಿದ್ದ ಎರಡು ಜಿಂಕೆ ಕಳೇಬರ, ಒಂದು ನಾಡ ಬಂದೂಕು, ಒಂದು ಹೆಡ್ ಟಾರ್ಚ್, ಒಂದು ಟಾರ್ಚ್ ಚಾರ್ಜರ್, ಎರಡು ಚಪ್ಪಲಿ, ಒಂದು ಮೊಬೈಲ್ ಅನ್ನು ವಶಪಡಿಸಿಕೊಂಡಿದ್ದರು. ಈ ಸಂಬಂಧ ಮಲೆಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯಲ್ಲಿ ಗೋಪಿನಾಥಂ ಅರಣ್ಯ ವಲಯಾಧಿಕಾರಿ ಎಸ್.ಸಂಪತ್ ಪಟೇಲ್ ದೂರು ದಾಖಲಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಬಸ್ ಡ್ರೈವರಿಗೂ, ಕಂಡಕ್ಟರಿಗೂ ಇರುವ ವ್ಯತ್ಯಾಸವೇನು?

ವಿದ್ಯಾರ್ಥಿ : ಕಂಡಕ್ಟರ್ ಮಲಗಿದ್ರೆ ಯಾರೂ ಟಿಕೆಟ್ ತಗಳೋಲ್ಲ. ಆದರೆ ಡ್ರೈವರ್ ಮಲಗಿದ್ರೆ ಎಲ್ಲಾರೂ ಟಿಕೆಟ್ ತಗೋತಾರೆ...

ಮೈಸೂರು ಮಿತ್ರ

ಸೋಮವಾರ, 20 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕಾಯಲು ನಾನಿರುವಾಗ ಕೆಲಸ ಇಲ್ಲದವರ ಮಾತಿಗೆ ಕೊರಗುವುದೇಕೆ... ಯಾರನ್ನೂ ನಂಬಿ ಬಂದಿಲ್ಲ ಎಂದ ಮೇಲೆ ಎಲ್ಲರೂ ನಮ್ಮೊಂದಿಗೆ ಇರುತ್ತಾರೆ ಅನ್ನುವ ಮೋಹ ಏಕೆ. – ಕೃಷ್ಣಾರ್ಪಣಮಸ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.

ನಿಮ್ಮ ಪತ್ರಗಳು

ಎಲ್ಲಾ ನಗರಗಳಲ್ಲಿ ಮೊಬಿಫೈ ತಂತ್ರಜ್ಞಾನ ಅಳವಡಿಕೆಯಾಗಲಿ

ಮಾನ್ಯರೆ,

ಗದಗ ನಗರದ ಮಾದರಿಯಲ್ಲಿ ರಾಜ್ಯದ ಎಲ್ಲಾ ನಗರಗಳಲ್ಲಿ ಮೊಬೈಲ್ ಕಳ್ಳತನ ಮುಕ್ತ ನಗರವನ್ನಾಗಿಸಲು ಆಯಾ ಜಿಲ್ಲಾ ಪೊಲೀಸ್ ಇಲಾಖೆ ಮೊಬಿಫೈ ಉಪಕ್ರಮವನ್ನು ಬಳಸಬೇಕು.

ಮೊಬಿಫೈ ತಂತ್ರಜ್ಞಾನ ಬಳಸಿದಲ್ಲಿ ಜನರು ಮೊಬೈಲ್ ಕಳೆದು ಹೋದ ಕೂಡಲೇ ಠಾಣೆಗೆ ಬಂದು ದೂರು ನೀಡುವ ಅಗತ್ಯವಿರುವುದಿಲ್ಲ. ಎಸ್‌ಎಂಎಸ್ ಕಳುಹಿಸಿದರೆ ಸಾಕಾಗುತ್ತದೆ ಎಂದು ಹೇಳಲಾಗುತ್ತಿದೆ. ಪೊಲೀಸ್ ಅಧಿಕಾರಿಗಳು ಮೊದಲು ಹ್ಯಾಂಡ್ 'ಸೆಟ್'ಗಳನ್ನು ಬ್ಲಾಕ್ ಮಾಡುತ್ತಾರೆ. ಇದರಿಂದ ಯಾವುದೇ ವ್ಯಕ್ತಿ ಮೊಬೈಲ್ ಬಳಕೆ ಮಾಡಲು ಸಾಧ್ಯವಾಗುವುದಿಲ್ಲ. ಕಳ್ಳತನ ಮಾಡಿದ ಮೊಬೈಲ್‌ಗಳು ಮಾರಾಟವಾಗದಂತೆ ಮಾಡಲು ಕದ್ದ ಮೊಬೈಲ್ ಫೋನ್‌ಗಳನ್ನು ಟ್ರ್ಯಾಕಿಂಗ್ ಮಾಡುವುದು, ನಿರ್ಬಂಧಿಸುವುದು, ಪತ್ತೆ ಮಾಡುವ ಈ ತಂತ್ರಜ್ಞಾನ ಸಹಕಾರಿ ಎಂದು ಹೇಳಲಾಗುತ್ತಿದೆ.ಒಂದು ವೇಳೆ ಮೊಬೈಲ್ ಸಿಗದೇ ಇದ್ದಲ್ಲಿ ವ್ಯಕ್ತಿಯಾ ಖಾಸಗಿ ಮಾಹಿತಿಗಳನ್ನು ರಕ್ಷಣೆ ಮಾಡಲು ಮೊಬೈಲ್ ಬ್ಲಾಕ್ ಮಾಡಲಾಗುತ್ತದೆ ಆದುದರಿಂದ ಈ ತಂತ್ರಜ್ಞಾನ ಅಳವಡಿಕೆಯಾಗಲಿ.

– ವಿಜಯಕುಮಾರ್ ಎಚ್.ಕೆ, ರಾಯಚೂರು

ದೇವರಿಗೆ ಮುಕ್ತಿ ಸಿಗುವುದೆ?



ಮಾನ್ಯರೆ,

ಈ ಚಿತ್ರದಲ್ಲಿನ ದೃಶ್ಯ ಮೈಸೂರಿನಿಂದ ದೇವಲಾಪುರಕ್ಕೆ ಹೋಗುವ ರಸ್ತೆಯಲ್ಲಿ ಹಡಜನ ಮಂಟಿಯಿಂದ ಸ್ವಲ್ಪ ಮುಂದೆ ಕಂಡು ಬರುತ್ತದೆ. ಇತ್ತೀಚೆಗೆ ಈ ರೀತಿಯ ಅನೇಕ ಸ್ಥಳಗಳನ್ನು ರಾಜ್ಯಾದ್ಯಂತ ನೋಡಬಹುದಾಗಿದೆ. ದೇವರೆಂದು ವರ್ಷಾನುಗಟ್ಟಲೇ ಪೂಜಿಸಿದ ಭಕ್ತ ಮಹಾಶಯರು ಇಂದು ಅನಾಥರನ್ನಾಗಿಸಿ ಎಸೆದು ಹೋಗಿದ್ದಾರೆ. ಈ ಕೆಲಸ ಅನ್ಯ ಧರ್ಮದವರು ಮಾಡಿದರೆ ವಿವಾದ. ಸ್ವಧರ್ಮದ ಭಕ್ತರ ಈ ಕೆಲಸದಿಂದ ರಸ್ತೆ ಬದಿಯಲ್ಲಿನ ಅನಾಥ ದೇವರುಗಳಿಗೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು ಮತ್ತು ಇಲಾಖೆಗಳು ಮುಕ್ತಿ ನೀಡಬೇಕೆಂದು ಕೋರುತ್ತೇನೆ.

– ಜಗದೀಶ ಬಿ. ಹೊಸೂರು, ಜೆಎಸ್‌ಎಸ್ ನಗರ, ಮೈಸೂರು.

ಪ್ರತಿ ಜಿಲ್ಲೆಗೆ ಒಬ್ಬರಂತೆ ಸ್ವಾಮಿ ವಿವೇಕಾನಂದ ಯುವ ಪ್ರಶಸ್ತಿ ನೀಡಲಿ

ಮಾನ್ಯರೆ,

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ರಾಜ್ಯದ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಯುವಕರಿಗೆ ಸ್ವಾಮಿ ವಿವೇಕಾನಂದ ಯುವ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿತ್ತು ಆದರೆ ಹಲವು ವರ್ಷಗಳಿಂದ ಪ್ರಶಸ್ತಿ ಕೊಡುವುದನ್ನು ನಿಲ್ಲಿಸಲಾಗಿತ್ತು.

ಇಂದಿನ ಬಜೆಟ್‌ನಲ್ಲಿ ಯುವ ಸಬಲೀಕರಣ ಕ್ರೀಡಾ ಇಲಾಖೆಯು ರಾಜ್ಯದ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಐದು ಯುವ ಜನರಿಗೆ ಪ್ರಸಕ್ತ ಸಾಲಿನಿಂದ ಸ್ವಾಮಿ ವಿವೇಕಾನಂದ ಯುವ ಪ್ರಶಸ್ತಿ ನೀಡಲಾಗುವುದು ಎಂದು ತೀರ್ಮಾನ ಕೈಗೊಂಡಿದೆ. ಸ್ವಾಮಿ ವಿವೇಕಾನಂದ ಯುವ ಪ್ರಶಸ್ತಿ ನೀಡುವುದರಿಂದ ರಾಜ್ಯದ ಯುವಜನತೆಗೆ ಮತ್ತಷ್ಟು ಪ್ರೇರಣೆ ಸಿಗಲಿದೆ. ಜೊತೆಗೆ ಯುವಜನರ ಪ್ರತಿಭೆಗಳನ್ನು ಗುರುತಿಸಿಕೊಳ್ಳಲು ವೇದಿಕೆಗಳನ್ನು ಕಲ್ಪಿಸಿ ಕೊಡಬೇಕೆನ್ನುವುದು ಯುವಜನರ ಒತ್ತಾಯವಾಗಿದೆ. ಇದರೊಂದಿಗೆ ಕೇವಲ ಐದು ಜನರಿಗಲ್ಲದೆ ಪ್ರತಿ ಜಿಲ್ಲೆಗೆ ಒಬ್ಬರಂತೆ ಪ್ರಶಸ್ತಿಯನ್ನು ನೀಡಬೇಕೆನ್ನುವುದು ನಮ್ಮ ಒಂದು ಮನವಿ. ಸರ್ಕಾರದ ಈ ನಿರ್ಧಾರ ಯುವ ಪ್ರತಿಭೆಗಳಿಗೆ ಖುಷಿ ತಂದಿದೆ.

– ಚಿರಂಜೀವಿ, ಮಾನಸ ಗಂಗೋತ್ರಿ, ಮೈಸೂರು

ಜೀವನದ ಮೋಕ್ಷಮಾರ್ಗವನ್ನು ಪಡೆದುಕೊಳ್ಳಿ

ಮಾನ್ಯರೆ,

ಪ್ರತಿನಿತ್ಯ ಸಮಾಜದಲ್ಲಿ ನಡೆಯುತ್ತಿರುವ ಅಸಹ್ಯಕರವಾದ ಅತ್ಯಾಚಾರ, ಅನಾಚಾರ, ವ್ಯಭಿಚಾರ, ಮೋಸ, ವಂಚನೆ, ಕಳ್ಳತನ, ಕೊಲೆ, ಸುಲಿಗೆ, ದರೋಡೆ, ಸುಳ್ಳು, ಅಧರ್ಮ ಅನ್ಯಾಯವನ್ನು ನೋಡುತ್ತಿದ್ದೇವೆ. ಮನುಷ್ಯ ಜ್ಞಾನಜೀವಿ, ಬುದ್ಧಿಜೀವಿ, ಒಳ್ಳೆಯದು ಕೆಟ್ಟದ್ದು ಎಂಬ ವಿಚಾರವನ್ನು ಚಿಂತನೆ ಮಾಡುವಂತಹ ವಿಶೇಷ ಜ್ಞಾನವನ್ನು ಪರಮಾತ್ಮನು ಎಲ್ಲರಿಗೂ ಕೊಟ್ಟಿರುತ್ತಾನೆ.

ಈ ಮಾನವ ಜನ್ಮ ಜನ್ಮಾಂತರದಿಂದ ಬಹು ಕಠಿಣ ಸಾಧನೆಗಳ ಮೂಲಕ ಪರಮಪಿತ ಪರಮಾತ್ಮನ ಅನುಗ್ರಹದಿಂದ ದೊರೆತಿರುವ ಈ ದೇಹವನ್ನು ಇಂದು ನಾವು ಹಾಳು ಮಾಡಿಕೊಳ್ಳುತ್ತಿದ್ದೇವೆ. ಇಂದಿನ ಬುದ್ಧಿ ಜೀವಿಗಳೆನಿಸಿಕೊಂಡವರು ಜ್ಞಾನ ಇಲ್ಲದ ರೀತಿ ವರ್ತನೆ ಮಾಡುತ್ತಿದ್ದಾರೆ. ಧರ್ಮ ಪ್ರಚಾರವನ್ನು ಮಾಡಬೇಕಾದ ಧರ್ಮಾತ್ಮರೂ ಸಹ ಅಧರ್ಮ ಮಾರ್ಗದಲ್ಲಿ ಹೋಗುತ್ತಿದ್ದಾರೆ. ಇಂದು ದೇಶದಲ್ಲಿ ಜಾತಿಯೆಂಬ ವಿಷ ಬೀಜವನ್ನು ಬಿತ್ತುತ್ತಾ ಮನುಷ್ಯ ಮನುಷ್ಯರ ನಡುವೆ ಮೇಲು ಕೀಳು ಎಂಬ ಅಂತರವನ್ನು ಸೃಷ್ಟಿಸಿ ದೇಶವನ್ನು ಅಧಃಪತನಕ್ಕೆ ಕೊಂಡೊಯ್ಯುತ್ತಿದ್ದಾರೆ. ಇಂದು ದೇವರು ತೀರ್ಥಕ್ಷೇತ್ರಗಳ ಹೆಸರಿನಲ್ಲಿ ಮುಗ್ಧ ಮಾನವರನ್ನು ಅಂಧಕಾರದ ಅಂಚಿಗೆ ಮೂಢನಂಬಿಕೆಯ ಕಡೆಗೆ ಕರೆದೊಯ್ಯುತ್ತಿದ್ದಾರೆ. ನಿರಾಕಾರನಾದ ಪರಮಾತ್ಮನು ಎಲ್ಲಾ ಚೇತನ ವಸ್ತುಗಳಲ್ಲಿಯೂ ಪಂಚಭೂತಗಳ ರೂಪದಲ್ಲಿ ಜೀವಾತ್ಮನ ರೂಪದಲ್ಲಿ ಸ್ಥಿತಪ್ರಜ್ಞನಾಗಿದ್ದಾನೆ. ಜೀವಾತ್ಮನ ರೂಪದಲ್ಲಿರುವ ಪರಮಾತ್ಮನನ್ನು ಆತನ ಸ್ವರೂಪವನ್ನು ನಾವು ನೋಡಬೇಕಾಗಿದೆ. ಆರ್ಯ ಸಮಾಜದ ಸಂಸ್ಥಾಪಕರಾದ ಮಹರ್ಷಿ ದಯಾನಂದ ಸರಸ್ವತಿಯವರಿಂದ ಪ್ರತಿಪಾದಿತನಾದ ಯಮ, ನಿಯಮಗಳ ತತ್ವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಧ್ಯಾನದ ಮೂಲಕ ಸಮಾಧಿ ಸ್ಥಿತಿಯಲ್ಲಿ ಸ್ವರೂಪ ಅಂದರೆ ಜ್ಯೋತಿಯ ರೂಪದಲ್ಲಿ ಕಾಣಬಹುದಾಗಿದೆ. ಪ್ರತಿನಿತ್ಯ ದೇವಪೂಜೆಯ ಬದಲು ಸೂರ್ಯೋದಯ, ಸೂರ್ಯಾಸ್ತ ಕಾಲದಲ್ಲಿ ಸಂಧ್ಯೋಪಾಸನೆ ಮಾಡುವ ಮೂಲಕ ನಿಮ್ಮ ಜೀವನದ ಕೊನೆಯ ಗುರಿಯಾದ ಮೋಕ್ಷಮಾರ್ಗವನ್ನು ಪಡೆದುಕೊಳ್ಳಿರಿ.

– ಎನ್.ಆರ್. ವಿಜಯಕುಮಾರ್, ಮಾನಸಿನಗರ, ಮೈಸೂರು.




ಜಿ.ಎಲ್. ತ್ರಿಪುರಾಂತಕ

ಮೊಬೈಲ್ ನಂ.: 96866–77284

ಬೆರಗು

ಸುಡುಗಾಡಿನಲ್ಲಿ ಸುಜ್ಞಾನಿಗಳಾದರೆ ಏನು ಫಲ !

ಇದ್ದಾಗ ಒಂದೊಳ್ಳೆ ಮಾತಿಲ್ಲ, ಕೈಲಾದ ನೆರವಿಲ್ಲ
ಸತ್ತಾಗ ಮಾಡುವ ಅವನ ಗುಣಗಾನಕ್ಕೆ ಲೆಕ್ಕವಿಲ್ಲ
ಸುಡುಗಾಡಿನಲ್ಲಿ ಸುಜ್ಞಾನಿಗಳಾದರೆ ಏನು ಫಲ ?
ಎಂದ ನಮ್ಮ ಅರಿವಿನ ಅಪ್ರಮೇಯ !



ಇದು ನನ್ನ ನೂರಾರು ಚೌಪದಿಗಳಲ್ಲಿ ಒಂದು. ಮನುಷ್ಯನ ನಡೆನುಡಿಯನ್ನು ಅರಿಯುವುದೇ ಕಷ್ಟವಾಗಿದೆ. ಹಸಿದಾಗ ಒಂದು, ಉಂಡಾಗ ಒಂದು ಮಾತಾಡುತ್ತಾನೆ, ಒಂದೇ ವಿಷಯಕ್ಕೆ ತನ್ನವರಾದರೆ ಒಂಥರಾ ಪ್ರತಿಕ್ರಿಯಿಸುತ್ತಾನೆ, ಅನ್ಯರಾದರೆ ಒಂಥರಾ ಪ್ರತಿಕ್ರಿಯಿಸುತ್ತಾನೆ, ಖುಷಿಯಾದಾಗ ಒಂದು ರೀತಿ ನುಡಿದರೆ ಮತ್ತೊಂದು ರೀತಿ ನುಡಿಯುತ್ತಾನೆ. ಒಟ್ಟಿನಲ್ಲಿ ಒಂದೇ ತೆರನಾದ ಭಾವ–ಭಕ್ತಿ, ನೀತಿ–ನಿಯತ್ತು ಇರೋದಿಲ್ಲ. ಅಂದಿನ ಪರಿಸ್ಥಿತಿಗೆ ತಕ್ಕಂತೆ ಮನಸ್ಥಿತಿ ಬದಲಿಸಿಕೊಂಡು ಕೆಲವೊಮ್ಮೆ ಮಹಾ ಜ್ಞಾನಿಯಂತೆ, ತತ್ವಜ್ಞಾನಿಯಂತೆ ಅಣಿಮುತ್ತುಗಳನ್ನು ಉದುರಿಸಿಬಿಡುತ್ತಾನೆ. ಒಬ್ಬ ವ್ಯಕ್ತಿ ಬದುಕಿದ್ದಾಗ ಅವನ ನಡೆನುಡಿ ಕುರಿತು ಒಂದೊಳ್ಳೆಯ ಪ್ರಶಂಸೆ ನುಡಿಗಳನ್ನಾಡದ ಅನೇಕರು ಅವನು ಸತ್ತ ಮೇಲೆ ಅವನನ್ನು ದೇವರ ರೂಪದಲ್ಲಿ ಕಂಡು ಅವನ ಗುಣಗಾನವನ್ನು ಲೆಕ್ಕವಿಲ್ಲದಂತೆ ಮಾಡಿಬಿಡುತ್ತಾರೆ. ವ್ಯಕ್ತಿಯ ಸತ್ಕಾರ್ಯಕ್ಕೆ ಮುಕ್ತಕಂಠದಿಂದ ಅವನೆದುರೆ ಅಭಿನಂದಿಸಿದರೆ ಅದರಿಂದ ಅವನಿಗೆ ಅಪರಿಮಿತ ಆನಂದವಾಗುತ್ತದೆ. ಅದಬಿಟ್ಟು ಅವನು ಮಾಡಿದ ಕೆಲಸಗಳಿಗೆ ಕೊಂಕು ನುಡಿಯುತ್ತಾ, ಮರಣಾನಂತರ ಅವನ ಒಳ್ಳೆಯ ಕೆಲಸಗಳನ್ನು ಕೊಂಡಾಡುವುದರಲ್ಲಿ ಅರ್ಥವಿದೆಯೇ? ಇತ್ತೀಚಿಗೆ ಸಾಮಾಜಿಕ ಜಾಲತಾಣದಲ್ಲಿ ಶ್ರದ್ಧಾಂಜಲಿ ಹಾಕುವ ಪರಿಪಾಠ ಅತಿಯಾಗಿಬಿಟ್ಟಿದೆ. ಅಷ್ಟೆ ಅಲ್ಲದೆ ಫ್ಲೆಕ್ಸ್ ಹಾಕಿಸುವ ಸಂಸ್ಕೃತಿಯು ಅಧಿಕವಾಗಿದೆ. ಅನೇಕ ಮಹನೀಯರು ಮರಣ ಹೊಂದಿರುವುದನ್ನು ಖಾತ್ರಿ ಮಾಡಿಕೊಳ್ಳದೆ ಅವರು ಹಾಸಿಗೆ ಹಿಡಿದಿದ್ದಾರೆ ಎಂದು ತಿಳಿದಾಕ್ಷಣ 'ಭಾವಪೂರ್ಣ ಶ್ರದ್ಧಾಂಜಲಿ' ಅರ್ಪಿಸಿ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವ ವಿಲಕ್ಷಣ ಬೆಳವಣಿಗೆ ಜನರ ಮನೋವಿಕೃತಿಗೆ ಹಿಡಿದ ಕೈಗನ್ನಡಿಯಾಗಿದೆ.

ಮನುಷ್ಯ ಭಾವಜೀವಿ ನಿಜ. ತನಗಾಗುವ ನೋವು ನಲಿವುಗಳನ್ನು ತನಗೆ ತಿಳಿದ ರೀತಿಯಲ್ಲಿ ವ್ಯಕ್ತಪಡಿಸುವುದು ಸಹಜ. ಆದರೆ ಅವನ ಮಾತುಗಳು ಅತಿಶಯೋಕ್ತಿ ಎನ್ನುವ ರೀತಿಯಲ್ಲಿ ವ್ಯಕ್ತಪಡಿಸಿದಾಗ ಅಸಹಜವಷ್ಟೇ ಅಲ್ಲ ಅಸಹ್ಯಕರ ಎನಿಸುತ್ತದೆ. ಕುಡಿದು ಬಂದು ನಿತ್ಯ ಮಡದಿಯೊಂದಿಗೆ ಜಗಳ ಕಾಯುತ್ತಿದ್ದ ಗಂಡನಿಗೆ ಸಾವು ಬೇಗ ಬರಬಾರದೇ ಎಂದು ಶಪಿಸುವ ಅವನ ಪತ್ನಿ, ಅವನು ಅಕಾಲಿಕವಾಗಿ ಸಾವನ್ನಪ್ಪುತ್ತಿದ್ದಂತೆ ಸಾರ್ವಜನಿಕವಾಗಿ ಅವನ ಗುಣಗಾನ ಮಾಡಿ ಗೋಳಾಡುವುದು ಯಾವ ಪರಿಯ ಪ್ರೀತಿ, ನೀತಿ?

ವ್ಯಕ್ತಿಯೊಬ್ಬ ಇದ್ದಾಗ ಅವನ ಕುರಿತು ಇರುವ ಮನೋಭಾವವನ್ನು ಆ ವ್ಯಕ್ತಿ ಮರಣ ಹೊಂದಿದ ಮರುಕ್ಷಣವೇ ಬದಲಿಸಿಕೊಂಡು ಬಿಡುತ್ತಾನೆ. ನೀ ಸತ್ತರೂ ಮುಖ ನೋಡುವುದಿಲ್ಲ, ನೀ ಸಾಯುವವರೆಗೂ ಮಾತನಾಡಿಸುವುದಿಲ್ಲ ಎಂದು ಶಪಥ ಮಾಡುವ ಅನೇಕರು ಆ ವ್ಯಕ್ತಿ ಮೃತನಾದ ಎಂದು ತಿಳಿದ ಮರುಕ್ಷಣವೇ ಶವದ ಅಂತಿಮ ದರ್ಶನ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಾರೆ. ಚಿರನಿದ್ರೆಗೆ ಜಾರಿದ ವ್ಯಕ್ತಿಯ ಮುಂದೆ ಹೋಗಿ ಶೋಕಿಸುತ್ತಾ ಒಂದೇ ಒಂದು ಮಾತನಾಡುವಂತೆ ಪೀಡಿಸುತ್ತಾರೆ. ಸಾಯುವವರೆಗೂ ಒಂದು ರೀತಿಯ ಭಾವ ಹೊಂದಿದ್ದವರು ವ್ಯಕ್ತಿ ಗತಿಸಿದ ಎಂದಾಕ್ಷಣ ಮನೋಭಾವವನ್ನೇ ಬದಲಿಸಿಕೊಂಡು ವಿಲಕ್ಷಣವಾದ ರೀತಿಯಲ್ಲಿ ವರ್ತಿಸಿಬಿಡುತ್ತಾರೆ. ಕೆಲವರು ನೋವಿನಲ್ಲೂ ನಾಟಕವಾಡಿ ಅನುಕಂಪ ಗಿಟ್ಟಿಸಲು ಹೋಗಿ ಅಪಹಾಸ್ಯಕ್ಕೆ ಒಳಗಾಗುತ್ತಾರೆ. ಇದ್ದಾಗ ಅವರ ಹುಟ್ಟುಹಬ್ಬಕ್ಕೆ ಶುಭಕೋರಿ ಪತ್ರಿಕೆಯಲ್ಲಿ ಒಂದು ಸಣ್ಣ ಫೋಟೋ ಹಾಕಿಸದ ಜನ, ಅವರು ತೀರಿಹೋದಾಕ್ಷಣ ಸಾವಿರಾರು ರೂಪಾಯಿ ಖರ್ಚು ಮಾಡಿ ದೊಡ್ಡದಾದ ಹತ್ತಾರು ಫ್ಲೆಕ್ಸ್ ಹಾಕಿಸುವುದಂತೂ ಅಪಹಾಸ್ಯದ ಪರಮಾವಧಿ ಎನ್ನಬಹುದು.

ಬಂಧುಗಳು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ತಿಳಿದಿದ್ದರೂ ಒಂದು ದಿನವೂ ಹೋಗಿ ಆರೋಗ್ಯ ವಿಚಾರಿಸದೇ ಇದ್ದವರು ಅವರು ನಿಧನ ಹೊಂದಿದ ಸುದ್ದಿ ತಿಳಿದಾಕ್ಷಣ ದೊಡ್ಡ ಹೂವಿನ ಹಾರದೊಂದಿಗೆ ಓಡಿ ಬಂದು ಮೊಸಳೆ ಕಣ್ಣೀರು ಸುರಿಸುವುದು ನೋಡಿದರೆ ಅವರ ಕುರಿತು ಜಿಜ್ಞಾಸೆ ಮೂಡುತ್ತದೆ. ಅಪ್ಪ ಬದುಕಿದ್ದಾಗ ಖರ್ಚಾಗುತ್ತದೆ ಎಂದೆಣಿಸಿ ಒಂದು ಸಣ್ಣ ತೀರ್ಥಯಾತ್ರೆಯನ್ನು ಮಾಡಿಸದ ಮಗ ಅಪ್ಪ ಸತ್ತಾಗ ಅವನ ಅಂತಿಮ ಯಾತ್ರೆಗೆ ಉದಾರವಾಗಿ ಖರ್ಚು ಮಾಡುವುದು ಅರ್ಥಹೀನ ಎನಿಸುತ್ತದೆ. ಮಾವನವರು ಇದ್ದಾಗ ಬಾಯಿ ರುಚಿಗೆ ಆಗಾಗ್ಗೆ ತಿನ್ನಲು ವಡೆ ಮಾಡಿಕೊಡದೆ ಸತಾಯಿಸಿ ಸೊಸೆಯು ಮಾವನ ನಿಧನದ ನಂತರ ತಿಥಿ ಮಾಡುವ ದಿನ ಮಾವನ ಸಮಾಧಿಗೆ ರಾಶಿಗಟ್ಟಲೆ ವಡೆಯನ್ನು ಎಡೆ ಇಡುವುದು ಹಾಸ್ಯಾಸ್ಪದ. ತನ್ನ ಬಳಗ ಇದ್ದಾಗ ಜಾಗೃತವಾಗದ ಪ್ರೀತಿ, ಮಮತೆ, ಕಾಳಜಿ, ಗೌರವ, ಭಕ್ತಿ, ಅವರು ಗತಿಸಿದ ನಂತರ ಜಾಗೃತವಾಗುವುದು ವಿಷಾಧನೀಯ!

> “ ವ್ಯಕ್ತಿಯೊಬ್ಬ ಇದ್ದಾಗ ಅವನ ಕುರಿತು ಇರುವ ಮನೋಭಾವವನ್ನು ಆ ವ್ಯಕ್ತಿ ಮರಣ ಹೊಂದಿದ ಮರುಕ್ಷಣವೇ ಬದಲಿಸಿಕೊಂಡು ಬಿಡುತ್ತಾನೆ. ನೀ ಸತ್ತರೂ ಮುಖ ನೋಡುವುದಿಲ್ಲ, ನೀ ಸಾಯುವವರೆಗೂ ಮಾತನಾಡಿಸುವುದಿಲ್ಲ ಎಂದು ಶಪಥ ಮಾಡುವ ಅನೇಕರು ಆ ವ್ಯಕ್ತಿ ಮೃತನಾದ ಎಂದು ತಿಳಿದ ಮರುಕ್ಷಣವೇ ಶವದ ಅಂತಿಮ ದರ್ಶನ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಾರೆ. ಚಿರನಿದ್ರೆಗೆ ಜಾರಿದ ವ್ಯಕ್ತಿಯ ಮುಂದೆ ಹೋಗಿ ಶೋಕಿಸುತ್ತಾ ಒಂದೇ ಒಂದು ಮಾತನಾಡುವಂತೆ ಪೀಡಿಸುತ್ತಾರೆ. ಸಾಯುವವರೆಗೂ ಒಂದು ರೀತಿಯ ಭಾವ ಹೊಂದಿದ್ದವರು ವ್ಯಕ್ತಿ ಗತಿಸಿದ ಎಂದಾಕ್ಷಣ ಮನೋಭಾವವನ್ನೇ ಬದಲಿಸಿಕೊಂಡು ವಿಲಕ್ಷಣವಾದ ರೀತಿಯಲ್ಲಿ ವರ್ತಿಸಿಬಿಡುತ್ತಾರೆ. ಕೆಲವರು ನೋವಿನಲ್ಲೂ ನಾಟಕವಾಡಿ ಅನುಕಂಪ ಗಿಟ್ಟಿಸಲು ಹೋಗಿ ಅಪಹಾಸ್ಯಕ್ಕೆ ಒಳಗಾಗುತ್ತಾರೆ. ಇದ್ದಾಗ ಅವರ ಹುಟ್ಟುಹಬ್ಬಕ್ಕೆ ಶುಭಕೋರಿ ಪತ್ರಿಕೆಯಲ್ಲಿ ಒಂದು ಸಣ್ಣ ಫೋಟೋ ಹಾಕಿಸದ ಜನ, ಅವರು ತೀರಿಹೋದಾಕ್ಷಣ ಸಾವಿರಾರು ರೂಪಾಯಿ ಖರ್ಚು ಮಾಡಿ ದೊಡ್ಡದಾದ ಹತ್ತಾರು ಫ್ಲೆಕ್ಸ್ ಹಾಕಿಸುವುದಂತೂ ಅಪಹಾಸ್ಯದ ಪರಮಾವಧಿ ಎನ್ನಬಹುದು.

ಅನೇಕರಿಗೆ ತಮ್ಮ ಪ್ರಗತಿ, ಗೆಲುವು, ಯಶಸ್ಸು, ಸಿರಿವಂತಿಕೆಯಿಂದ ಸಂತೋಷ ಸಿಗುವ ಬದಲು ಬೇರೆಯವರ ಹಿನ್ನಡೆ, ಸೋಲು, ಅಪಯಶಸ್ಸು, ಬಡತನ ಖುಷಿ ಕೊಡುತ್ತೆ. ಅನ್ಯರ ಅಭಿವೃದ್ಧಿ ನಿಜಕ್ಕೂ ಅವರಿಗೆ ಹೊಟ್ಟೆಕಿಚ್ಚು ತರುತ್ತದೆ. ಎಷ್ಟರ ಮಟ್ಟಿಗೆ ಎಂದರೆ ಕೆಲವು ಕಡೆ ಅನ್ಯರ ಏಳಿಗೆಯನ್ನು ಸಹಿಸಲಾಗದೆ ಅವರಿಗೆ ತೊಂದರೆಯಾಗಲಿ ಎಂದು ವಾಮಾಚಾರ ಮಾಡಿಸುವಷ್ಟರ ಮಟ್ಟಿಗೆ ಕೀಳು ಮನೋಭಾವ ಹೊಂದಿರುತ್ತಾರೆ. ಆದರೆ ಆ ವ್ಯಕ್ತಿ ಮರಣ ಹೊಂದಿದರೆ ಅವರ ಮನೆಮುಂದೆ ಹೋಗಿ ಈ ವ್ಯಕ್ತಿಯನ್ನು ಇನ್ನಿಲ್ಲದಂತೆ ಹೊಗಳುತ್ತಾ ಒಂದು ಪ್ರಹಸನವನ್ನೇ ಮಾಡಿಬಿಡುತ್ತಾರೆ.

ದೇವರ ಗುಡಿಯಲ್ಲಿ ಆಗದ ಜ್ಞಾನೋದಯ ಸ್ಮಶಾನದಲ್ಲಿ ಆಗುವುದು ಆಶ್ಚರ್ಯಕರ. ಮನುಷ್ಯ ದೇವಸ್ಥಾನಕ್ಕೆ ಹೊರಡುವಾಗ ಆಸೆಗಳ ಮೂಟೆಯನ್ನೇ ಹೊತ್ತೊಯ್ಯುತ್ತಾನೆ. ಆದರೆ ಸ್ಮಶಾನಕ್ಕೆ ಹೋಗುವಾಗ ವೈರಾಗ್ಯ ಮೂರ್ತಿಯಾಗಿಬಿಡುತ್ತಾನೆ, ಅದು ಕೆಲವರ ಜ್ಞಾನೋದಯ ಕೇಂದ್ರವಾಗಿದೆ. ಆಸೆ ಈಡೇರಿದರೆ ಮತ್ತಷ್ಟು ದುರಾಸೆ ಹುಟ್ಟುತ್ತವೆ. ಆದರೆ ಆಗಾಗ್ಗೆ ಸ್ಮಶಾನಕ್ಕೆ ಹೋಗುವ ಮನುಷ್ಯನಿಗೆ ವೈರಾಗ್ಯ ಹೆಚ್ಚಾಗುವುದಿಲ್ಲ, ಆಸೆಯೂ ಕಡಿಮೆಯಾಗುವುದಿಲ್ಲ. ಶವಸಂಸ್ಕಾರ ಮಾಡುವಾಗ ಎಷ್ಟೆಲ್ಲಾ ಇದ್ದರೂ ಏನು ಕೊಂಡಯ್ಯಲಾಗಲಿಲ್ಲ ಎಂದುಕೊಳ್ಳುತ್ತಾನೆ. ನನಗೂ ಇದೇ ಗತಿಯಲ್ಲವೇ? ಎಂದು ನೊಂದುಕೊಳ್ಳುತ್ತಾನೆ. ಆದರೆ ಆ ವೈರಾಗ್ಯ ಹೆಚ್ಚು ಸಮಯ ಉಳಿಯುವುದಿಲ್ಲ. ಸ್ಮಶಾನದಲ್ಲಿ ಆಡಿದ ವೈರಾಗ್ಯದ ಮಾತುಗಳ ಆಯುಷ್ಯ ಮನೆಗೆ ಅವನು ಬಂದು ಸ್ನಾನ ಮಾಡುವವರೆವಿಗೆ ಮಾತ್ರ. ಸ್ನಾನ ಮಾಡಿದ ನಂತರ ಬದುಕಿನ ಬಂಡಿಯಲ್ಲಿ ಕುಳಿತು ಆಸೆಗಳ ನಕ್ಷತ್ರಗಳನ್ನು ಎಣಿಸಲು ಪ್ರಾರಂಭಿಸುತ್ತಾನೆ.

ಲಾಭ–ನಷ್ಟದ ಮೇಲೆ ಸಂಬಂಧಗಳ ಗಟ್ಟಿತನ ನಿರ್ಧಾರವಾಗುತ್ತದೆ. ಒಬ್ಬ ವ್ಯಕ್ತಿಯ ಕುರಿತಾಗಿ ವ್ಯಕ್ತಪಡಿಸುವ ಅಭಿಪ್ರಾಯ ವಸ್ತುನಿಷ್ಠವಾಗಿರಬೇಕೆ ಹೊರತು ವ್ಯಕ್ತಿನಿಷ್ಠವಾಗಿರಬಾರದು. ಅನೇಕರ ಹೊಗಳಿಕೆಯಲ್ಲಿಯೂ ಸ್ವಾರ್ಥವಿರುತ್ತದೆ. ವ್ಯಕ್ತಿಯನ್ನು ಮುಖಸ್ತುತಿ ಮಾಡುತ್ತಾ, ಹೊನ್ನಶೂಲಕ್ಕೆ ಏರಿಸಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ. ಅಷ್ಟೆ ಏಕೆ ಎಷ್ಟೋ ಜನರು ವ್ಯಕ್ತಿಯೊಬ್ಬ ಗತಿಸಿದ ಮೇಲೂ ತೋರಿಸುವ ಕಾಳಜಿಯಲ್ಲಿಯೂ ಸ್ವಾರ್ಥವಿರುತ್ತದೆ.

ವ್ಯಕ್ತಿಯ ಪ್ರಯೋಜನದ ಮೇಲೆ ಅವನಿಗೆ ಸ್ಥಾನಮಾನ ಲಭಿಸುತ್ತದೆ. ಆದರೆ ಕೆಲವರಿಗೆ ಬದುಕಿದ್ದಾಗ ಸಿಗದ ಸ್ಥಾನಮಾನ ಅವರು ಗತಿಸಿದ ನಂತರ ಎತ್ತರದ ಸ್ಥಾನ ಲಭಿಸಿಬಿಡುವುದನ್ನು ಕಾಣಬಹುದು. ಅದರಲ್ಲೂ ಸೆಲೆಬ್ರಿಟಿಗಳಾದರಂತೂ ಅವರು ವಿಧಿವಶರಾದ ಮೇಲೆ ಅವರ ಕುಟುಂಬದವರೇ ಗಾಬರಿ ಬೀಳುವ ಮಟ್ಟಕ್ಕೆ ಜನರೇ ಅವರನ್ನು ದೇವರ ಸ್ಥಾನಕ್ಕೆ ಏರಿಸಿಬಿಡುತ್ತಾರೆ. ವ್ಯಕ್ತಿ ಪೂಜೆ ಮಾಡುವ ದೌರ್ಬಲ್ಯ ಅನೇಕರಿಗೆ ಇರುತ್ತದೆ. ಆದರೆ ಅದನ್ನು ಬೇರೆಯವರ ಮೇಲೆ ಹೇರುವುದು ಮಾತ್ರ ಅನಾರೋಗ್ಯಕರ ಬೆಳವಣಿಗೆ. ಇದೊಂದು ಸಮೂಹ ಸನ್ನಿಯಂತೆ ಎಲ್ಲೆಡೆ ಇಂದು ಕಾಣಬಹುದಾಗಿದೆ. ಸೆಲೆಬ್ರಿಟಿಗಳಿಗಿಂತಲೂ ಹೆಚ್ಚಿನ ದೇಶಸೇವೆ, ಸಮಾಜಸೇವೆ ಮಾಡಿರುವ ಅನೇಕ ಮಹನೀಯರ ಸಾವು ಸೆಲೆಬ್ರಿಟಿಗಳ ಅಭಿಮಾನಿಗಳ ಅಬ್ಬರದ ಮುಂದೆ ಮಂಕಾಗಿಬಿಡುತ್ತಿರುವುದು ದುರದೃಷ್ಟಕರ.

ಸಕಲ ಜೀವಿಗಳು ಹುಟ್ಟಿದ ಮೇಲೆ ಸಾಯಲೇಬೇಕು, ಅದಕ್ಕೆ ಸಾಧಕರು ಸಹ ಹೊರತಾಗಿಲ್ಲ. ಕೆಲವು ಸಾಧಕರು ಬದುಕಿದ್ದಾರೋ ಇಲ್ಲವೋ ಎಂದು ಅನೇಕ ಜನರಿಗೆ ತಿಳಿದಿರುವುದಿಲ್ಲ. ಆದರೆ ಸಾಧಕರು ತೀರಿಹೋದ ಸುದ್ದಿ ತಿಳಿದಾಕ್ಷಣ ಮಾಧ್ಯಮಗಳ ಮುಂದೆ ಹೋಗಿ ಅವರ ಸಾವು ಆ ಕ್ಷೇತ್ರಕ್ಕೆ ತುಂಬಲಾಗದ ನಷ್ಟ ಎಂದು ಹೇಳುವ ಮಾತು ಕ್ಲೀಷೆಯಾಗಿಬಿಟ್ಟಿದೆ. ಕೆಲವು ಸಾಧಕರ ಸ್ಥಾನವನ್ನು ಮತ್ತೊಬ್ಬರು ತುಂಬಬಹುದು. ಆದರೆ ದೇಶದ ಆಸ್ತಿ ಎನಿಸಿಕೊಳ್ಳುವ ಗಡಿಕಾಯುವ ಯೋಧರು ಹಾಗೂ ಅನ್ನದಾತರಾದ ರೈತರ ಮರಣವಂತು ತುಂಬಲಾರದ ನಷ್ಟವೇ ಸರಿ. ಅವರ ಸ್ಥಾನವನ್ನು ಅಷ್ಟು ಸುಲಭವಾಗಿ ಬೇರೆಯವರು ತುಂಬಲು ಸಾಧ್ಯವಿಲ್ಲ. ಮನರಂಜಿಸುವ ಮಂದಿ ಸತ್ತಾಗ ವ್ಯಕ್ತವಾಗುವ ಶೋಕದ ತೀವ್ರತೆ ದಿನದ ಮೂರು ಹೊತ್ತು ಅನ್ನ ನೀಡುವ ರೈತನಾಗಲಿ, ದೇಶಕಾಯುವ ಯೋಧನಾಗಲಿ ಸತ್ತಾಗ ಜನಪ್ರತಿನಿಧಿಗಳು ಸೇರಿದಂತೆ ಸಾಮಾನ್ಯ ಜನರು ಶೋಕ ವ್ಯಕ್ತಪಡಿಸದೇ ಇರುವುದು ಇಂದಿನ ನಾಗರೀಕ ಸಮಾಜದ ಮನೋದುಸ್ಥಿತಿಗೆ ಹಿಡಿದ ಕೈಗನ್ನಡಿ.

ಮನುಷ್ಯನ ನಡೆನುಡಿ ಸಹಜವಾಗಿರಬೇಕು. ಒಳ್ಳೆಯದನ್ನು ಕಂಡಾಗ ಒಳ್ಳೆಯದನ್ನು ಮಾಡಿದ ಮಹನೀಯರ ಮುಂದೆ ಹೋಗಿ ಮುಕ್ತಮನಸ್ಸಿನಿಂದ ಅಭಿನಂದಿಸುವುದು ಒಳ್ಳೆಯದು. ಅವರ ಅನುಪಸ್ಥಿತಿಯಲ್ಲಿ ಒಳ್ಳೆ ಮಾತನಾಡುವುದಕ್ಕಿಂತ ಅವರ ಎದುರಿಗೆ ಹೇಳಿ ಅವರ ಆತ್ಮ ಸಂತೋಷ ಹೆಚ್ಚಿಸುವ ಅಗತ್ಯವಿದೆ. ಅನಾರೋಗ್ಯ ಪೀಡಿತರಾಗಿದ್ದಾಗ ವಿಚಾರಿಸುವುದು ನಿಧನದ ನಂತರ ಸಂತಾಪ ಸೂಚಿಸುವುದಕ್ಕಿಂತ ಮೇಲು. ಅನ್ಯರ ಆತ್ಮಸಂತೋಷ ವೃದ್ಧಿಸುವ ಮನೋಭಾವ ಹೆಚ್ಚಾಗಬೇಕೆ ವಿನಃ ಅವರ ಮರಣಾ ನಂತರ ಒಳ್ಳೆಯ ಮಾತನಾಡಿ ಅವರ ಆತ್ಮಕ್ಕೆ ಚಿರಶಾಂತಿ ಬಯಸುವುದು ಒಳ್ಳೆಯ ಬೆಳವಣಿಗೆಯಲ್ಲ. ನಮ್ಮೊಟ್ಟಿಗೆ ಇರುವವರನ್ನು ಸಂತೋಷಗೊಳಿಸಲು ಸಾಧ್ಯವಾಗದಿದ್ದರೂ ಅವರೊಂದಿಗೆ ಸಂತೋಷವಾಗಿ ಇರಬಹುದಾದುದು ಮನುಷ್ಯ ಧರ್ಮ. ಇದ್ದಾಗ ಕನಿಷ್ಠ ಮನುಷ್ಯ ಎಂದು ಪರಿಗಣಿಸದೆ ಉದಾಸೀನ ಮಾಡಿ, ಕಡೆಗಣಿಸಿ, ಉಪೇಕ್ಷಿಸಿ, ನಿರ್ಲಕ್ಷ್ಯ ಮಾಡಿ, ತ್ಯಜಿಸಿ ಅವರು ಸತ್ತ ನಂತರ ಪೂಜಿಸಿ, ಆರಾಧಿಸಿ, ಹೊಗಳಿ, ಗುಣಗಾನ ಮಾಡಿ ಅವರಿಗೆ ದೇವರ ಸ್ಥಾನ ನೀಡುವುದು ಅದಾವ ಧರ್ಮ ಅರಿಯದು? ಏನಂತೀರಿ?

ಪದ ತಾಂಬೂಲ : ಸತ್ತಾಗ ಅರಿಯದ ಆತ್ಮಕ್ಕೆ ಚಿರಶಾಂತಿ ಕೋರುವ ಬದಲು

ಇದ್ದಾಗ ಅವರಿಗೆ ಆತ್ಮಸಂತೋಷ ನೀಡುವುದು ಮೇಲು !

ತರಬೇತಿ ನೀಡುವವರು ಇಲ್ಲದೆ ಯೋಗ ಶಿಕ್ಷಣ ಹೇಗೆ ಸಾಧ್ಯ

ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಎಂಎಲ್‌ಸಿ ಮರಿತಿಬ್ಬೆಗೌಡ ಪ್ರಶ್ನೆ

ಮೈಸೂರು, ಫೆ.19(ಜಿಎ)–ಪ್ರತಿ ಶಾಲೆಯಲ್ಲಿಯೂ ಯೋಗ ಶಿಕ್ಷಣ ನೀಡಬೇಕು ಎಂದು ಸರ್ಕಾರ ಹೇಳುತ್ತದೆ. ಆದರೆ, ತರಬೇತಿ ನೀಡುವರು ಇಲ್ಲ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಿದೆ ಎಂದು ವಿಧಾನ ಪರಿಷತ್ ಸದಸ್ಯ ಮರಿತಿಬ್ಬೆಗೌಡ ಮನವಿ ಮಾಡಿದ್ದಾರೆ.



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತ್, ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಏರ್ಪಡಿಸಲಾಗಿರುವ ಮೂರು ದಿನಗಳ ರಾಜ್ಯಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿಲ್ಲ. ಆದರೆ, ಕ್ರೀಡೆಯೂ ವಿದ್ಯಾರ್ಥಿಗಳಲ್ಲಿ ಚೈತನ್ಯ, ಸ್ಫೂರ್ತಿ, ಆತ್ಮಸ್ಥೈರ್ಯ ತುಂಬಲಿದ್ದು, ಆರೋಗ್ಯ ಮತ್ತು ಭ್ರಾತೃತ್ವದ ಮನೋಭಾವವನ್ನು ಹೆಚ್ಚಿಸುತ್ತದೆ. ಆದರಿಂದ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ದೈಹಿಕ ಶಿಕ್ಷಕರ ನೇಮಕಾತಿ ನಡೆದು 12 ವರ್ಷಗಳಾಗಿದ್ದು, ಮತ್ತೆ ಮಾಡಿಲ್ಲ ಇದರಿಂದ ಎಲ್ಲರಿಗೂ ಸಮಾನವಾಗಿ ದೈಹಿಕ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ಶಿಕ್ಷಕರಿಗೆ ನೀಡುವ ಸೌಲಭ್ಯಗಳನ್ನು ನೀಡಿಲ್ಲ. ದೈಹಿಕ ಶಿಕ್ಷಕರಿಗೆ ಪ್ರತ್ಯೇಕವಾಗಿ ಸೌಲಭ್ಯಗಳನ್ನು ಸರ್ಕಾರ ನೀಡಬೇಕು ಹಾಗೂ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ದೈಹಿಕ ಶಿಕ್ಷಕರನ್ನು ನೇಮಕ ಮಾಡುವ ಬದಲು ಪ್ರತಿ ಶಾಲೆಗೂ ದೈಹಿಕ ಶಿಕ್ಷಕರನ್ನು ನೇಮಕ ಮಾಡಬೇಕು ಎಂದು ಆಗ್ರಹಿಸಿದರು.

ಕ್ರೀಡಾಕೂಟದ ಧ್ವಜಾರೋಹಣ ನೆರವೇರಿಸಿದ ಶಾಸಕ ತನ್ವೀರ್ ಸೇಠ್ ಮಾತನಾಡಿ, ವಿದ್ಯಾರ್ಥಿ ದಿಸೆಯಿಂದಲೇ ಮಕ್ಕಳಿಗೆ ದೈಹಿಕ ಆರೋಗ್ಯದ ಮಹತ್ವವನ್ನು ತಿಳಿಸಬೇಕು. ಆ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬೇಕು. ಈ ಕ್ಷೇತ್ರದಲ್ಲಿ ನಾನಾ ಸವಾಲುಗಳಿವೆ. ನಾನು ಶಿಕ್ಷಣ ಸಚಿವನಾಗಿದ್ದಾಗ 250 ವಿದ್ಯಾರ್ಥಿಗಳಿಗೆ ಒಬ್ಬ ದೈಹಿಕ ಶಿಕ್ಷಕರ ನೇಮಕ, ಸಮೀಪದ ಶಾಲೆಗಳನ್ನು ಕ್ರೋಡೀಕರಿಸಿ ದೈಹಿಕ ಶಿಕ್ಷಕರನ್ನು ನೇಮಿಸುವುದು ಮತ್ತು ಶಿಕ್ಷಕರ ಬಡ್ತಿಗೆ ವಿಶೇಷ ಕ್ರಮ ಕೈಗೊಂಡಿದ್ದೆ ಎಂದರು.

ಇತ್ತೀಚಿನ ದಿನಗಳಲ್ಲಿ ಜಾತಿ ನಡುವೆ ಶಿಕ್ಷಣ ಇಲಾಖೆ ಸಿಲುಕಿಕೊಂಡಿದೆ. ಜಾತಿಯತೆಯಿಂದ ಮುಕ್ತವಾದ ಶಿಕ್ಷಣ ವ್ಯವಸ್ಥೆ ಜಾರಿಗೆ ತರುವ ಪ್ರಯತ್ನ ನಡೆದಿದೆ. ಅದರ ಭಾಗವಾಗಿ ಆರ್‌ಟಿಇ ಜಾರಿಗೊಳಿಸಲಾಯಿತು. ಆದರೆ ಈ ನಿಯಮಾವಳಿಯನ್ನು ಭೇದಿಸಲು ಕೆಲವರು ತಮ್ಮ ಶಾಲೆಗಳನ್ನು ಅಲ್ಪಸಂಖ್ಯಾತ ಶಾಲೆಗಳಾಗಿ ಘೋಷಣೆ ಮಾಡಿಕೊಂಡು ಮೋಸ ಮಾಡಿದರು ಎಂದು ಬೇಸರ ವ್ಯಕ್ತಪಡಿಸಿದರು.

ಶಾಸಕ ಎಲ್.ನಾಗೇಂದ್ರ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು. ಮೇಯರ್ ಶಿವಕುಮಾರ್ ಮೈಸೂರಿನಲ್ಲಿ ರಾಜ್ಯಮಟ್ಟದ ಕ್ರೀಡಾಕೂಟ ನಡೆಯುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ಡಾ.ಆರ್.ವಿಶಾಲ್, ಜಿಲ್ಲಾ ಪಂಚಾಯಿತ್ ಸಿಇಓ ಕೆ.ಎಂ. ಗಾಯತ್ರಿ, ಡಿಡಿಪಿಐ ರಾಮಚಂದ್ರರಾಜೇ ಅರಸ್, ಅಲ್ಪ ಸಂಖ್ಯಾತ ಭಾಷೆಗಳ ನಿರ್ದೇಶಕ ಸಿರಿಯಣ್ಣನವರ್ ಲಲಿತಾ ಚಂದ್ರಶೇಖರ್, ದೈಹಿಕ ಶಿಕ್ಷಣ ವಿಭಾಗದ ಸಹ ನಿರ್ದೇಶಕರಾದ ಎಸ್.ಎಸ್.ರಮೇಶ್, ಮೈಸೂರು ವಿಭಾಗದ ವಿಭಾಗೀಯ ಉಪ ನಿರ್ದೇಶಕ ಹೆಚ್.ಟಿ.ವೆಂಕಟೇಶಮೂರ್ತಿ, ಕರ್ನಾಟಕ ರಾಜ್ಯದ ಪ್ರೌಢಶಾಲೆಯ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಪಿ.ಮಹಾದೇವಯ್ಯ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಕೃಷ್ಣ ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ. ಗೋವಿಂದರಾಜು ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮರಸೆ ಗ್ರಾಮದಲ್ಲಿ ಬೋನಿಗೆ ಬಿದ್ದ ಚಿರತೆ



ಮೈಸೂರು, ಫೆ.19–ಜಾನುವಾರುಗಳ ಬೇಟೆಯಾಡಿ ಹತ್ಯೆ ಮಾಡುತ್ತಿದ್ದ ಚಿರತೆಯೊಂದು ಅರಣ್ಯ ಇಲಾಖೆಯವರು ಇರಿಸಿದ್ದ ಬೋನಿಗೆ ಸಿಕ್ಕಿಬಿದ್ದಿರುವ ಘಟನೆ ಮೈಸೂರು ತಾಲೂಕಿನ ಮರಸೆ ಗ್ರಾಮದಲ್ಲಿ ಭಾನುವಾರ ನಡೆದಿದೆ. ಕಳೆದ ಕೆಲವು ದಿನಗಳಿಂದ ಚಿರತೆಯೊಂದು ಜಾನುವಾರುಗಳನ್ನು ಮೇಲೆ ದಾಳಿ ನಡೆಸುತ್ತಿದೆ ಎಂದು ಗ್ರಾಮಸ್ಥರು ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಗುರುವಾರ ವಷ್ಟೇ ಮರಸೆ ಗ್ರಾಮದ ತೋಟವೊಂದರಲ್ಲಿ ಬೋನ್ ಇರಿಸಿದ್ದರು. ಈ ಬೋನಿಗೆ ಅಂದಾಜು ನಾಲ್ಕು ವರ್ಷದ ಗಂಡು ಚಿರತೆ ಸೆರೆ ಸಿಕ್ಕಿದೆ. ಈ ಚಿರತೆಯನ್ನು ಮೈಕ್ರೋಚಿಪ್ಪಿಂಗ್‌ಗಾಗಿ ಪಶು ವೈದ್ಯಕೀಯ ಪರಿವೀಕ್ಷಣೆಯಲ್ಲಿ ಇರಿಸಲಾಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಚಿರತೆಗಳ ಆಗಮನದಿಂದ ಭಾರತದ ಜೀವವೈವಿಧ್ಯಕ್ಕೆ ಉತ್ತೇಜನ ಸಿಕ್ಕಿದೆ

ನವದೆಹಲಿ, ಫೆ.19– ದಕ್ಷಿಣ ಆಫ್ರಿಕಾದಿಂದ ಇನ್ನೂ 12 ಚಿರತೆಗಳ ಆಗಮನದಿಂದ ಭಾರತದ ಜೀವವೈವಿಧ್ಯಕ್ಕೆ ಉತ್ತೇಜನ ಸಿಕ್ಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ. ಈ ಬೆಳವಣಿಗೆಯೊಂದಿಗೆ ಭಾರತದ ವನ್ಯಜೀವಿ ವೈವಿಧ್ಯತೆಯು ಉತ್ತೇಜನವನ್ನು ಪಡೆಯುತ್ತದೆ ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಫೆಬ್ರುವರಿ 18 ರಂದು ಮಾಡಿದ ಟ್ವೀಟ್‌ಗೆ ಪ್ರಧಾನಿ ಮೋದಿ ಪ್ರತಿಕ್ರಿಯಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿಜಿ ಅವರ ನೇತೃತ್ವದಲ್ಲಿ ಪ್ರಾರಂಭವಾದ ಚೀತಾ ಯೋಜನೆಯು ಇಂದು ಕುನೋ ರಾಷ್ಟ್ರೀಯ ಉದ್ಯಾನದಲ್ಲಿ ಮತ್ತೊಂದು ಮೈಲಿಗಲ್ಲನ್ನು ತಲುಪಿದೆ. ಮಧ್ಯ ಪ್ರದೇಶದ ಸಿಎಂ ಶಿವರಾಜ್ ಚೌಹಾಣ್ ಮತ್ತು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಅವರ ಸಮ್ಮುಖದಲ್ಲಿ 12 ಚಿರತೆಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಯಾದವ್ ಶನಿವಾರ ಟ್ವೀಟ್ ಮಾಡಿದ್ದಾರೆ.



ಮೈಸೂರು ತಾಲೂಕು ಜಯಪುರ ಗ್ರಾಮದ ನಿವಾಸಿ ಮಹದೇವಶೆಟ್ಟಿ ಅನಾರೋಗ್ಯದಿಂದ ಬಳಲುತ್ತಿದ್ದು, ಅವರ ಚಿಕಿತ್ಸೆಗಾಗಿ ಸಮಾಜ ಸೇವಕ ಹಾಗೂ ಉದ್ಯಮಿ ಎಸ್.ಶ್ರೀಕಾಂತ್ ವೈಯಕ್ತಿಕ ಆರ್ಥಿಕ ನೆರವು ನೀಡಿದರು. ಈ ವೇಳೆ ಗ್ರಾಮದ ಲೋಕೇಶ್, ಸಂತೋಷ್, ಮಹೇಶ್, ಹೊಸಕೆರೆ ಸಣ್ಣಪ್ಪ, ತೋಟ ಮಹದೇವು, ಮಹದೇವಪುರ ಪ್ರಕಾಶ್, ಗುಜ್ಜನಾಯಕ, ಚಂದ್ರ, ವಿ.ಮಹೇಶ್, ರಂಗಸ್ವಾಮಿ, ರಮೇಶ, ಸಣ್ಣಸ್ವಾಮಿ, ಶಿವಾಜು, ಹೊಸಕೆರೆ ರಮೇಶ, ಗಿರೀಶ ಮತ್ತಿತರರಿದ್ದರು.

ನಾಳೆ ರಾಜ್ಯ ಸರ್ಕಾರಿ ನೌಕರರ ಸಂಘದ ವಿಶೇಷ ಸಭೆ



ಮೈಸೂರು, ಫೆ.19–ರಾಜ್ಯ ಬಜೆಟ್‌ನಲ್ಲಿ ಏಳನೇ ವೇತನ ಆಯೋಗ ಸೇರಿದಂತೆ ಇತರ ಬೇಡಿಕೆಗಳು ಈಡೇರಿಕೆ ಸಂಬಂಧ ಫೆ.21 ರಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ನೇತೃತ್ವದಲ್ಲಿ ಬೆಂಗಳೂರಿನ ಕಚೇರಿಯಲ್ಲಿ ವಿಶೇಷ ಸಭೆ ನಡೆಯಲಿದೆ. ಸಭೆಯಲ್ಲಿ ರಾಜ್ಯಾಧ್ಯಕ್ಷರು ಕೈಗೊಳ್ಳುವ ತೀರ್ಮಾನಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಸಂಘದ ಅಧ್ಯಕ್ಷರು ಪದಾಧಿಕಾರಿಗಳು ಮತ್ತು ವಿವಿಧ ಇಲಾಖೆಯ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಬೆಂಬಲವನ್ನು ಸೂಚಿಸಿದ್ದಾರೆ ಎಂದು ಮೈಸೂರು ಜಿಲ್ಲಾ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ.ಗೋವಿಂದರಾಜು ತಿಳಿಸಿದ್ದಾರೆ.

ಕಾಂಗ್ರೆಸ್ ಪೋಸ್ಟರ್ ಅಭಿಯಾನಕ್ಕೆ ಚುನಾವಣೆಯಲ್ಲಿ ಜನರಿಂದ ತಕ್ಕ ಪಾಠ: ಶಾಸಕ ಎಲ್.ನಾಗೇಂದ್ರ

ಮೈಸೂರು,ಫೆ,19(ಎಂಟಿವೈ)–ಕಾಂಗ್ರೆಸ್ ನಾಯಕರು 'ಕಿವಿ ಮೇಲೆ ಹೂವು' ಪೋಸ್ಟರ್ ಅಭಿಯಾನಕ್ಕೆ ಮುಂಬರುವ ಚುನಾವಣೆಯಲ್ಲಿ ಜನರೇ ಉತ್ತರಿಸಲಿದ್ದಾರೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದ್ದಾರೆ. ಮೈಸೂರಿನ ಗೊಲ್ಲಗೇರಿ ವಾಸವಾಂಬ ಸ್ಟೋರ್ ಬಳಿ 32 ಲಕ್ಷ ರೂ. ವೆಚ್ಚದ ಚರಂಡಿ ಹಾಗೂ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಕಾಂಗ್ರೆಸ್‌ನಿಂದ ಕೀಳು ರಾಜಕೀಯ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮುಖಂಡರ ಕಿವಿ ಮೇಲೆ ಮತದಾರರೇ ಹೂವು ಇಡಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿರುವ ರಾಜ್ಯ ಸರ್ಕಾರದ ಬಜೆಟ್ ಟೀಕಿಸಲು 'ಕಿವಿ ಮೇಲೆ ಹೂವು' ಪೋಸ್ಟರ್ ಅಭಿಯಾನವನ್ನು ಕಾಂಗ್ರೆಸ್‌ನವರು ಕೈಗೊಂಡಿದ್ದಾರೆ. ಇದು ಕೀಳು ರಾಜಕೀಯ. ಚುನಾವಣೆಯಲ್ಲಿ ಜನರು ಕಾಂಗ್ರೆಸ್ ಸೋಲಿಸುವ ಮೂಲಕ ಕಿವಿ ಮೇಲೆ ಹೂವು ಇಡುವುದು ಗೊತ್ತಾಗಿದೆ. ಅದಕ್ಕಾಗಿಯೇ ಸ್ವಯಂ ಪ್ರೇರಣೆಯಿಂದ ಅವರೇ ಕಿವಿ ಮೇಲೆ ಹೂವು ಇಟ್ಟುಕೊಂಡಿದ್ದಾರೆ ಎಂದರು.

ಬಜೆಟ್ ಕುರಿತು ಸದನದಲ್ಲಿ ಚರ್ಚಿಸದೇ, ಬೀದಿಯಲ್ಲಿ ಬಂದು ಕೂಗಾಡುತ್ತಿದ್ದಾರೆ. ಎಲ್ಲ ಕಡೆ ಕಾಂಗ್ರೆಸ್ ಸೋಲನುಭವಿಸುತ್ತಿದೆ. ಕರ್ನಾಟಕದಲ್ಲಿ ಮಾತ್ರ ಕೊಂಚ ಉಸಿರಾಡುತ್ತಿದೆ. ಮುಂದಿನ ಚುನಾವಣೆ ಬಳಿಕ ಆ ಉಸಿರೂ ನಿಂತುಹೋಗುತ್ತದೆ. ಜನರ ಸಮಸ್ಯೆಗಳನ್ನು ಇಟ್ಟುಕೊಂಡು ಹೋರಾಡಬೇಕು. ಕಿವಿ ಮೇಲೆ ಹೂವು ಪೋಸ್ಟರ್ ಅಭಿಯಾನದಿಂದ ಬಡವರ ಹೊಟ್ಟೆ ತುಂಬಲ್ಲ. ಜನರಿಗೂ ಪ್ರಯೋಜನವಾಗಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಶೀಘ್ರದಲ್ಲೇ ವಿಧಾನಸಭಾ ಚುನಾವಣೆ ಬರುವುದರಿಂದ ಇದು ನಾಮ್ ಕಾ ವಾಸ್ತೆ ಬಜೆಟ್ ಎಂಬ ಕಾಂಗ್ರೆಸ್ ಆರೋಪದಲ್ಲಿ ಹುರುಳಿಲ್ಲ. ಈಗ ಬಜೆಟ್ ಮಂಡಿಸಲಾಗಿದೆ. ಮುಂದಿನ ಅವಧಿಗೂ ಬಿಜೆಪಿಯೇ ಅಧಿಕಾರಕ್ಕೆ ಬರಲಿದೆ. ಕೊಟ್ಟಿರುವ ಭರವಸೆಗಳನ್ನು ಈಡೇರಿಸಲಾಗುವುದು. ಸಿದ್ದರಾಮಯ್ಯ ಸರ್ಕಾರದ ಎಲ್ಲ ಭರವಸೆಗಳನ್ನು ಈಡೇರಿಸಿದ್ದರೆ ಏಕೆ ಕಾಂಗ್ರೆಸ್‌ಗೆ ಸೋಲಾಯಿತು? ಎಂದು ಪ್ರಶ್ನಿಸಿದರು.

ಬಿಜೆಪಿ ಸರ್ಕಾರದ ವಿರುದ್ಧ ಶೇ.40ರಷ್ಟು ಕಮಿಷನ್ ಆರೋಪವನ್ನು ಕಾಂಗ್ರೆಸ್‌ನವರು ಈವರೆಗೂ ಸಾಬೀತು ಪಡಿಸಿಲ್ಲ. ಈ ಕುರಿತು ಲೋಕಾಯುಕ್ತರಿಗೆ ದೂರು ಕೊಡಬಹುದಾಗಿತ್ತು. ನ್ಯಾಯಾಲಯದ ಮೊರೆ ಹೋಗಲು ಅವಕಾಶವಿತ್ತು. ಈ ಕುರಿತು ದಾಖಲೆ ಬಿಡುಗಡೆ ಮಾಡಲು ಸವಾಲು ಹಾಕುತ್ತೇನೆ ಎಂದರು.



ಗ್ರಾಮೀಣ ಸೊಗಡಿನ 'ದೊಡ್ಡಹಟ್ಟಿ ಬೋರೇಗೌಡ' ಚಲನಚಿತ್ರವನ್ನು ಮಾಜಿ ಸಚಿವ, ಹಾಲಿ ಶಾಸಕ ಜಿ.ಟಿ.ದೇವೇಗೌಡರು ಮೈಸೂರಿನ ಡಿಆರ್‌ಸಿ ಮಲ್ಟಿಪ್ಲೆಕ್ಸ್‌ನಲ್ಲಿ ಭಾನುವಾರ ಸಂಜೆ ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು. ಗಂಭೀರ ಕಥಾವಸ್ತುವಿಗೆ ಹಾಸ್ಯ ಲೇಪನ ಮಾಡಿ ಅತ್ಯುತ್ತಮವಾಗಿ ಚಿತ್ರ ನಿರ್ಮಿಸಿದ್ದು, ಪ್ರತಿಯೊಬ್ಬರೂ ಒಮ್ಮೆ ನೋಡಬೇಕೆಂದು ಹೇಳಿದರು. ಈ ವೇಳೆ ಚಿತ್ರತಂಡದವರು ಜೊತೆಯಲ್ಲಿದ್ದರು.

ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಕೊಹ್ಲಿ ದಾಖಲೆ


25 ಸಾವಿರ ರನ್ ಗಳಿಸಿದ ಭಾರತದ 2ನೇ ಆಟಗಾರ



ನವದೆಹಲಿ, ಫೆ.19– ಭಾರತದ ಸ್ಟಾರ್ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾನುವಾರ ಮತ್ತೊಂದು ದೊಡ್ಡ ಸಾಧನೆ ಮಾಡಿದ್ದು, ಅಂತರಾಷ್ಟ್ರೀಯ ಕ್ರಿಕೆಟ್‌ನಲ್ಲಿ 25000 ರನ್ ಪೂರೈಸಿದ್ದಾರೆ. ಈ ಮೂಲಕ ವಿರಾಟ್ ಕೊಹ್ಲಿ 2 ಸಾವಿರ ರನ್ ಗಳಿಸಿದ ಭಾರತದ ಎರಡನೇ ಬ್ಯಾಟ್ಸ್‌ಮನ್ ಮತ್ತು ವಿಶ್ವದ ಆರನೇ ಬ್ಯಾಟ್ಸ್‌ಮನ್ ಆಗಿದ್ದಾರೆ.

ವಿಶೇಷವೆಂದರೆ ಕೊಹ್ಲಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತ್ಯಂತ ಕಡಿಮೆ ಅಂದರೆ 549 ಇನ್ನಿಂಗ್ಸ್‌ಗಳಲ್ಲಿ 53.7 ಸರಾಸರಿಯಲ್ಲಿ 25000 ರನ್ ಪೂರೈಸಿದ್ದಾರೆ ಮತ್ತು ಇದರೊಂದಿಗೆ ವೇಗವಾಗಿ 25 ಸಾವಿರ ರನ್ ಗಳಿಸಿದ ವಿಶ್ವದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಭಾನುವಾರ ರಾಜಧಾನಿ ದೆಹಲಿಯ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆದ ಎರಡನೇ ಟೆಸ್ಟ್ ಪಂದ್ಯದ ಮೂರನೇ ದಿನದಂದು ಕಿಂಗ್ ಕೊಹ್ಲಿ ಭಾರತದ ಎರಡನೇ ಇನ್ನಿಂಗ್ಸ್‌ನಲ್ಲಿ ಈ ಸಾಧನೆ ಮಾಡಿದರು.

ತೆಲುಗು ನಟ ನಂದಮೂರಿ ತಾರಕರತ್ನ ನಿಧನ



ಬೆಂಗಳೂರು, ಫೆ.19– ತೆಲುಗಿನ ಖ್ಯಾತ ನಟ ನಂದಮೂರಿ ತಾರಕತ್ನ ವಿಧಿವಶರಾಗಿದ್ದಾರೆ. ಅವರಿಗೆ 39 ವರ್ಷ ವಯಸ್ಸಾಗಿತ್ತು. ತೀವ್ರ ಹೃದಯಾಘಾತಕ್ಕೀಡಾಗಿದ್ದ ತಾರಕರತ್ನ ಅವರಿಗೆ ನಾರಾಯಣ ಹೃದಯಾಲಯದಲ್ಲಿ ಕಳೆದ 23 ದಿನಗಳಿಂದ ಚಿಕಿತ್ಸೆ ನೀಡಲಾಗುತಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಅವರು ಶನಿವಾರ ರಾತ್ರಿ ಕೊನೆಯುಸಿರೆಳೆದಿದ್ದಾರೆ.

ಆಂಧ್ರಪ್ರದೇಶದ ಕುಪ್ಪಂನಲ್ಲಿ ಜನವರಿ 27 ರಂದು ಟಿಡಿಪಿ ಅಧ್ಯಕ್ಷ ಎನ್. ಚಂದ್ರಬಾಬು ನಾಯ್ಡು ಅವರ ಪುತ್ರ ನಾರಾ ಲೋಕೇಶ್ ನೇತೃತ್ವದಲ್ಲಿ ನಡೆಯುತ್ತಿದ್ದ ಪಾದಯಾತ್ರೆಯಲ್ಲಿ ತೀವ್ರ ಹೃದಯಾಘಾತಕ್ಕೊಳಗಾಗಿದ್ದ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಾರಾಯಣ ಹೃದಯಾಲಕ್ಕೆ ದಾಖಲಿಸಲಾಗಿತ್ತು.

ನಂದಮೂರಿ ಮೋಹನ ಕೃಷ್ಣ ಅವರ ಪುತ್ರರಾದ ತಾರಕರತ್ನ ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಅವರ ಮೊಮ್ಮಗ. ಜೂನಿಯರ್ ಎನ್‌ಟಿಆರ್ ಅವರ ಸೋದರ ಸಂಬಂಧಿಯಾಗಿದ್ದು, ತಾರಕ್, ಯುವರತ್ನ ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಮೃತ ನಟ ಪತ್ನಿ ಅಲೇಖ್ಯಾ ರೆಡ್ಡಿ, ಪುತ್ರಿ ನಿಷ್ಕಾ ಅವರನ್ನು ಆಗಲಿದ್ದಾರೆ. ಪಾರ್ಥೀವ ಶರೀರವನ್ನು ಆಂಬ್ಯುಲೆನ್ಸ್ ನಲ್ಲಿ ಹೈದ್ರಾಬಾದ್ ಗೆ ರವಾನಿಸಲಾಯಿತು.



ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿ ಬ್ರಹ್ಮೇಶ್ವರ ದೇಗುಲದಲ್ಲಿ ಶನಿವಾರ ರಾತ್ರಿ ನಡೆದ ಜಾವದ ಪೂಜೆಯಲ್ಲಿ ಬ್ರಹ್ಮೇಶ್ವರ, ಪಾರ್ವತಿ ದೇವಿ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಹುಲ್ಲಿನ ಮೆದೆಗೆ ಬೆಂಕಿ




ಹಲಗೂರು, ಫೆ.19– ಹುಲ್ಲಿನ ಮೆದೆಗೆ ಆಕಸ್ಮಿಕ ಬೆಂಕಿ ಬಿದ್ದು ಲಕ್ಷಾಂತರ ರೂ. ಮೌಲ್ಯದ ಹುಲ್ಲು ಬೆಂಕಿಗೆ ಆಹುತಿಯಾಗಿರುವ ಘಟನೆ ಹಲಗೂರು ಸಮೀಪದ ದೇವಿರ ಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಮರೀಗೌಡ ಎಂಬುವರ ಪುತ್ರ ಕೃಷ್ಣ ಅವರಿಗೆ ಸೇರಿದ 2 ಹುಲ್ಲಿನ ಮೆದೆಗೆ ಬೆಂಕಿ ಬಿದ್ದಿದ್ದು, ಸಂಪೂರ್ಣ ಆಹುತಿಯಾಗಿದೆ. ಸ್ಥಳಕ್ಕೆ ಅಗ್ನಿ ಶಾಮಕ ಸಿಬ್ಬಂದಿ ಭೇಟಿ ನೀಡಿ, ಬೆಂಕಿ ನಂದಿಸುವ ಕೆಲಸಕ್ಕೆ ಮುಂದಾದರೂ ಸಹ ಫಲಕಾರಿಯಾಗಲಿಲ್ಲ ಈ ಸಂಬಂಧ ಕುಟುಂಬ ಸ್ಥರು, ಗ್ರಾಮಸ್ಥರು ಪರಿಹಾರಕ್ಕೆ ಒತ್ತಾಯಿಸಿದ್ದಾರೆ.

ಗುರುಕುಲ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯ ತುಂಬಲಿದೆ

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಭಿಮತ



ಶ್ರೀರಂಗಪಟ್ಟಣ, ಫೆ.19– ಡ್ರಾಪ್‌ಔಟ್ ದೇಶದ ಒಂದು ದೊಡ್ಡ ಸಮಸ್ಯೆಯಾಗಿದೆ. ಅದನ್ನು ತೊಡೆದುಹಾಕಲು ಹೆಚ್ಚಿನ ಪ್ರಯತ್ನಗಳ ಅಗತ್ಯವಿದೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸುವ ಹಾಗೂ ದೇಶದ ಮುಂದಿನ ಭವಿಷ್ಯದ ದೃಷ್ಟಿಯಿಂದ ವಿವಿಧ ಸಂಘ ಸಂಸ್ಥೆಗಳು ವಿದ್ಯಾರ್ಥಿಗಳು ಹಾಗೂ ಗ್ರಾಮಗಳನ್ನು ಶಿಕ್ಷಣಕ್ಕಾಗಿ ದತ್ತು ತೆಗೆದುಕೊಳ್ಳುವ ಪ್ರಯತ್ನ ಮಾಡಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ತಿಳಿಸಿದರು.

ನಗರದಲ್ಲಿ ಶ್ರೀಸ್ವಾಮಿನಾರಾಯಣ ಗುರು ಕುಲ ಅಂತರಾಷ್ಟ್ರೀಯ ಶಾಲೆ ಉದ್ಘಾಟಿಸಿ ಮಾತನಾಡಿದ ಅವರು, ಜೀವನದ ಯಶಸ್ಸಿನಲ್ಲಿ ಶಿಕ್ಷಣ ಮಹತ್ತರ ಕೊಡುಗೆ ನೀಡಿದೆ. ಶಿಕ್ಷಣ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಉಪಯುಕ್ತವಾಗಿದೆ. ಒಬ್ಬ ವ್ಯಕ್ತಿ ಶಿಕ್ಷಣ ಪಡೆದಾಗ ಮಾತ್ರ ಅವನ ಅಭಿವೃದ್ಧಿಯಾಗುತ್ತದೆ. ಶಿಕ್ಷಣವು ನಮಗೆ ತಾಂತ್ರಿಕ ಮತ್ತು ಹೆಚ್ಚು ನುರಿತ ಜ್ಞಾನ ಮತ್ತು ಆಲೋಚನೆ ವ್ಯಕ್ತಪಡಿಸುವ ಸಾಮರ್ಥ್ಯ ನೀಡುತ್ತದೆ. ಶಿಕ್ಷಣವು ಕೌಶಲ್ಯಗಳನ್ನು ಹೆಚ್ಚಿಸುತ್ತದೆ. ನಾವು ಯಶಸ್ವಿ ರೈತ, ಯಶಸ್ವಿ ವ್ಯಾಪಾರಿಗಳಾಗಬಹುದು, ಕೌಶಲ್ಯದಿಂದ ಮಾತ್ರ ನಾವು ನಮ್ಮ ಯಶಸ್ವಿ ಸ್ವಯಂ ಉದ್ಯೋಗ ಸ್ಥಾಪಿಸಬಹುದು ಎಂದು ಅಭಿಪ್ರಾಯಪಟ್ಟರು.

ನಮ್ಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯ ಬಹಳ ಪುರಾತನವಾಗಿದೆ. ಪ್ರಾಚೀನ ಕಾಲದಿಂದಲೂ "ವಸುದೇವಂ ಕುಟುಂಬಕಂ" ತತ್ವಶಾಸ್ತ್ರ ಮತ್ತು ಧ್ಯಾನದ ಮೇಲೆ ಕೇಂದ್ರೀಕೃತವಾಗಿದೆ. "ಸರ್ವೇ ಭವಂತು ಸುಖಿನೋ, ಸರ್ವೇ ಸಂತು ನಿರಾಮಯ" ಎಂಬ ಮನೋಭಾವದಿಂದ ಪ್ರೇರಿತವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶಿಕ್ಷಣ, ಕೌಶಲ್ಯ ಮತ್ತು ನೈತಿಕ ಮೌಲ್ಯಗಳನ್ನು ಜೋಡಿಸುವ ಮೂಲಕ ನವ ಭಾರತ, ಶ್ರೇಷ್ಠ ಭಾರತ, ಆತ್ಮನಿರ್ಭರ ಭಾರತ ಮಾಡಲು ಬದ್ಧರಾಗಿದ್ದಾರೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ನಮ್ಮ ಇಂದಿನ ಮತ್ತು ಭವಿಷ್ಯದ ಪೀಳಿಗೆಯ ಭವಿಷ್ಯವನ್ನು ಉಜ್ವಲವಾಗಿ ಮತ್ತು ಯಶಸ್ವಿಯಾಗುವಂತೆ ಮಾಡಲಿದೆ. ನವ ಭಾರತ ನಿರ್ಮಾಣದಲ್ಲಿ ಇದರ ಪಾತ್ರ ನಿರ್ಣಾಯಕವಾಗಿರುತ್ತದೆ ಎಂದರು.

1948ರಲ್ಲಿ ರಾಜ್‌ಕೋಟ್, ಗುಜರಾತ್‌ನಲ್ಲಿ ಗುರುಕುಲ ಸ್ಥಾಪಿಸಲಾಯಿತು. ಗುರುಕುಲದಿಂದ ಆರಂಭವಾಗಿ, 75 ವರ್ಷಗಳ ಪಯಣದಲ್ಲಿ ಗುರುಕುಲ ಸಂಸ್ಥಾನವು ಬೃಹತ್ ಆಲದ ಮರವಾಗಿ ರೂಪುಗೊಂಡಿದೆ. ಇಂದು ಪ್ರಪಂಚದಾದ್ಯಂತ ಈ ಸಂಸ್ಥೆಯ 51ಕ್ಕೂ ಹೆಚ್ಚು ಶಾಖೆಗಳಿವೆ. ಅವು ಸಮಾಜದಲ್ಲಿ ಸಂಸ್ಕೃತಿ, ನೈತಿಕತೆ ಮತ್ತು ಆಧ್ಯಾತ್ಮಿಕತೆ ಹರಡುತ್ತಿವೆ. ಶ್ರೀ ಸ್ವಾಮಿನಾರಾಯಣ ಗುರುಕುಲ ಅಂತರಾಷ್ಟ್ರೀಯ ಶಾಲೆ "ವಿದ್ಯಾ, ಸದ್ವಿದ್ಯಾ ಮತ್ತು ಬ್ರಹ್ಮವಿದ್ಯೆ" ಮೂಲಕ ತನ್ನ ಶ್ರೇಷ್ಠತೆಗಾಗಿ ದೇಶ ಮತ್ತು ಪ್ರಪಂಚದಲ್ಲಿ ಅತ್ಯುತ್ತಮವಾಗಿದೆ. ಅಂತರಾಷ್ಟ್ರೀಯ ಗುಣಮಟ್ಟದ ಶೈಕ್ಷಣಿಕ ಸೇವೆಗಳೊಂದಿಗೆ, ಗುರುಕುಲ ಇಂಟರ್‌ನ್ಯಾಷನಲ್ ಸ್ಕೂಲ್ ತನ್ನ ವಿದ್ಯಾರ್ಥಿಗಳಲ್ಲಿ ವಿಶ್ವ ದರ್ಜೆ ಆಧುನಿಕ ಶಿಕ್ಷಣ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಜೊತೆಗೆ ನೈತಿಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಲು ಮೀಸಲಾದ ಪ್ರಯತ್ನ ಮಾಡುತ್ತಿದೆ ಎಂದು ಮಾಹಿತಿ ನೀಡಿದರು.

ನಮ್ಮನ್ನು ವಿಶ್ವಗುರು ಎಂದು ಪರಿಗಣಿಸಲಾಯಿತು. ನಮ್ಮ ಆರ್ಥಿಕತೆಯು ದೇಶವನ್ನು ಚಿನ್ನದ ಹಕ್ಕಿ ಎಂದು ಕರೆಯುವಷ್ಟು ಪ್ರಬಲವಾಗಿತ್ತು. ಇದನ್ನು ಮತ್ತೊಮ್ಮೆ ಸಾಧಿಸಲು, ನಮ್ಮ ಯುವ ಕೌಶಲ್ಯ, ಪ್ರತಿಭೆ ಮತ್ತು ಶಕ್ತಿಯನ್ನು ಚಾನಲ್ ಮಾಡುವ ಮೂಲಕ ನಾವು ಸಂಘಟಿತ ಪ್ರಯತ್ನಗಳನ್ನು ಮಾಡಬೇಕಾಗಿದೆ ಮತ್ತು ಇದರಲ್ಲಿ ಯುವಕರ ಪಾತ್ರವು ಮುಖ್ಯವಾಗಿದೆ ಎಂದರು.

ಶಿಕ್ಷಣ ಮತ್ತು ಕ್ರೀಡೆಗಳ ಜೊತೆಗೆ, ಅಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಅದು ನಿಮ್ಮನ್ನು ದೈಹಿಕ ಮತ್ತು ಮಾನಸಿಕವಾಗಿ ಸದೃಢಗೊಳಿಸುತ್ತದೆ. ಇಂದು ಪರಿಸರ ಸಂರಕ್ಷಣೆ ಅಗತ್ಯ ಬಹಳ ಇದೆ. ಪರಿಸರ ಸಂರಕ್ಷಣೆಗೆ ನಿಮ್ಮ ಕೊಡುಗೆಯನ್ನು ನಿಮ್ಮಿಂದ ನಿರೀಕ್ಷಿಸಲಾಗಿದೆ. ಗುರುಕುಲ ಸಂಸ್ಥೆಗಳು ಎಲ್ಲರನ್ನೂ ಒಳಗೊಳ್ಳುವ, ಮಾನವೀಯ, ಮೌಲ್ಯಗಳು ಮತ್ತು ಉತ್ತಮ ಆಲೋಚನೆಗಳು, ಉದ್ಯಮಶೀಲತೆ ಮತ್ತು ಜ್ಞಾನೋದಯಕ್ಕಾಗಿ ಮೌಲ್ಯಯುತ ಮತ್ತು ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಎಂದು ಭರವಸೆ ವ್ಯಕ್ತಪಡಿಸಿದರು.

ಈ ವೇಳೆ ಸದ್ಗುರು ಮಹಂತಸ್ವಾಮಿ, ಶ್ರೀದೇವಿಪ್ರಸಾದ್ ದಾಸ್, ರಾಮಕೃಷ್ಣ ಮಿಷನ್ ಮೈಸೂರಿನ ಸ್ವಾಮಿ ಶ್ರೀಮುಕ್ತಿದಾನಂದ, ಶಾಸಕ ಸಿ.ಎಸ್. ಪುಟ್ಟರಾಜು ಮುಂತಾದ ಗಣ್ಯರು ಉಪಸ್ಥಿತರಿದ್ದರು.

ಮಾ.27ರಿಂದ ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವ



ಮಂಡ್ಯ, ಫೆ.19– ಮೇಲುಕೋಟೆ ಶ್ರೀಚಲುವ ನಾರಾಯಣಸ್ವಾಮಿ ವೈರಮುಡಿ ಬ್ರಹ್ಮೋತ್ಸವ ಮಾ.27ರಿಂದ ಏ.8ರವರೆಗೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಗೋಪಾಲಕೃಷ್ಣ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ವೈರಮುಡಿ ಬ್ರಹ್ಮೋತ್ಸವದ ಎಲ್ಲಾ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಬೇಕು. ಅಧಿಕಾರಿಗಳು ಇದಕ್ಕೆ ಬೇಕಿರುವ ಪೂರ್ವ ಸಿದ್ಧತೆ ಮಾಡಿಕೊಳ್ಳಿ. ಏ.1ರಂದು ವೈರಮುಡಿ ಕಿರೀಟ ಧಾರಣೆ ಮಹೋತ್ಸವಕ್ಕೆ ಕಿರೀಟವನ್ನು ಜಿಲ್ಲಾ ಖಜಾನೆಯಿಂದ ಮೇಲುಕೋಟೆಗೆ ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಗ್ರಾಮಸ್ಥರು ಪೂಜೆ ಸಲ್ಲಿಸುತ್ತಾರೆ. ಇದಕ್ಕೆ ಸೂಕ್ತ ರೂಟ್ ಮ್ಯಾಪ್ ಹಾಗೂ ಭದ್ರತಾ ವ್ಯವಸ್ಥೆಯಾಗಬೇಕು ಎಂದರು.

ಹೊರ ಜಿಲ್ಲೆ ಹಾಗೂ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸುವ ಹಿನ್ನಲೆಯಲ್ಲಿ ಭಕ್ತರಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು. ಹೆಚ್ಚು ಜನ ಸೇರುವ, ವಾಹನ ಪಾರ್ಕಿಂಗ್ ಸ್ಥಳ, ದೇವಸ್ಥಾನದ ಹತ್ತಿರ ಕುಡಿಯುವ ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ ಮಾಡಿ. ನೀರನ್ನು ಪ್ರತಿದಿನ ಪರೀಕ್ಷೆಗೆ ಒಳಪಡಿಸಿ. ಆರೋಗ್ಯ ಇಲಾಖೆಯಿಂದ ಆಂಬುಲೆನ್ಸ್‌ಗಳು ಹಾಗೂ ವೈದ್ಯಕೀಯ ಸಿಬ್ಬಂದಿ ನಿಯೋಜನೆಯಾಗಬೇಕು. ಕೊಳದ ಹತ್ತಿರ ನುರಿತ ಈಜುಗಾರರನ್ನು ನಿಯೋಜಿಸಲು ಸೂಚಿಸಿದರು.

ಮೇಲುಕೋಟೆ ಮುಖ್ಯರಸ್ತೆಗಳ ದುರಸ್ತಿ ಕಾರ್ಯ ಕೈಗೊಳ್ಳಿ. ಭಕ್ತರ ಅಗತ್ಯಕ್ಕೆ ತಕ್ಕಂತೆ ಸಾರಿಗೆ ವ್ಯವಸ್ಥೆ, ಸಿಸಿ ಟಿವಿ, ನಿರಂತರ ವಿದ್ಯುತ್ ಸರಬರಾಜು ಹಾಗೂ ದೀಪಾಲಂಕಾರ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದ ಅವರು, ಮೇಲುಕೋಟೆಯಲ್ಲಿ ದಾಸೋಹ ಭವನದಲ್ಲಿ ಹೆಚ್ಚಿನ ಭಕ್ತರು ಬರುವ ದಿನಗಳಂದು ದಾಸೋಹದ ವ್ಯವಸ್ಥೆ ಮಾಡುವಂತೆ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ಅವರಿಗೆ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಮಾತನಾಡಿ, ವಾಹನ ಪಾರ್ಕಿಂಗ್ ಸ್ಥಳವನ್ನು ಸಮತಟ್ಟಾಗಿ ಯಾವುದೇ ಒಣಹುಲ್ಲು ಇಲ್ಲದಂತೆ ಸಿದ್ಧಪಡಿಸಿ. ಪಾರ್ಕಿಂಗ್ ಸ್ಥಳದಲ್ಲಿ ವಿದ್ಯುತ್ ದೀಪ (ಫೋಕಸ್ ಲೈಟ್) ವ್ಯವಸ್ಥೆ ಮಾಡಿ. ಭಕ್ತರಿಗೆ ಗೋಚರಿಸುವಂತೆ ವ್ಯವಸ್ಥೆಗಳ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಿ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ನಾಗರಾಜು ಮಾತನಾಡಿ, ತಾತ್ಕಲಿಕ ಶೌಚಾಲಯಗಳನ್ನು 4 ರಿಂದ 5 ಕಡೆ ಅಳವಡಿಸಿ. ತಾತ್ಕಲಿಕ ಶೌಚಾಲಯಗಳನ್ನು ಬಾಡಿಗೆ ಆಧಾರದ ಮೇಲೆ ಅಳವಡಿಸಲು ಹೆಚ್ಚಿನ ವೆಚ್ಚವಾದಲ್ಲಿ ಗ್ರಾಪಂನಿಂದ ಇರುವ ಸಮಯದಲ್ಲೇ ಶಾಶ್ವತವಾಗಿ ಸ್ಥಳಗಳನ್ನು ಗುರುತಿಸಿ ನಿರ್ಮಾಣ ಮಾಡಿ ಎಂದರು.

ಸಭೆಯಲ್ಲಿ ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಪಾಂಡವಪುರ ಎಸಿ ನಂದೀಶ್, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕಿ ಐಶ್ವರ್ಯ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಧನಂಜಯ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲ, ಮುಜರಾಯಿ ತಹಸೀಲ್ದಾರ್ ಉಮಾ, ದೇವಸ್ಥಾನದ ಅರ್ಚಕರಾದ ಕೃಷ್ಣಯ್ಯಾಂಗರ್ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಬೇಬಿಬೆಟ್ಟದಲ್ಲಿ ದನಗಳ ಜಾತ್ರೆಗೆ ಶಾಸಕ ಸಿಎಸ್‌ಪಿ ಚಾಲನೆ



ಚಿನಕುರಳಿ, ಫೆ.19– ಇಲ್ಲಿಗೆ ಸಮೀಪದ ಬೇಬಿಬೆಟ್ಟದಲ್ಲಿ ಭಾರೀ ದನಗಳ ಜಾತ್ರಾ ಮಹೋತ್ಸವಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು, ಡಾ.ಶ್ರೀ ತ್ರಿನೇತ್ರಮಹಾಂತಸ್ವಾಮೀಜಿ ಹಾಗೂ ಶ್ರೀ ಶಿವಬಸವ ಸ್ವಾಮೀಜಿ ಚಾಲನೆ ನೀಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಐತಿಹಾಸಿಕ ಹಿನ್ನೆಲೆಯುಳ್ಳ ಬೇಬಿಬೆಟ್ಟದ ಜಾತ್ರೆ ನಡೆಸಲೇಬೇಕು ಎಂದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಅನುಮತಿ ಪಡೆದು ಜಾತ್ರೆಯನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ ಎಂದರು.

ಜಾತ್ರೆಯಲ್ಲಿ ನಿತ್ಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಮಹಿಳಾ ಕ್ರೀಡಾಕೂಟಗಳು ನಡೆಯಲಿವೆ. ವಿವಿಧ ಇಲಾಖೆಗಳಿಂದ ತಮ್ಮ ಇಲಾಖೆಯಲ್ಲಿ ದೊರೆಯುವ ಸೌಲಭ್ಯಗಳ ಕುರಿತು ವಿಶೇಷವಾಗಿ ಸ್ಟಾಲ್‌ಗಳನ್ನು ಹಾಕಲಾಗಿದೆ ಎಂದರು.

ಜಾತ್ರೆಗೆ ಆಗಮಿಸಿರುವ ರಾಸುಗಳಿಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ. ಚಿರತೆಗಳ ಹಾವಳಿ ಇರುವ ಬಗ್ಗೆ ಮಾಹಿತಿ ಇರುವುದರಿಂದ ಈಗಾಗಲೇ ಸಂಬಂಧಪಟ್ಟ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಗಸ್ತು ಇರುವಂತೆ ಸೂಚಿಸಲಾಗಿದೆ. ಜೊತೆಗೆ ಜಾತ್ರಾ ಮೈದಾನದಲ್ಲಿ ಯಾವುದೇ ವಿದ್ಯುತ್ ಅಡಚಣೆ ಮಾಡದಂತೆ ಸಭೆ ನಡೆಸಿ ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಲಾಗಿದ್ದು ಜಾತ್ರೆ ಯಶಸ್ಸಿಗೆ ಎಲ್ಲರೂ ಶ್ರಮಿಸಬೇಕು ಎಂದರು.

ಡಾ.ಶ್ರೀತ್ರಿನೇತ್ರಮಹಾಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ಬೇಬಿಬೆಟ್ಟದ ಜಾತ್ರೆ ದನಗಳ ಜಾತ್ರೆ ಎನ್ನುವುದೇ ಒಂದು ವಿಶೇಷ. ಜಾತ್ರೆಯಲ್ಲಿ ರಾಸುಗಳಿಗೆ ಚಿನ್ನದ ಪದಕ ಬಹುಮಾನ ನೀಡುವುದು ಮತ್ತೊಂದು ವಿಶೇಷವಾಗಿದೆ. ರಾಜ್ಯದಲ್ಲಿ ಯಾವುದಾದರೂ ಒಂದು ದನಗಳ ಜಾತ್ರೆಯಲ್ಲಿ ರಾಸುಗಳಿಗೆ ಚಿನ್ನದ ಬಹುಮಾನ ನೀಡುವ ಜಾತ್ರೆ ಇದೆ ಎಂದರೆ ಅದು ಬೇಬಿಬೆಟ್ಟದ ದನಗಳ ಜಾತ್ರೆ ಎಂದು ಬಣ್ಣಿಸಿದರು.

ವಿವಿಧ ಇಲಾಖೆಗಳ ವಸ್ತು ಪ್ರದರ್ಶನ: ಜಾತ್ರೆ ಅಂಗವಾಗಿ ವಿವಿಧ ಇಲಾಖೆಗಳಿಂದ ವಸ್ತು ಪ್ರದರ್ಶನ ಆಯೋಜಿಸಲಾಗಿತ್ತು. ಶಿಕ್ಷಣ, ಕೃಷಿ, ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ, ಆರೋಗ್ಯ, ಅರಣ್ಯ, ರೇಷ್ಮೆ, ಪಶು ಸಂಗೋಪನೆ, ಸೆಸ್ಕ್, ಮೀನುಗಾರಿಕೆ ಇಲಾಖೆ ಸೇರಿದಂತೆ ಮಳಿಗೆಗಳನ್ನು ನಿರ್ಮಿಸಿ ತಮ್ಮ ಇಲಾಖೆಯಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಗಿತ್ತು. ಅದರಲ್ಲೂ ಶಿಕ್ಷಣ, ಕೃಷಿ ಹಾಗೂ ತೋಟಗಾರಿಗೆ ಇಲಾಖೆ ವಸ್ತು ಪ್ರದರ್ಶನದ ಮಳಿಗೆ ಎಲ್ಲರ ಗಮನ ಸೆಳೆಯಿತು.

ತಹಸೀಲ್ದಾರ್ ಸೌಮ್ಯ ಮಾತನಾಡಿದರು. ಈ ವೇಳೆ ಶ್ರೀಶಿವಬಸವಸ್ವಾಮಿ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಪುರಸಭಾಧ್ಯಕ್ಷೆ ಅರ್ಚನ, ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ಚಲುವರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶ್ವಂತ್ ಕುಮಾರ್, ಎಸಿ ನಂದೀಶ್, ಗ್ರಾಪಂ ಅಧ್ಯಕ್ಷರಾದ ಭವಾನಿ, ಚಂದ್ರಶೇಖರಯ್ಯ, ಪಾಪಣ್ಣ, ಶೃತಿ, ಪವಿತ್ರ, ತಾಪಂ ಮಾಜಿ ಸದಸ್ಯರಾದ ಸಿ.ಎಸ್. ಗೋಪಾಲಗೌಡ, ವಿ.ಎಸ್.ನಿಂಗೇಗೌಡ, ಇಓ ಲೋಕೇಶ್‌ಮೂರ್ತಿ, ಜಾತ್ರೆ ಸಮಿತಿ ಅಧ್ಯಕ್ಷ ನಾಗಣ್ಣ ಸೇರಿದಂತೆ ಜಾತ್ರಾ ಸಮಿತಿ ಸದಸ್ಯರು, ಮುಖಂಡರು ಹಾಜರಿದ್ದರು.

ವಿದ್ಯುತ್ ಸ್ಪರ್ಶದಿಂದ ಜೀವನ್ಮರಣ ಹೋರಾಟದಲ್ಲಿದ್ದ ಕಾಡಾನೆ ರಕ್ಷಣೆ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಿಬ್ಬಂದಿಗೆ ಮೋದಿ ಪ್ರಶಂಸೆ





ಬಂಡೀಪುರ, ಫೆ.19(ಎಂಟಿವೈ)– ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿ ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಕಾಡಾನೆಯನ್ನು ಸಕಾಲಕ್ಕೆ ಚಿಕಿತ್ಸೆ ನೀಡಿ ಜೀವ ಉಳಿಸಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಸಿಬ್ಬಂದಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಟ್ವೀಟ್ ಮಾಡಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ವಿದ್ಯುತ್ ಸ್ಪರ್ಶದಿಂದಾಗಿ ಒದ್ದಾಡುತ್ತಿದ್ದ ಕಾಡಾನೆಯೊಂದನ್ನು ಚಿಕಿತ್ಸೆ ನೀಡಿ ರಕ್ಷಿಸಿದ ದೇಶದಲ್ಲಿ ಮೊಟ್ಟ ಮೊದಲ ಪ್ರಕರಣ ಇದಾಗಿದ್ದು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಪಶುವೈದ್ಯರ ಶ್ರಮಕ್ಕೆ ದೇಶ ದುದ್ದಗಲಕ್ಕೂ ಪ್ರಶಂಸೆಗೆ ಪಾತ್ರವಾಗಿದೆ.

ಫೆ.14ರಂದು ಬೆಳಗ್ಗೆ 7.30ಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ ವಲಯದಲ್ಲಿ ಬರ್ಗಿ ಬೀಟ್ ವ್ಯಾಪ್ತಿಯಲ್ಲಿ 35 ರಿಂದ 40 ವರ್ಷದ ಹೆಣ್ಣು ಕಾಡಾನೆಯೊಂದು ಜಮೀನೊಂದರಲ್ಲಿ ವಿದ್ಯುತ್ ಸ್ಪರ್ಶಕ್ಕೆ ತುತ್ತಾಗಿ ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಮಾಹಿತಿ ಅರಣ್ಯ ಅಧಿಕಾರಿಗಳಿಗೆ ಲಭ್ಯವಾಗಿತ್ತು. ಸ್ಥಳಕ್ಕೆ ಓಂಕಾರ ವಲಯದ ಡಿಆರ್‌ಎಫ್‌ಓ ಶಿವಕುಮಾರ್ ತೆರಳಿ ಪರಿಶೀಲಿಸಿದಾಗ ಕಾಡಾನೆಗೆ ಇನ್ನು ವಿದ್ಯುತ್ ಸ್ಪರ್ಶವಾಗುತ್ತಿದ್ದದ್ದು ಕಂಡು ಬಂದಿದೆ. ಕೂಡಲೇ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಗಂಭೀರ ಸ್ಥಿತಿಗೆ ದೂಡಲ್ಪಟ್ಟಿದ್ದ ಕಾಡಾನೆ ಒದ್ದಾಡುತ್ತಿರುವ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿದ್ದರು. ಕೂಡಲೇ ಪಶುವೈದ್ಯ ಡಾ. ವಾಸಿಂ ಅವರೊಂದಿಗೆ ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿಗಳ ತಂಡ ಹೇಗಾದರೂ ಜೀವ ಉಳಿಸಲೇಬೇಕೆಂದು ಪಣ ತೊಟ್ಟಿದ್ದ ಅರಣ್ಯ ಸಿಬ್ಬಂದಿಗಳ ತಂಡ ಸತತ 4–5ಗಂಟೆ ಚಿಕಿತ್ಸೆ ನೀಡಿದ್ದರು. ಬಳಿಕ ಆನೆಗೆ ಪ್ರಜ್ಞೆ ಬಂದಿತ್ತು.

ಆದರೂ ಮೇಲೇಳಲು ಆಗದಿದ್ದರಿಂದ ಜೆಸಿಬಿಯೊಂದನ್ನು ತಂದು ನೆಲಕ್ಕೊರಗಿದ್ದ ಕಾಡಾನೆಯನ್ನು ಮೇಲಕ್ಕೆತ್ತಲು ಪ್ರಯತ್ನ ಮಾಡಲಾಗಿತ್ತು. ಆರಂಭದಲ್ಲಿ ಆನೆ ಮೇಲೇಳಲು ಪರದಾಡಿತು. ಸತತ ಪ್ರಯತ್ನದಿಂದ ಕೊನೆಗೂ ಕಾಡಾನೆ ಚೇತರಿಸಿಕೊಂಡು, ಅರಣ್ಯದತ್ತ ಹೆಜ್ಜೆ ಹಾಕಿತ್ತು.

ಅಭಿನಂದನೆ ತಿಳಿಸಿದ ಪ್ರಧಾನಿ ಮೋದಿ: ವಿದ್ಯುತ್ ಆಘಾತದಿಂದ ಗಂಭೀರವಾಗಿ ಗಾಯಗೊಂಡು ಸಾವು ಬದುಕಿನ ನಡುವೆ ಹೋರಾಡುತ್ತಿದ್ದ ಕಾಡಾನೆಯನ್ನು ಉಳಿಸಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಿಬ್ಬಂದಿಗಳ ತಂಡವನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ವಿದ್ಯುತ್ ಸ್ಪರ್ಶದಿಂದ ಒದ್ದಾಡುತ್ತಿದ್ದ ಕಾಡಾನೆ ಚಿಕಿತ್ಸೆ ನೀಡುತ್ತಿರುವ ವಿಡಿಯೋ ತುಣುಕನ್ನು ಫೆ.17ರಂದು ಕೇಂದ್ರದ ಅರಣ್ಯ ಸಚಿವಾಲಯದ ಐಜಿ ರಮೇಶ್ ಪಾಂಡೆ ಅವರು ಟ್ವೀಟ್ ಮಾಡಿ, ಅರಣ್ಯ ಇಲಾಖೆಯ ಸಿಬ್ಬಂದಿಗಳ ಸಮಯ ಪ್ರಜ್ಞೆಯಿಂದ ಕಾಡಾನೆ ಜೀವ ಉಳಿದಿದೆ ಎಂದು ಅಭಿನಂದಿಸಿದ್ದರು.

ಫೆ.18ರಂದು ರಮೇಶ್ ಪಾಂಡೆ ಅವರ ಟ್ವೀಟ್‌ನ್ನು ರೀಟ್ವೀಟ್ ಮಾಡಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಅಧಿಕಾರಿಗಳ ಕಾರ್ಯ ವೈಖರಿಗೆ ಪ್ರಶಂಸೆ ವ್ಯಕ್ತಪಡಿಸಿದ್ದರು. ಅಲ್ಲದೆ, ಚಿಕಿತ್ಸೆ ನೀಡುತ್ತಿರುವ ಹಾಗೂ ಚಿಕಿತ್ಸೆ ಪಡೆದ ಬಳಿಕ ಕಾಡಾನೆ ಚೇತರಿಸಿಕೊಳ್ಳುತ್ತಿರುವ ವಿಡಿಯೋ ಪೋಸ್ಟ್ ಮಾಡಿ, ಸಿಬ್ಬಂದಿಗಳ ಸೇವೆ ನೋಡಲು ಸಂತಸವಾಗುತ್ತದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಆತ್ಮಸ್ಥೈರ್ಯ ಹೆಚ್ಚಿಸಿದೆ: ಈ ಕುರಿತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ರಮೇಶ್ ಕುಮಾರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಫೆ.14ರಂದು ವಿದ್ಯುತ್ ಸ್ಪರ್ಶದಿಂದ ಒದ್ದಾಡುತ್ತಿದ್ದ ಹೆಣ್ಣಾನೆಯ ಜೀವ ಉಳಿಸುವುದೊಂದಿಗೆ ನಮ್ಮ ಗುರಿಯಾಗಿ, ತಡ ಮಾಡದೇ ಸಕಾಲಕ್ಕೆ ಚಿಕಿತ್ಸೆ ಆರಂಭಿಸಲಾಗಿತ್ತು. ಸತತ ಪ್ರಯತ್ನದಿಂದ ಕಾಡಾನೆಯ ಜೀವ ಉಳಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಈ ಸುದ್ದಿಯನ್ನು ಗಮನಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮಾಡಿ, ನಮ್ಮ ತಂಡದ ಶ್ರಮವನ್ನು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ದೇಶದ ಪ್ರಧಾನಿಗಳು ಆಡಿರುವ ಶ್ಲಾಘನೆಯ ಮಾತುಗಳಿಂದ ನಮ್ಮ ಆತ್ಮಸ್ಥೈರ್ಯ ಹೆಚ್ಚಾಗಿದೆ. ಈ ಮಾತುಗಳಿಂದ ಪ್ರೇರಣೆ ಪಡೆದು, ಇನ್ನಷ್ಟು ಒಳ್ಳೆಯ ಕೆಲಸ ಮಾಡಲು ಸ್ಫೂರ್ತಿ ದೊರೆತಿದೆ ಎಂದರು.

ಅಲ್ಲದೆ, ಕೇಂದ್ರ ಅರಣ್ಯ ಸಚಿವಾಲಯದ ಐಜಿ ರಮೇಶ್ ಪಾಂಡೆ ಅವರು ಟ್ವೀಟ್ ಮೂಲಕ ಆನೆ ಜೀವ ಉಳಿಸುವ ಕಾರ್ಯಾಚರಣೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ದೇಶದಲ್ಲೇ ಇದು ಮೊಟ್ಟ ಮೊದಲ ಕಾರ್ಯಾಚರಣೆಯಾಗಿದೆ. ವಿದ್ಯುತ್ ಸ್ಪರ್ಶದಿಂದ ಒದ್ದಾಡುತ್ತಿದ್ದ ಕಾಡಾನೆಗೆ ಚಿಕಿತ್ಸೆ ನೀಡುವುದು ಸುಲಭದ ಮಾತಲ್ಲ. ಆದರೂ ಪಶುವೈದ್ಯ ಡಾ.ವಾಸಿಂ ಸೂಕ್ತ ಚಿಕಿತ್ಸೆ ನೀಡಿದ್ದಾರೆ. ವಿದ್ಯುತ್ ಸ್ಪರ್ಶದಿಂದಾಗಿ ಆನೆಯ ದೇಹದಲ್ಲಿ ತೇವಾಂಶವೆಲ್ಲಾ ಬರಿದಾಗಿ, ಜೀವ ಹೋಗುವ ಹಂತಕ್ಕೆ ತಲುಪಿತ್ತು. ಆದರೂ ಸಂಘಟಿತ ಪ್ರಯತ್ನದಿಂದ ಕಾಡಾನೆ ಜೀವ ಉಳಿಸಿದ್ದೇವೆ. ಇದು ನಮ್ಮ ಸಿಬ್ಬಂದಿಗಳಿಗೆ ವನ್ಯಜೀವಿಗಳ ಸಂರಕ್ಷಣೆಯ ಮೇಲಿರುವ ಬದ್ಧತೆಯನ್ನು ತೋರ್ಪಡಿಸುತ್ತದೆ ಎಂದು ತಿಳಿಸಿದರು.

ಒಂದನೇ ಪುಟದಿಂದ

ಆಟೋನಗರ ನಿರ್ಮಾಣಕ್ಕೆ ಗುದ್ದಲಿ ಪೂಜೆ

ಪಾರ್ಕಿಂಗ್ ವ್ಯವಸ್ಥೆ, ವಾಹನ ರಿಪೇರಿ, ಬಿಡಿ ಭಾಗಗಳ ಮಾರಾಟ ಮಳಿಗೆ, ಸರ್ವಿಸ್ ಸ್ಟೇಷನ್ ಸೇರಿದಂತೆ ಮೂಲಭೂತ ಸೌಲಭ್ಯ ಒದಗಿಸಲು ಮುಡಾ ಮುಂದಾಗಿದೆ.

ಟಯರ್, ವ್ಹೀಲ್ ಅಲೈನ್‌ಮೆಂಟ್, ಟಿಂಕರಿಂಗ್–ಪೇಂಟಿಂಗ್, ಅಗ್ನಿಶಾಮಕ ವ್ಯವಸ್ಥೆ, ದುರಸ್ತಿ ಸ್ಥಳಕ್ಕೆ ಕೆಟ್ಟು ನಿಂತ ವಾಹನಗಳನ್ನು ಟೋ ಮಾಡುವುದು, ಲಘು ಮತ್ತು ಮಧ್ಯಮ ವಾಹನಗಳ ದುರಸ್ತಿ ಕಾರ್ಯಾಗಾರಕ್ಕೆ ಆಟೋನಗರದಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

4.5 ಕೋಟಿ ರೂ. ಅನುದಾನದಲ್ಲಿ ನಿರ್ಮಿಸಲುದ್ದೇಶಿಸಿರುವ ಆಟೋನಗರ ಕಾಮಗಾರಿಯನ್ನು ಮೂರ್ನಾಲ್ಕು ದಿನಗಳಲ್ಲಿ ಆರಂಭಿಸಿ 6 ತಿಂಗಳೊಳಗಾಗಿ ಯೋಜನೆ ಪೂರ್ಣಗೊಳಿಸಬೇಕೆಂದು ಸೂಚಿಸಲಾಗಿದೆ. ಇದು ಮೊದಲ ಯೋಜನೆಯಾಗಿದ್ದು, ಇನ್ನೂ ಮೂರು ಕಡೆಗಳಲ್ಲಿಯೂ ಆಟೋನಗರ ಸ್ಥಾಪಿಸಲಾಗುವುದು ಎಂದ ಶಾಸಕರು, ಇದರಿಂದಾಗಿ ಮೈಸೂರು ನಗರದಲ್ಲಿ ವಾಹನಗಳ ರಿಪೇರಿಗೆ ಇರುವ ಸ್ಥಳದ ಕೊರತೆ ನೀಗುತ್ತದೆ ಎಂದರು. ಮುಡಾ ಸದಸ್ಯರಾದ ಲಕ್ಷ್ಮೀದೇವಿ, ನವೀನ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಚನ್ನಕೇಶವ, ಎಕ್ಸಿಕ್ಯೂಟಿವ್ ಇಂಜಿನಿಯರ್ ಮೋಹನ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹರ್ಷ, ಅಸಿಸ್ಟೆಂಟ್ ಇಂಜಿನಿಯರ್ ಲೋಕೇಶ್, ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ದೇವರಾಜ್, ಹಿನಕಲ್ ಚೆನ್ನೇಗೌಡ, ಮೈಸೂರು ಸಿಟಿ ಮೋಟಾರು ವಾಹನ ಮೆಕ್ಯಾನಿಕ್‌ಗಳ ಸಂಘದ ಅಧ್ಯಕ್ಷ ಬಿ.ಎನ್.ಮಹೇಶ್ ರಾಜೇ ಅರಸ್, ಉಪಾಧ್ಯಕ್ಷರಾದ ಸೈಯ್ಯದ್ ನಯಾಜ್ ಅಹಮದ್, ಅಮಾನುಲ್ಲಾ, ಡಿ.ನಾಗರಾಜ್ ಪ್ರಧಾನ ಕಾರ್ಯದರ್ಶಿ ಎಂ.ಎಲ್.ಶಂಕರ್ ಹಾಗೂ ಪದಾಧಿಕಾರಿಗಳು ಈ ಸಂದರ್ಭ ಉಪಸ್ಥಿತರಿದ್ದರು.

ಸಾಧಕರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಪ್ರದಾನ



ಮೈಸೂರು, ಫೆ.19(ಎಸ್‌ಪಿಎನ್)– ವಿವಿಧ ಕ್ಷೇತ್ರದಲ್ಲಿ ಗುರುತಿಸಿಕೊಂಡು ಸಾಧನೆ ಮಾಡಿದ ಹಲವು ಮಂದಿಗೆ ವೇದರತ್ನ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಸೇರಿದಂತೆ ಇತರೆ ಪ್ರಶಸ್ತಿಗಳನ್ನು ನೀಡಿ, ಭಾನುವಾರ ಗೌರವಿಸಲಾಯಿತು.

ಮೈಸೂರಿನ ಟೌನ್‌ಹಾಲ್‌ನಲ್ಲಿ ಶ್ರೀ ಆದಿಶಕ್ತಿ ಶೈಕ್ಷಣಿಕ ಸಾಮಾಜಿಕ ಹಾಗೂ ಕಲಾ ಸಂಸ್ಥೆ ಮತ್ತು ಪಾರಿಜಾತ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟ್ ಸಹಕಾರದೊಂದಿಗೆ ಆಯೋಜಿಸಿದ್ದ ಗೀತಾಗಾಯನ ಕಾರ್ಯಕ್ರಮ ಹಾಗೂ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಸೇರಿದಂತೆ ಇತರೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಶಾಸಕ ಎಲ್.ನಾಗೇಂದ್ರ, ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅನೇಕ ಸಂಘ–ಸಂಸ್ಥೆಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ. ಇಂತಹ ಕಾರ್ಯಕ್ರಮಗಳಿಗೆ ಮೈಸೂರಿಗರಾದ ನಾವು ಪ್ರೋತ್ಸಾಹಿಸಬೇಕು. ಇಂತಹ ವೇದಿಕೆಗಳಿಂದ ಪ್ರತಿಭೆಗಳ ಅನಾವರಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಂತೆ ಎಂದು ತಿಳಿಸಿದರು.

ಸದಾಕಾಲ ಸ್ಮರಿಸಬೇಕು: ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಹಲವು ಅಭಿವೃದ್ಧಿಗಳಿಗೆ ಕಾರ್ಯಗಳಿಗೆ ಕಾರಣಿಭೂತರು, ಮೈಸೂರು ಸಿಲ್ಕ್ ಕಾರ್ಖಾನೆ, ಮೈಸೂರು ಸೋಪ್ ಕಾರ್ಖಾನೆ, ಅರಗು ಮತ್ತು ಬಣ್ಣದ ಕಾರ್ಖಾನೆ, ಮೈಸೂರು ವಿಶ್ವವಿದ್ಯಾಲಯ ಹಾಗೂ ಸಾಹಿತ್ಯ, ನಾಟಕ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಅಂತೆಯೇ ನೀರಾವರಿಗೂ ಹೆಚ್ಚಿನ ಆದ್ಯತೆ ನೀಡಿ, ಜನಮಾನಸದಲ್ಲಿ ಇಂದಿಗೂ ಉಳಿದಿದ್ದು, ಅವರನ್ನು ಸದಾಕಾಲ ಪ್ರಾಂತಃ ಸ್ಮರಣೀಯರು ಎಂದು ಬಣ್ಣಿಸಿದರು.

ಟೌನ್‌ಹಾಲ್ ಅಭಿವೃದ್ಧಿಗೆ ಬದ್ಧ: ಮೈಸೂರು ಜಿಲ್ಲೆಯಲ್ಲಿ ಅನೇಕ ಪ್ರವಾಸಿ ತಾಣಗಳಿವೆ. ಈ ತಾಣಗಳಿಗೆ ದೇಶ–ವಿದೇಶಿ ಪ್ರವಾಸಿಗರ ಕಣ್ಮನ ಸೆಳೆಯುತ್ತಿವೆ. ಪ್ರವಾಸಿ ತಾಣ ಸೇರಿದಂತೆ ಸಮಗ್ರ ಮೈಸೂರಿನ ಅಭಿವೃದ್ಧಿ ಕಾರ್ಯಗಳಿಗೂ ನಮ್ಮ ಸರ್ಕಾರ ಚಾಲನೆ ನೀಡಿದೆ. ಅದರಲ್ಲಿ ಟೌನ್ ಹಾಲ್ ಸಭಾಂಗಣ ನವೀಕರಣಗೊಳಿಸಬೇಕೆಂಬ ಇಚ್ಛೆಯಿತ್ತು. ಆದರೆ, ಈ ಹಿಂದೆ ಗುತ್ತಿಗೆದಾರರೊಬ್ಬ ತಾಂತ್ರಿಕ ಕಾರಣಗಳಿಂದ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿ, ತಡೆಯಾಜ್ಞೆ ತಂದಿರುವುದರಿಂದ ನವೀಕರಣ ಕಾಮಗಾರಿ ಕೈಗೆತ್ತಿಗೊಳ್ಳಲು ಇಲ್ಲಿಯವರೆಗೂ ಸಾಧ್ಯವಾಗುತ್ತಿಲ್ಲ. ಮುಂದೆ ಈ ತಡೆಯಾಜ್ಞೆ ತೆರವುಗೊಳಿಸಿ, ಟೌನ್ ಹಾಲ್ ನವೀಕರಣಗೊಳಿಸಲು ಮುಂದಾಗುತ್ತೇನೆ ಎಂದು ಶಾಸಕರು ಸ್ವಯಂ ಪ್ರೇರಿತರಾಗಿ ಸಭೆಗೆ ತಿಳಿಸಿದರು.

ಕುಡಿಯುವ ನೀರಿಗೆ ಆದ್ಯತೆ: ಮೈಸೂರಿನ ಜನತೆಗೆ ಕುಡಿಯುವ ನೀರು ಇಲ್ಲದ ಸಂದರ್ಭದಲ್ಲಿ ಕೆಆರ್‌ಎಸ್ ಅಣೆಕಟ್ಟು ಕಟ್ಟಿದರು. ಶಿಕ್ಷಣಕ್ಕೆ ಮೈಸೂರು ವಿವಿ ಸೇರಿದಂತೆ ಇತರೆ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಕಿವುಡ–ಮೂಗರ ಶಾಲೆ, ಚಿತ್ರಕಲಾ ಶಾಲೆ ಸೇರಿದಂತೆ ಅನೇಕ ಅಭಿವೃದ್ಧಿಗೆ ಹಲವು ಕಾರ್ಯಕ್ರಮ ಹಮ್ಮಿಕೊಂಡು ಒಂದು ರೀತಿಯಲ್ಲಿ ಮೈಸೂರು ಒಡೆಯರ್ ಅವರು, 'ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ ನಡೆದುಕೊಂಡಿದ್ದಾರೆ ಎಂದು ಕೊಂಡಾಡಿದರು. ಖ್ಯಾತ ಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ಹೆಸರಿನಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸಿ ಶ್ರೀ ಆದಿಶಕ್ತಿ ಶೈಕ್ಷಣಿಕ ಸಾಮಾಜಿಕ ಹಾಗೂ ಕಲಾ ಸಂಸ್ಥೆ ಮತ್ತು ಪಾರಿಜಾತ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟ್‌ನ ಪದಾಧಿಕಾರಿಗಳು ಜೊತೆಗೂಡಿ, ಈ ಪ್ರಶಸ್ತಿ ವಿತರಣೆಗೆ ಮುಂದಾಗಿರುವುದು ಉತ್ತಮ ಸಂಗತಿ ಎಂದು ತಿಳಿಸಿದರು.

ಸನ್ಮಾನ: ಈ ವೇಳೆ ವಿವಿಧ ಕ್ಷೇತ್ರದ ಸಾಧಕರಾದ ಎಚ್.ಎನ್.ಚಂದ್ರಶೇಖರ್, ಸುಲೋಚನಾ, ಶ್ಯಾಮಲಾ, ವಿದ್ವಾನ್ ಮೇಲುಕೋಟೆ ಶ್ರೀನಿವಾಸ್ ಅವರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ, ಎಂ.ಎಸ್. ವಿಶ್ವನಾಥ್ ದೀಕ್ಷಿತ್(ವೇದರತ್ನ), ಎಂ.ಕೀರ್ತಿ (ಅಮೇತ್) (ಆಗಮರತ್ನ), ಹೆಚ್.ಎ.ಕೌಶಿಕ್ (ಜ್ಯೋತಿಷ್ಯ ಪ್ರವೀಣ ಪ್ರಶಸ್ತಿ), ಬಿ.ಎಸ್.ನಾಗೇಂದ್ರ (ಜ್ಯೋತಿಷ್ಯ ರತ್ನ), ನರಸಿಂಹ ಪ್ರಸಾದ (ಸೇವಾರತ್ನ), ಹೆಚ್.ಎನ್.ಮಂಜುಳಾ, ಎಂ.ವಾಣಿಶ್ರೀ, ನಿವೇದಿತಾ ಮಹೇಶ್ ಗೌಡರ್, ಲಕ್ಷ್ಮೀಬಾಯಿ ಪವಾರ್ ಅವರಿಗೆ 'ಸಮಾಜ ಸೇವಾ ರತ್ನ ಪ್ರಶಸ್ತಿ', ಬಿ.ಎಸ್.ಮಂಜುಳಾ, ಲಕ್ಷಿತ ಗಂಗಾವತಿ ಅವರಿಗೆ 'ಸೇವಾ ಭೂಷಣ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಇದಕ್ಕೂ ಮುನ್ನ ಗೀತಾಗಾಯನದಲ್ಲಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 70ಕ್ಕೂ ಕಲಾವಿದರು ವಿವಿಧ ಸಿನಿಮಾ, ಜಾನಪದ, ಭಾವಗೀತೆ ಸೇರಿದಂತೆ ಇತರೆ ಗೀತೆಗಳನ್ನು ಹಾಡಿ ಮೈಸೂರಿಗರನ್ನು ರಂಜಿಸಿದರು.

ಈ ವೇಳೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಾಜಿ ಉಪಾಧ್ಯಕ್ಷ ಆರ್.ಲಕ್ಷ್ಮೀಕಾಂತ್, ಅಖಿಲ ಕರ್ನಾಟಕ ಅರ್ಚಕರ ಆಗಮಿಕರ ಉಪಾಧಿವಂತರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್.ದೀಕ್ಷಿತ್, ಪಶ್ಚಿಮ ವಾಹಿನಿಯ ಬಿ.ವಿ.ಶೇಷಾದ್ರಿ, ಸುವರ್ಣ ತಿರುಮಲ ಪ್ರತಿಷ್ಠಾನದ ಅನಂತ ಪದ್ಮನಾಭರಾವ್, ವಿಜಯಪುರ ರಾಷ್ಟ್ರೀಯ ಮೀನುಗಾರರ ಸಂಘದ ಉಪಾಧ್ಯಕ್ಷ ಗೌತಮ್ ಚೌದರಿ, ಆರ್.ಲೋಕೇಶ್, ವಿನಯ್ ಕಣಗಾಲ್, ಅಶ್ವಿನ್ ವಂದೂರು, ಸಂಜನಾ ನಾಯ್ಡು, ಎಚ್.ಎ.ಶ್ರೀನಿವಾಸ ಮೂರ್ತಿ, ಜಯರಾಮ ನಾಯ್ಡು, ನಟನ ಸಂಸ್ಥೆ ಅಧ್ಯಕ್ಷ ಕೆ.ಎಸ್.ಆನಂದ ಬಾಬು ಸೇರಿದಂತೆ ಇತರರಿದ್ದರು.

ನೀರಿನ ತೊಟ್ಟಿಗೆ ಬಿದ್ದು ಕಾಡಾನೆ ಸಾವು



ಮಡಿಕೇರಿ, ಫೆ.19– ಕಾಫಿ ತೋಟದ ನೀರು ಶೇಖರಣಾ ತೊಟ್ಟಿಯೊಳಗೆ ಕಾಡಾನೆ ಬಿದ್ದು ಮೃತಪಟ್ಟಿರುವ ಘಟನೆ ಶನಿವಾರಸಂತೆ ಬಳಿಯ ಎಳನೀರು ಗುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಚಂದ್ರಶೇಖರ್ ಎಂಬುವರ ಕಾಫಿ ತೋಟದಲ್ಲಿ ನೀರಾವರಿ ಸೌಲಭ್ಯಕ್ಕಾಗಿ ನಿರ್ಮಿಸಿದ್ದ ನೀರು ಶೇಖರಣ ತೊಟ್ಟಿಯೊಳಗೆ ಸುಮಾರು 20 ವರ್ಷದ ಹೆಣ್ಣಾನೆಯೊಂದು ಬಿದ್ದು ಮೃತಪಟ್ಟಿದೆ. ಪಕ್ಕದ ಮೀಸಲು ಅರಣ್ಯದಿಂದ ಹೆಣ್ಣಾನೆ ಸೇರಿದಂತೆ 3 ಕಾಡಾನೆಗಳ ಹಿಂಡು ಕಾಫಿ ತೋಟದೊಳಗೆ ನುಸುಳಿದ್ದವು. ಈ ಸಂದರ್ಭ ಹೆಣ್ಣಾನೆ ಆಕಸ್ಮಿಕವಾಗಿ ಸುಮಾರು 10 ಅಡಿಯಷ್ಟು ಆಳದ ನೀರು ಶೇಖರಣ ತೊಟ್ಟಿಯೊಳಗೆ ಬಿದ್ದು, ಸ್ಥಳದಲ್ಲೇ ಮೃತಪಟ್ಟಿದೆ.

ಶನಿವಾರ ಬೆಳಗ್ಗೆ ತೋಟದ ಕಾರ್ಮಿಕರು ತೊಟ್ಟಿಯಲ್ಲಿ ಆನೆ ಸತ್ತು ಬಿದ್ದಿರುವುದನ್ನು ಗಮನಿಸಿ ಅರಣ್ಯ ಇಲಾಖೆ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಶನಿವಾರಸಂತೆ ಅರಣ್ಯ ವಲಯಾಧಿಕಾರಿ ಪ್ರಮುಲ್‌ಕುಮಾರ್ ಶೆಟ್ಟಿ ಹಾಗೂ ಸಿಬ್ಬಂದಿಗಳು ಸ್ಥಳ ಪರಿಶೀಲನೆ ನಡೆಸಿದರು. ಬಳಿಕ ಆನೆಯ ಮೃತದೇಹವನ್ನು ಕ್ರೇನ್ ಸಹಾಯದಿಂದ ನೀರಿನ ತೊಟ್ಟಿಯಿಂದ ಹೊರತೆಗೆಯಲಾಯಿತು. ಶನಿವಾರಸಂತೆ ಪಶುವೈದ್ಯಾಧಿಕಾರಿ ಡಾ.ಸತೀಶ್ ಆನೆಯ ಕಳೆಬರದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಪಕ್ಕದ ಮೀಸಲು ಅರಣ್ಯಕ್ಕೆ ಕಳೆಬರವನ್ನು ಸ್ಥಳಾಂತರಿಸಲಾಯಿತು.

ಕೌಟುಂಬಿಕ ಕಲಹ: ಗುಂಡಿಟ್ಟು ಮಗನನ್ನು ಕೊಂದ ತಂದೆ

ಮಡಿಕೇರಿ ಬಳಿ ದುರಂತ, ಕೋವಿಯೊಂದಿಗೆ ಆರೋಪಿ ಬಂಧನ

ಮಡಿಕೇರಿ, ಫೆ.19– ಕೌಟುಂಬಿಕ ಕಲಹದಿಂದ ತಂದೆಯೇ ಮಗನ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ ಘಟನೆ ಮಡಿಕೇರಿ ತಾಲೂಕಿನ ಕಟ್ಟೆಮಾಡು ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ನಂದೇಟಿರ ನಿರನ್(28) ಕೊಲೆಯಾದ ದುರ್ದೈವಿ. ಆರೋಪಿ ತಂದೆ ನಂದೇಟಿರ ಚಿಟ್ಟಿಯಪ್ಪ ಅಲಿಯಾಸ್ ಸಾಬು(58) ಎಂಬಾತನನ್ನು ಮಡಿಕೇರಿ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಕಳೆದ ಕೆಲವು ಸಮಯಗಳಿಂದ ತಂದೆ ನಂದೇಟಿರ ಚಿಟ್ಟಿಯಪ್ಪ ಅಲಿಯಾಸ್ ಸಾಬು ಮತ್ತು ಮಗ ನಂದೇಟಿರ ನಿರನ್ ನಡುವೆ ಆಗಾಗ ಕೌಟುಂಬಿಕ ವಿಚಾರಕ್ಕೆ ಸಂಬಂಧಿಸಿದಂತೆ ಜಗಳ ನಡೆಯುತ್ತಿತ್ತು ಎನ್ನಲಾಗಿದೆ. ಭಾನುವಾರ ಸಂಜೆ 4.30ರ ವೇಳೆಗೆ ತಂದೆ ಮಗನ ನಡುವೆ ಮತ್ತೆ ಕಲಹ ಏರ್ಪಟ್ಟು ಅದು ವಿಕೋಪಕ್ಕೆ ತಿರುಗಿದೆ. ಈ ವೇಳೆ ನಂದೇಟಿರ ಚಿಟ್ಟಿಯಪ್ಪ ಸೋಫಾದಲ್ಲಿ ಕುಳಿತು ಟಿ.ವಿ. ನೋಡುತ್ತಿದ್ದ ಮಗ ನಿರನ್‌ನ ಎದೆಯ ಭಾಗಕ್ಕೆ ಏಕಾಏಕಿ ಗುಂಡು ಹಾರಿಸಿದ್ದಾನೆ. ಇದರಿಂದ ನಿರನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಈ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಕೋವಿ ಸಹಿತ ಬಂಧಿಸಲಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಿರನ್ ಮೃತದೇಹವನ್ನು ಮಡಿಕೇರಿ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಇಂದು ವಿದ್ಯುತ್ ಅದಾಲತ್

ಮಡಿಕೇರಿ, ಫೆ.19– ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ಹಿನ್ನಲೆಯಲ್ಲಿ ಮಡಿಕೇರಿ ಉಪ ವಿಭಾಗ ಪೆರಾಜೆ ಗ್ರಾಪಂ ಸಭಾಂಗಣ, ತಾಳತ್ಮನೆ, ಮೇಕೇರಿ, ಬೋಯಿಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ, ಗೋಣಿಕೊಪ್ಪಲು ಉಪ ವಿಭಾಗದ ಹಾತ್ತೂರು ಗ್ರಾಪಂ ಸಭಾಂಗಣ, ವಿರಾಜಪೇಟೆ ಉಪ ವಿಭಾಗದ ಬಿಳುಗುಂದ ಸರ್ಕಾರಿ ಪ್ರೌಢ ಶಾಲಾ ಸಭಾಂಗಣ, ಕುಶಾಲನಗರ ಉಪ ವಿಭಾಗದ ಸಿದ್ದಲಿಂಗಪುರದ ಅರಶಿನಗುಪ್ಪೆ ಮಂಜುನಾಥ ದೇವಸ್ಥಾನ ಸಭಾಂಗಣ ಹಾಗೂ ಸೋ.ಪೇಟೆ ಉಪ ವಿಭಾಗದ ಕಾಟಿಕೊಪ್ಪಲು ಗ್ರಾಮದ ಯಲಕನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ ಫೆಬ್ರವರಿ, 20 ರಂದು ಬೆಳಗ್ಗೆ 11 ಗಂಟೆಯಿಂದ ವಿದ್ಯುತ್ ಅದಾಲತ್ ನಡೆಯಲಿದೆ.

ಸಿಎಂ ಜೊತೆ ಚರ್ಚಿಸಿ ಐನ್‌ಮನೆಗಳ ಅಭಿವೃದ್ಧಿಗೆ 5 ಕೋಟಿ ರೂ. ಅನುದಾನ

ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಭರವಸೆ



ಗೋಣಿಕೊಪ್ಪ/ ಮಡಿಕೇರಿ, ಫೆ.19– ಕೊಡವ ಭಾಷಿಕ ಜನಾಂಗದ ಐನ್‌ಮನೆಗಳ ಅಭಿವೃದ್ಧಿಗೆ 5 ಕೋಟಿ ರೂ.ಗಳ ಅನುದಾನ ಒದಗಿಸಲು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಭರವಸೆ ನೀಡಿದ್ದಾರೆ.

ವಿರಾಜಪೇಟೆ ಬಿಟ್ಟಂಗಾಲದ ಕೊಡಗು ಹೆಗ್ಗಡೆ ಸಮಾಜದ ಸಭಾಂಗಣದಲ್ಲಿ ಕೊಡವ ಭಾಷಿಕ ಸಮುದಾಯಗಳ ಕೂಟ ಆಯೋಜಿಸಿದ್ದ ಒತ್ತೋರ್ಮೆ ಕೂಟದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶೋಷಿತ, ಧ್ವನಿ ರಹಿತ ಸಮುದಾಯಗಳ ಅಭಿವೃದ್ಧಿಯೇ ಸಂವಿಧಾನದ ಆಶಯವಾಗಿದ್ದು, ಆಳುವ ಸರಕಾರಗಳ ಕರ್ತವ್ಯ ಕೂಡ ಅದೇ ಆಗಿದೆ ಎಂದು ಕೋಟಾ ಶ್ರೀನಿವಾಸ ಪೂಜಾರಿ ಹೇಳಿದರು. ಕೊಡವ ಭಾಷಿಕ ಸಮುದಾಯಗಳ ಕುಲಶಾಸ್ತ್ರ ಅಧ್ಯಯನಕ್ಕೆ 25 ಲಕ್ಷ ರೂ.ಗಳ ಅನುದಾನ ನೀಡುವುದಾಗಿ ಘೋಷಿಸಿದ ಸಚಿವರು, ಹಂಪಿ ಅಥವಾ ಮೈಸೂರು ವಿಶ್ವವಿದ್ಯಾಲಯದ ಮೂಲಕ ತಕ್ಷಣವೇ ಕುಲಶಾಸ್ತ್ರ ಅಧ್ಯಯನಕ್ಕೆ ಆದೇಶ ಮಾಡಲಾಗುತ್ತದೆ ಎಂದು ಹೇಳಿದರು.

ಈಗಾಗಲೇ ಜಿಲ್ಲೆಯ ಇಬ್ಬರು ಶಾಸಕರು ಐನ್‌ಮನೆಗಳ ಅಭಿವೃದ್ಧಿಗೆ 5 ಕೋಟಿ ರೂ.ಗಳ ಅನುದಾನ ನೀಡುವಂತೆ ಸಿಎಂಗೆ ಮನವಿ ಮಾಡಿದ್ದಾರೆ. ಈ ಕುರಿತು ಮುಖ್ಯಮಂತ್ರಿಗಳ ಜೊತೆ ಮತ್ತೊಮ್ಮೆ ಚರ್ಚಿಸಿ 5 ಕೋಟಿ ರೂ.ಗಳ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು. ಒಳ ಮೀಸಲಾತಿಗಳ ಕುರಿತು ಸದಾಶಿವ ಆಯೋಗದ ಶಿಫಾರಸುಗಳಿಗೆ ಸರಕಾರ ಸಹಮತ ವ್ಯಕ್ತಪಡಿಸಿದೆ. ಈ ಕುರಿತು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು. ಸಮರ್ಥ ಭಾರತದ ನಿರ್ಮಾಣಕ್ಕೆ ಕೊಡಗು ಜಿಲ್ಲೆ ಅಪಾರ ಕೊಡಗೆ ನೀಡಿದೆ. ಕೊಡವ ಭಾಷಿಕ 18 ಸಮುದಾಯಗಳ ಬೇಡಿಕೆಗಳ ಈಡೇರಿಕೆಗಳಿಗೆ ಹಂತ ಹಂತವಾಗಿ ಕ್ರಮ ವಹಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಬಿಜೆಪಿ ರಾಜ್ಯಾಧ್ಯಕ್ಷ, ಸಂಸದ ನಳಿನ್ ಕುಮಾರ್ ಕಟೀಲ್ ಮಾತನಾಡಿ, ಕೊಡವ ಸಮುದಾಯವನ್ನು ಬಾಲ್ಯದಿಂದಲೇ ಹತ್ತಿರದಿಂದ ಅರಿತಿದ್ದೇನೆ. ಟಿಪ್ಪು ಕೊಡಗಿನ ಮೇಲೆ ದಂಡೆತ್ತಿ ಬಂದ ಸಂದರ್ಭ 32 ಬಾರಿ ಆತನನ್ನು ಸೋಲಿಸಿ ಓಡಿಸಿದ್ದು, ಕೊಡವರ ಪರಾಕ್ರಮಕ್ಕೆ ಸಾಕ್ಷಿಯಾಗಿದೆ. ಇದೇ ಪರಾಕ್ರಮದ ಭಾಗವಾಗಿ ಇಂದಿಗೂ ಸೇನೆಯಲ್ಲಿ ಕೂರ್ಗ್ ರೆಜಿಮೆಂಟ್ ಅಸ್ತಿತ್ವದಲ್ಲಿದ್ದು, ಶೌರ್ಯದ ಪ್ರತೀಕವಾಗಿದೆ ಎಂದು ಹೇಳಿದರು.

ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಕೊಡಗು ಜಿಲ್ಲೆ ಅನೇಕತೆಯಲ್ಲಿ ಏಕತೆಯನ್ನು ಹೊಂದಿದ್ದು, ಹಿಂದೂ ಧರ್ಮದ ಸಾರವೂ ಅದೇ ಆಗಿದೆ ಎಂದು ಹೇಳಿದರು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಘೋಷಣೆಯಂತೆ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ವಿವಿಧ ನಿಗಮಗಳ ಮೂಲಕ ಸಾಕಷ್ಟು ಸೌಲಭ್ಯ ನೀಡಲಾಗುತ್ತಿದೆ. ಕೊಡವ ಭಾಷಿಕ ಸಮುದಾಯಗಳು ಒಂದಾಗಿ ತಮ್ಮ ಸಂಸ್ಕೃತಿ, ಆಚಾರ ವಿಚಾರಗಳನ್ನು ಉಳಿಸಲು ಮುಂದಾಗಬೇಕು ಎಂದು ಕೆ.ಜಿ. ಬೋಪಯ್ಯ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಹಂಪಿ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ತಂಬಂಡ ವಿಜಯ್ ಪೂಣಚ್ಚ, ಒಂದು ಗ್ರಾಮದ ಅಭಿವೃದ್ಧಿಗೆ ವಿವಿಧ ಸಮುದಾಯಗಳು ಹಾಗೂ ಜನಾಂಗಗಳು ಅಗತ್ಯವಾಗಿದ್ದು, ಬ್ರಿಟಿಷ್ ಆಡಳಿತದಲ್ಲಿ ಈ ವ್ಯವಸ್ಥೆ ನೇಪಥ್ಯಕ್ಕೆ ಸರಿಯಿತು ಎಂದು ವಿವರಿಸಿದರು.

ಹೈಕೋರ್ಟ್ ವಕೀಲ, ಕೆಪಿಸಿಸಿ ಕಾನೂನು ಘಟಕದ ರಾಜ್ಯಾಧ್ಯಕ್ಷ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮಾತನಾಡಿ, ಕೊಡವ ಭಾಷಿಕ ಸಮುದಾಯಗಳು ಸಂವಿಧಾನ ಬದ್ಧವಾಗಿಯೇ ತಮ್ಮ ಹಕ್ಕುಗಳನ್ನು ಕೇಳುತ್ತಿದ್ದು, ಅವುಗಳನ್ನು ಈಡೇರಿಸುವುದು ಸರಕಾರಗಳ ಕರ್ತವ್ಯವಾಗಿದೆ. ಕಾನೂನಿನ ಅಡಿಯಲ್ಲಿ ಹಕ್ಕುಗಳನ್ನು ಪಡೆಯಲು ಕೊಡವ ಭಾಷಿಕ ಸಮುದಾಯಗಳು ಸಂಘಟಿತರಾಗಿ ಪ್ರಯತ್ನಿಸಬೇಕೇ ಹೊರತು ಹಿಂದೇಟು ಹಾಕಬಾರದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 18 ಕೊಡವ ಭಾಷಿಕ ಸಮುದಾಯದ ಪ್ರಮುಖರನ್ನು ಗುರುತಿಸಿ ಸನ್ಮಾನಿಸಲಾಯಿತು. ವೇದಿಕೆಯಲ್ಲಿ ವಿಧಾನ ಪರಿಷತ್ ಸದಸ್ಯ ಎಂ.ಪಿ. ಸುಜಾಕುಶಾಲಪ್ಪ, ಕೊಡವ ಭಾಷಿಕ ಸಮುದಾಯಗಳ ಕೂಟದ ಅಧ್ಯಕ್ಷ ಡಾ.ಮೇಚೀರ ಸುಭಾಷ್ ನಾಣಯ್ಯ, ಪಶ್ಚಿಮ ಘಟ್ಟ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಂ. ಗಣೇಶ್, ಕೊರ ಕುಟ್ಟಿರ ಸರಾ ಸಂಗಪ್ಪ, ಬಬ್ಬೀರ ಸರಸ್ವತಿ, ಪಡಿಞರಂಡ ಅಯ್ಯಪ್ಪ ಸೇರಿದಂತೆ 18 ಕೊಡವ ಭಾಷಿಕ ಸಮುದಾಯಗಳ ಅಧ್ಯಕ್ಷರು ಹಾಜರಿದ್ದರು.

ಅಬ್ಬಿಫಾಲ್ಸ್ ಪ್ರವಾಸಿಗರಿಂದ ವೀಕ್ಷಣಾ ಶುಲ್ಕ ವಸೂಲಿ

ಜಾಗದ ಮಾಲೀಕರಿಂದ ಆಕ್ಷೇಪ, ಟಿಕೆಟ್ ಕೌಂಟರ್ ಬಂದ್

ಮಡಿಕೇರಿ, ಫೆ.19– ಜಿಲ್ಲೆಯ ಪ್ರಮುಖ ಪ್ರವಾಸಿ ತಾಣ ಅಬ್ಬಿಫಾಲ್ಸ್‌ಗೆ ಆಗಮಿಸುವ ಪ್ರವಾಸಿಗರಿಂದ ವೀಕ್ಷಣಾ ಶುಲ್ಕ ವಸೂಲಿಗೆ ಜಾಗದ ಮೂಲ ಮಾಲೀಕರು ಆಕ್ಷೇಪ ವ್ಯಕ್ತಪಡಿಸಿದ ಘಟನೆ ನಡೆದಿದೆ 'ಅಬ್ಬಿಫಾಲ್ಸ್ ಎಸ್ಟೇಟ್' ನೆರವಂಡ ಪಾರ್ವತಿ ನಾಣಯ್ಯ ಎಂಬವರ ಖಾಸಗಿ ಆಸ್ತಿಯಾಗಿದ್ದು, ಪ್ರವಾಸಿ ತಾಣವಾಗಿ ರೂಪುಗೊಂಡ ಸಂದರ್ಭ ಫಾಲ್ಸ್‌ಗೆ ತೆರಳುವ ಪಾದಚಾರಿ ಮಾರ್ಗವನ್ನು ಮಾತ್ರವೇ ಜಿಲ್ಲಾಡಳಿತಕ್ಕೆ ಬಿಟ್ಟು ಕೊಟ್ಟಿದ್ದರು. ಈ ವೇಳೆ ಅಬ್ಬಿಫಾಲ್ಸ್ ಸೌಂದರ್ಯ ಸವಿಯಲು ಆಗಮಿಸುವ ಪ್ರವಾಸಿಗರಿಂದ ಯಾವುದೇ ರೀತಿಯ ಹಣ ಪಡೆಯಬಾರದು ಎಂಬ ಒಪ್ಪಂದ ಮಾಡಿಕೊಳ್ಳಲಾಗಿತ್ತು ಎನ್ನಲಾಗುತ್ತಿದೆ.

ಆದರೆ ಕೆಲವು ಸಮಯಗಳಿಂದ ಅಬ್ಬಿಫಾಲ್ಸ್ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರಿಂದ ಪ್ರವೇಶ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಇದಕ್ಕೆ ಜಾಗದ ಮಾಲೀಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮಾತ್ರವಲ್ಲದೇ ಈ ಮೊದಲೇ ಜಿಲ್ಲಾಡಳಿತಕ್ಕೆ ಪತ್ರದ ಮೂಲಕ ದೂರು ನೀಡಿದ್ದ ಮಾಲೀಕರು ಅನಧಿಕೃತ ಶುಲ್ಕ ವಸೂಲಿಯನ್ನು ನಿಲ್ಲಿಸಬೇಕೆಂದು ಮನವಿ ಮಾಡಿದ್ದರು. ಮಾತ್ರವಲ್ಲದೇ ಫಾಲ್ಸ್‌ಗೆ ತೆರಳುವ ಪಾದಚಾರಿ ಮಾರ್ಗದ ಎರಡೂ ಬದಿಯಲ್ಲಿ ಕಾಫಿ ತೋಟವಿದ್ದು, ಪ್ರವಾಸಿಗರು ಕಸ, ಪ್ಲಾಸ್ಟಿಕ್ ಬಾಟಲಿಗಳನ್ನು ಎಸೆಯದಂತೆ ನೆಟ್‌ಗ್ರಿಲ್ಸ್ ಅಳವಡಿಸಲಾಗಿದೆ. ಇನ್ನು ತೋಟದ ಒಳಗೆ ಮಾಲೀಕರು ಮಾತ್ರವೇ ತೆರಳಲು ಅನುಕೂಲವಾಗುವಂತೆ ಗೇಟ್ ಅಳವಡಿಸಿ ಬೀಗ ಹಾಕಲಾಗಿದೆ ಆದರೆ ಸ್ಥಳೀಯ ಗ್ರಾ.ಪಂ. ಬೀಗ ಒಡೆದು ಕಾಫಿ ತೋಟದ ಒಳಗೆ 15 ಚೀಲಗಳಲ್ಲಿ ಕಸ ಶೇಖರಿಸಿಟ್ಟಿದೆ ಎಂದು ಜಾಗದ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದರು. ಮಾತ್ರವಲ್ಲದೇ ಜಾಗದ ಮಾಲೀಕರ ಅನುಮತಿಯನ್ನೇ ಪಡೆಯದೇ ಶುಲ್ಕ ಸಂಗ್ರಹದ ಕೌಂಟರ್ ತೆರೆಯಲಾಗಿದೆ. ಅದಲ್ಲದೇ, ಕಾಫಿ ತೋಟವನ್ನು ಒತ್ತುವರಿ ಮಾಡಿ ಟಿಕೆಟ್ ಕೌಂಟರ್ ತೆರೆಯಲು ಅನುಮತಿ ನೀಡಿದವರು ಯಾರು ಎಂದು ಸ್ಥಳದಲ್ಲಿ ಹಾಜರಿದ್ದ ಶುಲ್ಕ ವಸೂಲಿ ಸಿಬ್ಬಂದಿಗಳ ವಿರುದ್ದ ಅಸಮಾಧಾನ ವ್ಯಕ್ತಪಡಿಸಿದರು. ಬಳಿಕ ಅಬ್ಬಿಫಾಲ್ಸ್‌ಗೆ ತೆರಳುವ ಪ್ರವಾಸಿಗರಿಂದ ಯಾವುದೇ ಶುಲ್ಕ ಪಡೆಯಬಾರದು. ತಕ್ಷಣವೇ ಕೌಂಟರ್‌ಗೆ ಬೀಗ ಹಾಕುವಂತೆ ಸೂಚಿಸಿ ಟಿಕೆಟ್ ಕೌಂಟರ್ ಅನ್ನು ಬಂದ್ ಮಾಡಿಸಿದರು. ಈ ಸಂದರ್ಭ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಮತ್ತು ಸಿಬ್ಬಂದಿಗಳು ಹಾಜರಿದ್ದರು.

ವಿರಾಜಪೇಟೆಯಲ್ಲಿ ಮಹಾಶಿವರಾತ್ರಿ ಆಚರಣೆ



ವಿರಾಜಪೇಟೆ, ಫೆ.19– ಪಟ್ಟಣದ ತೆಲುಗರ ಬೀದಿಯಲ್ಲಿರುವ ಶ್ರೀ ದಕ್ಷಿಣ ಮಾರಿಯಮ್ಮ ಮತ್ತು ಅಂಗಳ ಪರಮೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ಮಹಾ ಶಿವರಾತ್ರಿ ಅಂಗವಾಗಿ ಅಂಗಳ ಪರಮೇಶ್ವರಿ ದೇವಿಗೆ ವಿಶೇಷ ಪೂಜೆಗಳೊಂದಿಗೆ ದೇವಿಯ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಯಿತು.

ಶಿವರಾತ್ರಿ ಅಂಗವಾಗಿ ಫೆ.16 ರಂದು ದೇವಸ್ಥಾನದಲ್ಲಿ ಧ್ವಜಸ್ತಂಬ ಪೂಜೆ ಸಲ್ಲಿಸಿ ಉತ್ಸವಕ್ಕೆ ಚಾಲನೆ ನೀಡಲಾಯಿತು. ಫೆ.17 ರಂದು ತಳಿಗೆ ಪೂಜೆ ಹಾಗೂ ಕಾವಲು ದೇವತೆಗಳಿಗೆ ಪೂಜೆ ಸಲ್ಲಿಸಿದ ಬಳಿಕ ಫೆ.18 ತಲಕಾವೇರಿಯಿಂದ ಶಕ್ತಿ ಆವಾಹನೆ ಅಭಿಷೇಕ ಪೂಜೆಗಳು ನಡೆಯಿತು. ಭಾನುವಾರ ಬೆಳಗ್ಗೆಯಿಂದಲೆ ಅಂಗಳ ಪರಮೇಶ್ವರಿ ದೇವಿಗೆ ವಿಶೇಷ ಪೂಜೆಗಳು ನಡೆದು ಮಧ್ಯಾಹ್ನ ಮಹಾಪೂಜೆ ಪ್ರಸಾದ ವಿನಿಯೋಗ ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸಂಜೆ ಪಲ್ಲಕ್ಕಿಯ ಮೆರವಣಿಗೆಯಲ್ಲಿ ಮಹಿಳೆಯರು ನವದಾನ್ಯಗಳ ಸಸಿಯ ಕಳಸ ಹೊತ್ತು ತೆಲುಗರ ಬೀದಿಯಿಂದ ಹೊರಟು ಮಾರಿಯಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ಮೆರವಣಿಗೆಯಲ್ಲಿ ವಾದ್ಯಗೋಷ್ಠಿ ಮತ್ತು ಕಲಾತಂಡಗಳು ಗಮನ ಸೆಳೆದವು.

ಉಘೇ ಮಾದಪ್ಪ... ಉಘೇ ಮಾದಪ್ಪ...

ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ ಲಕ್ಷಾಂತರ ಭಕ್ತರಿಂದ ಮಾದಪ್ಪನ ದರ್ಶನ, ಮೊಳಗಿದ ಝೇಂಕಾರ



ಹನೂರು, ಫೆ.19– ಮಹಾ ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಲಕ್ಷಾಂತರ ಮಾದಪ್ಪನ ಭಕ್ತರು ಮಲೆ ಮಹದೇಶ್ವರ ಬೆಟ್ಟದಲ್ಲಿ ತಮ್ಮ ನೆಚ್ಚಿನ ಆರಾಧ್ಯ ದೈವ ಮಾದಪ್ಪನ ದರ್ಶನ ಪಡೆದು ಪುನೀತರಾದರು.

ಮುಂಜಾನೆಯಿಂದಲೇ ದೇವರಿಗೆ ವಿಶೇಷ ಪೂಜೆಗಳನ್ನು ನೆರವೇರಿಸಿ ಪೂಜೆ ಸಲ್ಲಿಸಲಾಯಿತು. ಮಾದಪ್ಪನ ಭಕ್ತಾಧಿಗಳು ದೇವಾಲಯದ ಮುಂಭಾಗದಲ್ಲಿ ದೇವರ ದರುಶನಕ್ಕೆ ಏರ್ಪಡು ಮಾಡಲಾಗಿದ್ದ ಕಿ.ಮಿ.ಗಟ್ಟಲೆ ಉದ್ದದ ಸರತಿ ಸಾಲಿನಲ್ಲಿ ಭಕ್ತಿಭಾವದಿಂದ ಬಿಸಿಲನ್ನು ಲೆಕ್ಕಿಸದೆ ಕಾದು ನಿಂತು ಮಾದಪ್ಪನನ್ನು ಕಣ್ತುಂಬಿಕೊಂಡರು. ಉಘೇ ಮಾದಪ್ಪ ಉಘೇ ಮಾದಪ್ಪ ಘೋಷಣೆಗಳನ್ನು ಕೂಗಿದರು.

ಫಲಪುಷ್ಪಗಳಿಂದ ಸಿಂಗಾರ: ಜಾತ್ರಾ ಮಹೋತ್ಸವದ ಅಂಗವಾಗಿ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಒಳಾಂಗಣ ಮತ್ತು ಹೊರಂಗಾಣವನ್ನು ವಿವಿಧ ಫಲ ಪುಷ್ಪಗಳಿಂದ ಆಕರ್ಷಕವಾಗಿ ಸಿಂಗರಿಸಿದ್ದು ವಿಶೇಷವಾಗಿತ್ತು.

ವಿವಿಧ ಸೇವೆ: ರಾಜ್ಯ ಹಾಗೂ ನೆರೆ ರಾಜ್ಯಗಳಿಂದಲೂ ಆಗಮಿಸಿದ್ದ ಭಕ್ತರು ದರ್ಶನಕ್ಕೂ ಮೊದಲು ಅಂತರ ಗಂಗೆಯಲ್ಲಿ ಸ್ನಾನಗೈದರು. ಹರಕೆ ಹೊತ್ತ ಭಕ್ತರು ಮುಡಿ ಸೇವೆ, ಉರುಳು ಸೇವೆ, ರಜ ಸೇವೆ (ಕಸ ಗುಡಿಸುವುದು) ಪೆಂಜಿನ ಸೇವೆ ಹಾಗೂ ಹುಲಿ ವಾಹನ ಸೇವೆ, ಬಸವ ವಾಹನ ಸೇವೆ, ರುದ್ರಾಕ್ಷಿ ಮಂಟಪ ಸೇವೆ, ದಂಡು ಗೋಲು ಸೇವೆ ಇನ್ನಿತರೆ ಸೇವೆಗಳನ್ನು ನೆರವೇರಿಸಿ ದೇವರ ಕೃಪೆಗೆ ಪಾತ್ರರಾದರು.

ಧೂಪ ಸಾಂಬ್ರಾಣಿ ಘಮಲು: ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಮಲೆ ಮಾದಪ್ಪನ ಪುಣ್ಯಕ್ಷೇತ್ರದಲ್ಲಿ ಮಾದಪ್ಪನ ಹೆಸರಿನಲ್ಲಿ ದೂಪ ಸಾಂಬ್ರಾಣಿ ಹಾಕಿದರು. ದೇವಾಲಯದ ಸುತ್ತಮುತ್ತ ಧೂಪದ ಘಮಲು ಹರಡಿತ್ತು. ಮಲೆ ಮಹದೇಶ್ವರ ಬೆಟ್ಟದ ಆಲಂಬಾಡಿ ಬಸವೇಶ್ವರ ಸ್ವಾಮಿಗೂ ಭಕ್ತಾಧಿಗಳು ಪೂಜೆ ಸಲ್ಲಿಸಿದರು.

ಲಾಡು ಪ್ರಸಾದ ಕೊಳ್ಳಲು ಸರತಿ ಸಾಲು: ದೇವಾಲಯದ ಪ್ರಸಾದಗಳಲ್ಲಿ ಅತ್ಯಂತ ಶ್ರೇಷ್ಠ, ರುಚಿಕರ ಲಾಡು ಪ್ರಸಾದವನ್ನು ಕೊಂಡುಕೊಳ್ಳಲು ಭಕ್ತರು ಸರತಿ ಸಾಲಿನಲ್ಲಿ ನಿಂತು ಪಡೆದರು. ಮಹಾ ಶಿವರಾತ್ರಿ ಎಂದರೆ ಜಾಗರಣೆಗೆ ಆ ರಾತ್ರಿ ಮಹತ್ವ. ಈ ಹಿನ್ನೆಲೆಯಲ್ಲಿ ಕಳೆದ ವಾರಗಳಿಂದ ಪಾದಯಾತ್ರೆ ಹಾಗೂ ವಾಹನಗಳಲ್ಲಿ ಆಗಮಿಸಿರುವ ಭಕ್ತರು ತಮ್ಮ ನೆಚ್ಚಿನ ದೇವರ ಪುಣ್ಯನೆಲೆಯಲ್ಲಿ ಜಾಗರಣೆ ಆಚರಿಸುವ ನಿಮಿತ್ತ ದೇವಾಲಯದ ಸುತ್ತಮುತ್ತ ಬೀಡುಬಿಟ್ಟಿದ್ದರು. ದೇವಾಲಯದ ಹೊರಗಿನ ಬೃಹತ್ ಡಾರ್ಮೆಂಟ್‌ರಿಯ ರಂಗಮಂದಿರ ತುಂಬೆಲ್ಲಾ ಚಾಪೆ ದಿಂಬಿನೊಂದಿಗೆ ಆಸಿನರಾಗಿದ್ದರು. ಇದೇ ರೀತಿ ದೇವಾಲಯದ ಸುತ್ತಾಮುತ್ತಾ ತಂಗಿದ್ದರು. ರಾತ್ರಿ ಜಾಗರಣೆ ಹಿನ್ನೆಲೆಯಲ್ಲಿ ವಿವಿಧ ಜಾನಪದ ಕಥಾ ಹಾಗೂ ಗಾಯನ ಕಲಾ ತಂಡಗಳು ಮಲೆಮಹದೇಶ್ವರ ಸ್ವಾಮಿಯ ಮಹತ್ವವನ್ನು ಸಾರುವ ಕಥೆ ಮತ್ತು ಗಾಯನಗಳನ್ನು ಸಾದರಪಡಿಸಿದರು.

ನಿರಂತರ ದಾಸೋಹ: ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಮಲೆ ಮಹದೇಶ್ವರ ಬೆಟ್ಟಕ್ಕೆ ಲಕ್ಷಾಂತರ ಭಕ್ತರು ಭೇಟಿ ನೀಡಿ ಪೂಜೆ ಸಲ್ಲಿಸುತ್ತಿರುವ ಹಿನ್ನಲೆಯಲ್ಲಿ ಪ್ರಾಧಿಕಾರದ ವತಿಯಿಂದ ಬೆಳಗ್ಗೆಯಿಂದ ರಾತ್ರಿಯವರೆಗೂ ಭಕ್ತಾದಿಗಳಿಗೆ ನಿರಂತರ ದಾಸೋಹ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.



ಕೆಂಪು ಬಸ್ಸುಗಳು ಕಲರವ: ಮಹಾ ಶಿವರಾತ್ರಿಯ ಜಾತ್ರಾ ಮಹೋತ್ಸವದ ಅಂಗವಾಗಿ ಮಲೆ ಮಾದಪ್ಪನ ಬೆಟ್ಟಕ್ಕೆ ರಾಜ್ಯದ ನಾನಾ ಮೂಲೆಗಳಿಂದ ಹಾಗೂ ನೆರೆಯ ತಮಿಳುನಾಡಿನಿಂದಲೂ ಕೂಡ ಲಕ್ಷಾಂತರ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ ವತಿಯಿಂದ ಹೆಚ್ಚಿನ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಅದರಲ್ಲೂ ದ್ವಿಚಕ್ರ ವಾಹನಗಳನ್ನು ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗುವುದಕ್ಕೆ ನಿಷೇಧ ಹೇರಿ ಕೌದಳ್ಳಿಯಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಭಕ್ತರು ತೆರಳಲು ವಿಶೇಷ ಬಸ್ ವ್ಯವಸ್ಥೆಯನ್ನು ಮಾಡಿರುವುದರಿಂದ ಮಲೆ ಮಹದೇಶ್ವರ ಬೆಟ್ಟ ಹಾಗೂ ಈ ಮಾರ್ಗಗಳಲ್ಲಿ ಎಲ್ಲೆಂದರಲ್ಲಿ ಕೆಂಪು ಬಸ್ಸುಗಳು ಕಂಡು ಬಂದಿತು.

ಟ್ರಾಫಿಕ್ ಜಾಮ್ ತಪ್ಪಿಸಲು ತಿರುವುಗಳಲ್ಲಿ ಪೊಲೀಸ್ ರ ನಿಯೋಜನೆ : ಹೆಚ್ಚಿನ ಭಕ್ತಾದಿಗಳ ಆಗಮನದಲ್ಲಿ ಹೆಚ್ಚುವರಿಯಾಗಿ ಕೆಎಸ್‌ಆರ್‌ಟಿಸಿ ಸಾರಿಗೆ ಸೇವೆಯನ್ನು ಒದಗಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮ.ಮ ಬೆಟ್ಟ ಆನೆದಿಂಬದವರೆಗಿನ ರಸ್ತೆಗಳ ತಿರುವಿನಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಪೊಲೀಸ್ ಬಂದೋಬಸ್ತ್ : ಮಹಾಶಿವರಾತ್ರಿ ಜಾತ್ರಾ ಮಹೋತ್ಸವದ ಹಿನ್ನಲೆಯಲ್ಲಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಮುಂಜಾಗ್ರತ ಕ್ರಮವಾಗಿ ಹೆಚ್ಚಿನ ಪೊಲೀಸ್ ಬಂದುಬಸ್ತ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

ಸೋಮಣ್ಣ ಭೇಟಿ: ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಮಹಾ ಶಿವಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಬೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಇದಕ್ಕೂ ಮುನ್ನ ರಾಷ್ಟಪತಿ ಭವನದಲ್ಲಿ ಜಾತ್ರಾ ಮಹೋತ್ಸವ ಹಿನ್ನಲೆಯಲ್ಲಿ ಕೈಗೊಳ್ಳಲಾಗಿರುವ ಸಿದ್ಧತೆ ಬಗ್ಗೆ ಸಚಿವ ವಿ. ಸೋಮಣ್ಣ ಮಾಹಿತಿ ಪಡೆದರು.

ಇಂದಿನಿಂದ ಬೇಗೂರಲ್ಲಿ ಬಂಡಿಗೆರೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ




ಬೇಗೂರು(ಗುಂಡ್ಲುಪೇಟೆ), ಫೆ.19– ಗ್ರಾಮದಲ್ಲಿ ಬಂಡಿಗೆರೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಸೋಮವಾರ (ಫೆ.20)ಮತ್ತು ಮಂಗಳವಾರ (ಫೆ.21) 2 ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ. ಬೇಗೂರು, ಬೆಳಚಲವಾಡಿ, ಕಮರಹಳ್ಳಿ, ಮೂರು ಗ್ರಾಮಗಳ ಜನರು ಒಟ್ಟಾಗಿ ಸೇರಿ ಆಚರಿಸುವುದು ಈ ಹಬ್ಬದ ವಿಶೇಷ.

ಸೋಮವಾರ ಬೇಗೂರು ಗ್ರಾಮದ ಬಂಡಿಗೆರೆ ಮಹದೇಶ್ವರಸ್ವಾಮಿ ದೇವಸ್ಥಾನದ ಆವರಣದಿಂದ ಮಹದೇಶ್ವರ ಸ್ವಾಮಿ ಉತ್ಸವ ಮೂರ್ತಿಯನ್ನು ಗ್ರಾಮದ ಅಂಜನೇಯಸ್ವಾಮಿ ದೇವಾಲಯದ ಆವರಣಕ್ಕೆ ತಂದು ಇರಿಸಲಾಗುತ್ತದೆ.

ನಂತರ ಕಮರಹಳ್ಳಿ ಗ್ರಾಮದ ಬಸವೇಶ್ವರ ಉತ್ಸವ ಮೂರ್ತಿ ಮತ್ತು ಬೆಳಚಲವಾಡಿ ಗ್ರಾಮದ ರಾಮಲಿಂಗೇಶ್ವರ ಸ್ವಾಮಿ ಉತ್ಸವ ಮೂರ್ತಿಯನ್ನು ಗ್ರಾಮದ ಬಸ್ ನಿಲ್ದಾಣದ ಬಳಿಯಿಂದ ಬೇಗೂರು ಗ್ರಾಮಸ್ಥರು ವಾದ್ಯಮೇಳ, ಛತ್ರಿ, ಚಾಮರಗಳ ಸಮೇತ ಸ್ವಾಗತಿಸಿ ಗ್ರಾಮದ ಆಂಜನೇಯಸ್ವಾಮಿ ದೇವಾಲಯದ ಅವರಣಕ್ಕೆ ಕರೆತರಲಾಗುತ್ತದೆ. ನಂತರ ಉತ್ಸವ ಮೂರ್ತಿಗಳನ್ನು ಗ್ರಾಮಸ್ಥರು ಒಟ್ಟಾಗಿ ಸೇರಿ ವಿವಿಧ ಹೂಗಳಿಂದ ಅಲಂಕರಿಸಿ ರಾತ್ರಿಯಿಡೀ ಗ್ರಾಮದಲ್ಲಿ ಮೆರವಣಿಗೆ ನಡೆಸಲಾಗುತ್ತದೆ.

ಮಂಗಳವಾರ ಬೆಳಗಿನ ಸೂರ್ಯ ಉದಯವಾಗುವುದಕ್ಕೂ ಮುಂಚೆ ಮಹದೇಶ್ವರಸ್ವಾಮಿ ದೇವಾಲಯದ ಆವರಣಕ್ಕೆ ಉತ್ಸವ ಮೂರ್ತಿಗಳು ತಲುಪಿದ ನಂತರ ಬೆಳಗ್ಗೆ ಕೊಂಡ ಮಹೋತ್ಸವ ನಡೆಯಲಿದ್ದು ದೇವಾಲಯದ ಆವರಣದಲ್ಲಿ ಹುಲಿ ವಾಹನವನ್ನು ಹರಕೆ ಹೊತ್ತ ಭಕ್ತರು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕುವುದು ವಿಶೇಷ ಹಾಗು ರಾತ್ರಿ ಬಂಡಿಗೆರೆ ಮಹದೇಶ್ವರ ಸ್ವಾಮಿಯ ಉತ್ಸವ ನಡೆಸಿ ನಂತರ ಜಾತ್ರೆಗೆ ತೆರೆ ಬೀಳಲಿದೆ.

ಕವಿ ಮಂಜುನಾಥ್ ಕವನಕ್ಕೆ ರಾಷ್ಟ್ರೀಯ ಪುರಸ್ಕಾರ



ಕೊಳ್ಳೇಗಾಲ, ಫೆ.19– ಕೊಳ್ಳೇಗಾಲದ ಯುವ ಕವಿ ಬಾಣಗುಣಸೆ ಮಂಜುನಾಥ್ ಅವರ ಮಲಗು ಕಂದ ಕವನ (ಲಾಲಿ ಹಾಡು) ಕವನ ಸ್ಪರ್ಧೆಯಲ್ಲಿ ರಾಷ್ಟ್ರೀಯ ಪುರಸ್ಕಾರಕ್ಕೆ ಭಾಜನವಾಗುವ ಮೂಲಕ 6 ಲಕ್ಷ ನಗದು ಬಹುಮಾನ ಪಡೆದಿದೆ.

75ನೇ ಸ್ವಾತಂತ್ರೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ ಆಜಾದಿ ಕ ಅಮೃತ್ ಮಹೋತ್ಸವ್ ಕಾರ್ಯಕ್ರಮದ ಪ್ರಯುಕ್ತ ಅಖಿಲ ಭಾರತದ ಹಂತದ ಲೋರಿ (ಲಾಲಿ ಹಾಡು) ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ತಮ್ಮ ಮಲಗು ಕಂದ ಕವನ ಆನ್‌ಲೈನ್ ಮೂಲಕ ಫೆ.15ರಂದು ಸಲ್ಲಿಸಿದ್ದರು. ಅವರ ಈ ಕವನಕ್ಕೆ ರಾಷ್ಟ್ರೀಯ ಹಂತದ ಮೊದಲ ಪುರಸ್ಕಾರ ದೊರೆತಿದ್ದು, 6 ಲಕ್ಷ ನಗದು ಬಹುಮಾನಕ್ಕೆ ಆಯ್ಕೆಯಾಗಿದೆ.

ಅದೇ ರೀತಿಯಲ್ಲಿ 2ನೇ ಪುರಸ್ಕಾರ ಅಸ್ಸಾಂನ (ದಿನೇಶ ಗೌಡ), ಮೂರನೇ ಪುರಸ್ಕಾರ ಡಿಯು–ಡಾಮನ್‌ನ ಶೀತಲ್ ರಮೇಶ್ ಅವರಿಗೆ ಸಂದಿದೆ. ರಾಜ್ಯ ಮಟ್ಟದ ಪುರಸ್ಕಾರದಲ್ಲೂ ಸಹಾ ಬಾಳಗುಣಸೆ ಅವರ ಕವನ ಸಂಕಲನ ಗಮನ ಸೆಳೆದಿದ್ದು ಅಲ್ಲೂ ಪ್ರಥಮ ಸ್ಥಾನಗಳಿಸಿದೆ. ಮಂಜುನಾಥ್ ಈಗಾಗಲೇ ಸಾಹಿತ್ಯ ಮಿತ್ರಕೂಟದ ಪದಾಧಿಕಾರಿಯಾಗಿ, ಚಿತ್ತ ಚಿತ್ತಾರದ ಹೂವು ಕವನ ಸಂಕಲನ, ಶಾಪ ನಾಟಕ ಸೇರಿದಂತೆ ಇನ್ನಿತರ ಕೃತಿಗಳನ್ನು ಹೊರತಂದಿದ್ದಾರೆ. ನನ್ನ ಕವನ ರಾಷ್ಟ್ರೀಯ ಹಂತದಲ್ಲಿ ಪುರಸ್ಕಾರಕ್ಕೆ ಆಯ್ಕೆಯಾಗಿ 6 ಲಕ್ಷ ನಗದು ಘೋಷಣೆಯಾಗಿರುವುದು ಸಂತಸ ತಂದಿದೆ ಎನ್ನುತ್ತಾರೆ.

ರತ್ನಮ್ಮ ನಿಧನ



ಚಾಮರಾಜನಗರ, ಫೆ.19– ತಾಲೂಕಿನ ಅಟ್ಟಗೂಳಿಪುರ ಗ್ರಾಮದ ತೋಟದ ಮನೆಯಲ್ಲಿ ವಾಸವಿದ್ದ ರತ್ನಮ್ಮ (76) ಶನಿವಾರ ಮಧ್ಯಾಹ್ನ ನಿಧನರಾದರು.

ಮೃತರು ಲೇಟ್ ಚನ್ನಂಜಯ್ಯನವರ ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ ಅಟ್ಟುಗೂಳಿಪುರ ಗ್ರಾಮದ ತೋಟದಲ್ಲಿ ನಡೆಯಿತು.

ಮರಕ್ಕೆ ಬೈಕ್ ಡಿಕ್ಕಿ: ಅಣ್ಣನ ಸಾವು, ತಮ್ಮನಿಗೆ ಗಂಭೀರ ಗಾಯ

ಕೊಳ್ಳೇಗಾಲ, ಫೆ.19– ಶಿವರಾತ್ರಿ ಹಬ್ಬಕೆಂದು ಸ್ವಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಮರಕ್ಕೆ ಬೈಕ್ ಡಿಕ್ಕಿ ಹೊಡೆದು ಅಣ್ಣ ಸಾವನ್ನಪ್ಪಿ, ತಮ್ಮ ಗಾಯಗೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ತಾಲೂಕಿನ ಕುಂತೂರು ಗ್ರಾಮದ ಮನೋಜ್ ಕುಮಾರ್ (23) ಮೃತ ದುರ್ದೈವಿ. ಈತ ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಶಿವರಾತ್ರಿಗೆಂದು ಸ್ವಗ್ರಾಮಕ್ಕೆ ಆಗಮಿಸಿ, ತಡರಾತ್ರಿ ತನ್ನ ಸಹೋದರ ರೋಹಿತ್ ಕುಮಾರ್ ನಿಂದ ಕೊಳ್ಳೇಗಾಲಕ್ಕೆ ಬೈಕ್ ತರಿಸಿಕೊಂಡು ವಾಪಸ್ಸು ಊರಿಗೆ ಹಿಂತಿರುಗುವಾಗ ನಾರಾಯಣ ಗುರು ವೃತ್ತದ ಹೆದ್ದಾರಿಯ ಬಳಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡ ಮನೋಜ್ ಸ್ಥಳದಲ್ಲಿ ಸಾವಿಗೀಡಾದರೆ, ತೀವ್ರ ಗಾಯಗೊಂಡ ರೋಹಿತ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀ ರಾಮೇಶ್ವರ ದೇವಾಲಯದಲ್ಲಿ ಮಹಾಶಿವರಾತ್ರಿ ಆಚರಣೆ



ಗುಂಡ್ಲುಪೇಟೆ, ಫೆ.19– ಪಟ್ಟಣದ ಪ್ರಸಿದ್ದ ಪುರಾತನ ದೇವಾಲಯವಾದ ಶ್ರೀರಾಮೇಶ್ವರ ದೇವಾಲಯದಲ್ಲಿ ಮಹಾಶಿವರಾತ್ರಿಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

ಮಹಾಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ದೇವಾಲಯದ ಗರ್ಭಗುಡಿಯಲ್ಲಿರುವ ಶಿವಲಿಂಗಕ್ಕೆ ಮುಂಜಾನೆ ಯಿಂದಲೇ ಅಭಿಷೇಕ ಮತ್ತು ಪೂಜೆಯನ್ನು ಪ್ರಧಾನ ಅರ್ಚಕ ಶಂಕರನಾರಾಯಣ ಜೋಯಿಸ್ ಅವರ ನೇತೃತ್ವದಲ್ಲಿ ನೆರವೇರಿಸಲಾಯಿತು.

ಹಬ್ಬದ ಹಿನ್ನೆಲೆಯಲ್ಲಿ ದೇವಾಲಯಕ್ಕೆ ವಿದ್ಯುತ್ ದೀಪಾಲಾಂಕಾರ ಹಾಗೂ ತಳಿರು ತೋರಣಗಳನ್ನು ಕಟ್ಟಿ ವಿವಿಧ ಅಲಂಕಾರಿಕ ಹೂವುಗಳಿಂದ ದೇವಾಲಯವನ್ನು ಸಿಂಗರಿಸಲಾಗಿತ್ತು.

ಮುಜರಾಯಿ ಇಲಾಖೆಯು ನೀಡಿದ್ದ ಗಂಗಾಜಲದಲ್ಲಿ ದೇವರ ಅಭಿಷೇಕಮಾಡಿ ನಂತರ ನೆರೆದಿದ್ದ ಸಹಸ್ರಾರು ಭಕ್ತರಿಗೆ ತೀರ್ಥ ಪ್ರಸಾದವನ್ನು ವಿತರಣೆ ಮಾಡಲಾಯಿತು.

ಟ್ರಾಕ್ಟರ್ ಡಿಕ್ಕಿ: ಬೈಕ್ ಸವಾರನಿಗೆ ಗಾಯ

ಬೇಗೂರು(ಗುಂಡ್ಲುಪೇಟೆ), ಫೆ.19– ಸಮೀಪದ ತೊಂಡವಾಡಿ ಗೇಟ್‌ನ ಬಳಿ ಬೈಕ್ ಮತ್ತು ಟ್ರಾಕ್ಟರ್ ನಡುವೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ತೀವ್ರ ವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಕುರುಬರಹುಂಡಿ ಗ್ರಾಮದ ಮಾದೇಶ (23) ಗಾಯಗೊಂಡರು. ಮೈಸೂರು ಕಡೆಯಿಂದ ಬರುತ್ತಿದ್ದ ಟ್ರಾಕ್ಟರ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಈ ಘಟನೆ ಸಂಭವಿಸಿದೆ.

ಬೈಕ್ ಸವಾರನನ್ನು ಬೇಗೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರು ಆಸ್ಪತ್ರೆಗೆ ದಾಖಲಿಸಲಾಗಿದೆ.

ಒಂದನೇ ಪುಟದಿಂದ

ಸಂಧಾನ ಸಿಂಧುತ್ವ ಪ್ರಶ್ನಿಸಿದ ರೂಪಾ

ಮೇಲೆ ಅನೇಕ ಆಪಾದನೆಗಳನ್ನು ಮಾಡಿದ್ದ ಈಕೆ ಒಂದನ್ನೂ ಸಾಬೀತುಪಡಿಸಲಿಲ್ಲ. ಅದಕ್ಕಾಗಿ ಸಂಧಾನಕ್ಕೆ ಹೋದರಾ? ಎಂದು ಪ್ರಶ್ನಿಸಿದ್ದಾರೆ. ದಿವಂಗತ ಐಎಎಸ್ ಅಧಿಕಾರಿ ಡಿ.ಕೆ. ರವಿ ಸಂಭಾವಿತ ವ್ಯಕ್ತಿ, ಸಿಬಿಐ ರಿಪೋರ್ಟ್‌ನಲ್ಲಿ ಅವರೊಂದಿಗೆ ರೋಹಿಣಿ ಸಿಂಧೂರಿ ಮಾಡಿರುವ ಚಾಟ್‌ಗಳ ಬಗ್ಗೆ ಉಲ್ಲೇಖವಿದೆ. ಒಂದು ವೇಳೆ ಡಿ.ಕೆ. ರವಿ ಎಂದಾದರೂ ತಮ್ಮ ಲಿಮಿಟ್ ಕ್ರಾಸ್ ಮಾಡಿದ ತಕ್ಷಣವೇ ಅವರನ್ನು ರೋಹಿಣಿ ಬ್ಲಾಕ್ ಮಾಡಬಹುದಿತ್ತು. ಆದರೆ, ಬ್ಲಾಕ್ ಮಾಡಲಿಲ್ಲ. ಈಕೆ ರವಿಯನ್ನು ಬ್ಲಾಕ್ ಮಾಡದೇ ಇದ್ದದ್ದು ಅವರಿಗೆ ಉತ್ತೇಜನ ಕೊಡುವ ಹಾಗೆ ಎಂಬಂತೆ ಕಾಣುತ್ತದೆ ಎಂಬುದು ಅನೇಕರ ಅಭಿಪ್ರಾಯ ಎಂದಿದ್ದಾರೆ. ಈ ಹಿಂದೆ ಮಂಡ್ಯ ಜಿಪಂ ಸಿಇಓ ಆಗಿದ್ದಾಗ ಈಕೆ ಕಟ್ಟಿಸಿದ ಶೌಚಾಲಯಗಳಿಗಿಂತ ಹೆಚ್ಚು ಲೆಕ್ಕ ತೋರಿಸಿ ಕೇಂದ್ರ ಸರ್ಕಾರದ ಪ್ರಶಸ್ತಿಯನ್ನು ಪಡೆದುಕೊಂಡರು ಎಂಬ ಆರೋಪ ಕೇಳಿಬಂತು. ಆದರೆ ತನಿಖೆಯೇ ಆಗಲಿಲ್ಲ. ಚಾಮರಾಜನಗರದಲ್ಲಿ 24 ಮಂದಿ ಆಕ್ಸಿಜನ್ ಇಲ್ಲದೇ ಸತ್ತಾಗ ಆಪಾದನೆಗಳು ರೋಹಿಣಿ ಮೇಲೆ ನೇರವಾಗಿ ಬಂತು. ಅದರಿಂದ ಹೇಗೋ ಪಾರಾದರು ಎಂದು ರೂಪಾ ಆರೋಪಿಸಿದ್ದಾರೆ. ಕನ್ನಡದ ಹುಡುಗಿ ಶಿಲ್ಪಾ ನಾಗ್ ಐಎಎಸ್ ಅವರ ಜೊತೆ ಜಗಳ-ರಂಪಾ ಏತಕ್ಕಾಗಿ ಎಂದು ಪ್ರಶ್ನಿಸಿರುವ ರೂಪ, ಅಲ್ಲಿ ಯಾವುದೇ ಮೌಲ್ಯಾಧಾರಿತ ವಸ್ತು ವಿಷಯ ಇರಲಿಲ್ಲ. ಶಿಲ್ಪಾ ಹೆಚ್ಚು ಕೆಲಸ ಮಾಡಿದ್ದು, ಅವರ ಬಗ್ಗೆ ಹೆಚ್ಚು ಪಾಸಿಟೀವ್ ಆಗಿ ಮಾಧ್ಯಮಗಳಲ್ಲಿ ಬರೆಯಲಾಗಿತ್ತು. ಅದನ್ನು ಸಹಿಸಿಕೊಳ್ಳದೇ ಶಿಲ್ಪಾಗೆ ರೋಹಿಣಿ ಕಿರುಕುಳ ನೀಡಿದರು ಎಂದು ಕೆಲವರು ಹೇಳಿದರು. ಕೊನೆಗೆ ಗೌಡ ಪತ್ರಕರ್ತರು ಶಿಲ್ಪಾ ನಾಗ್ ಅವರಿಗೆ ಜಾತಿ ಬೆಂಬಲ ನೀಡುತ್ತಿದ್ದಾರೆ ಎಂಬ ಮಟ್ಟಿಗೆ ಸತ್ವ ಇಲ್ಲದ ಜಾತೀಯತೆಯನ್ನು ರೋಹಿಣಿ ಸಿಂಧೂರಿ ಪತ್ರಕರ್ತರಲ್ಲಿ ಬಿತ್ತಿದರು ಎಂದು ಅನೇಕರು ಹೇಳುತ್ತಾರೆ ಎಂದು ರೂಪಾ ತಿಳಿಸಿದ್ದಾರೆ.

ಎಐಎಎಸ್ ಅಧಿಕಾರಿ ಹರ್ಷ ಗುಪ್ತ ಅತ್ಯಂತ ಪ್ರಾಮಾಣಿಕ ಅಧಿಕಾರಿ ಅವರ ಜೊತೆ ಜಗಳ. ಮತ್ತೋರ್ವ ಪ್ರಾಮಾಣಿಕ ಐಎಎಸ್ ಅಧಿಕಾರಿ ಪಿ. ಮಣಿವಣ್ಣನ್ ಜೊತೆ ಕಾರ್ಮಿಕ ಇಲಾಖೆಯಲ್ಲಿದ್ದಾಗ, ಜಗಳ ಮಾಡಿದ್ದು ಜಗಜ್ಜಾಹೀರಾತು ಆಗಿದೆ. ಮಣಿವಣ್ಣನ್ ಒಂದು ರೀತಿ ಅಜಾತಶತ್ರು. ಅಂತಹುದರಲ್ಲಿ ಅವರೊಂದಿಗೆ ರೋಹಿಣೀ ಜಗಳ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿರುವ ರೂಪಾ, ಡಿ.ಕೆ. ರವಿ ನಿಧನರಾದ ಕೆಲವು ತಿಂಗಳ ಮುಂಚೆ ರೋಹಿಣಿಯ ಬ್ಯಾಚ್‌ಮೇಟ್ ಆಗಿದ್ದ ಅವಿವಾಹಿತ ಕನ್ನಡದ ಹುಡುಗ ಐಪಿಎಸ್ ಅಧಿಕಾರಿ ಈಕೆಗಾಗಿ ಕಾದು ಕಾದು ಆತ್ಮಹತ್ಯೆ ಮಾಡಿಕೊಂಡ ಎಂದು ಹಲವರು ಹೇಳಿದರೂ ನಾನು ಅದನ್ನು ನಂಬಲಿಲ್ಲ. ಈಗಲೂ ನಂಬಿಲ್ಲ ಎಂದು ರೂಪಾ ತಿಳಿಸಿದ್ದಾರೆ.

ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಮೇಲೆ ಕೂಡ ಅನೇಕರ ಬಳಿ ರೋಹಿಣಿ ಸಾಬೀತುಪಡಿಸಲಾಗದ ಆರೋಪಗಳನ್ನು ಮಾಡಿದ್ದರು. ಪ್ರತಾಪ್ ಸಿಂಹ ಅವರು ಖಾಸಗಿ ಕ್ಲಿನಿಕ್‌ಗಳಿಗೆ ಆಕ್ಸಿಜನ್ ಕೇಳುವ ಮೂಲಕ ಸ್ವಂತ ಲಾಭ ಪಡೆಯಲು ನಿಂತಿದ್ದಾರೆ ಎಂಬ ನಿರಾಧಾರ ಆರೋಪ ಮಾಡಿದ್ದ ಈಕೆ, ಅದು ನಿಜವೇ ಆಗಿದ್ದಲ್ಲಿ ಯಾಕೆ ಸಾಬೀತುಪಡಿಸಿಲ್ಲ ಎಂದು ಪ್ರಶ್ನಿಸಿದ್ದಲ್ಲದೇ, ಹಾಸನದಲ್ಲಿ ತನ್ನನ್ನು ವರ್ಷದೊಳಗೆ ಎತ್ತಂಗಡಿ ಮಾಡಿದ ಸರ್ಕಾರದ ವಿರುದ್ಧ ಸಿಎಟಿಯಲ್ಲಿ ದಾವೆ ಹೂಡಿದರು. ಆ ದಾವೆಗೆ ಅರ್ಜಿ ಬರೆದುಕೊಟ್ಟಿದ್ದೇ ನನ್ನ ಪತಿ ಮುನೀಶ್ ಮೌದ್ಗಲ್ ಎಂದಿರುವ ರೂಪಾ, ಅರ್ಜಿಯನ್ನು ನನ್ನೆದುರಿಗೆ ಬರೆದು ಅದನ್ನು ರೋಹಿಣಿಗೆ, ಆಕೆಯ ತಂದೆಗೆ ಮತ್ತು ಲಾಯರ್‌ಗೆ ಕಳುಹಿಸಿದರು. ಆದರೆ, ಈಕೆ ಮೈಸೂರಿಗೆ ಡಿಸಿಯಾಗಿ ಹೋಗಿದ್ದು ಹೇಗೆ? ತನಗಿಂತ ಕೇವಲ 29 ದಿನ ಮುಂಚೆ ಮೈಸೂರಿಗೆ ಡಿಸಿಯಾಗಿ ವರ್ಗಾವಣೆಯಾಗಿದ್ದ ಕನ್ನಡದ ಹುಡುಗ ಶರತ್ ಅವರನ್ನು ಒಕ್ಕಲೆಬ್ಬಿಸಿದ್ದು ನ್ಯಾಯವೇ? ತನ್ನಂತೆ ಪರರು ಎಂಬ ಭಾವನೆ ಈಕೆಗೆ ಇಲ್ಲವೇಕೆ? 29 ದಿನದಲ್ಲಿ ಯಾವುದೇ ಕಳಂಕ ಅಥವಾ ಆರೋಪ ಇಲ್ಲದ ಶರತ್ ಅವರನ್ನು ವರ್ಗಾವಣೆ ಮಾಡಿಸಿ ಈಕೆ ಅಲ್ಲಿಗೆ ಡಿಸಿಯಾಗಿ ಹೋಗಿದ್ದು ಉನ್ನತ ಮಟ್ಟದ ಶಿಫಾರಸ್ಸಿನಿಂದಲಾ? ಎಂದು ಪ್ರಶ್ನಿಸಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ಜನರು ಸಾಯುತ್ತಿದ್ದರೂ ಮೈಸೂರಿನ ಹೆರಿಟೇಜ್ ಕಟ್ಟಡವಾಗಿರುವ ಜಿಲ್ಲಾಧಿಕಾರಿಗಳ ಮನೆಗೆ ಜನರ ತೆರಿಗೆ ಹಣದಲ್ಲಿ ಟೈಲ್ಸ್ ಹಾಕಿಸಿದ್ದು ಹಾಗೂ ಮೋಜಿಗಾಗಿ ಈಜುಕೊಳ ನಿರ್ಮಿಸಿದ್ದಾರೆ. ಇವರಿಗೆ ಮಾನವೀಯತೆ ಎನ್ನುವುದೇ ಇಲ್ಲವೇ? ಈ ಸಂಬಂಧ ಐಎಎಸ್ ಅಧಿಕಾರಿ ಡಾ. ರವಿಶಂಕರ್ ನಡೆಸಿದ ಪ್ರಾಥಮಿಕ ವಿಚಾರಣೆಯಲ್ಲಿ ರೋಹಿಣಿ ತಪ್ಪು ಮಾಡಿರುವುದು ಸಾಬೀತಾಗಿದೆ. ಆದರೆ, ಅದರ ಬಗ್ಗೆ ಇಲಾಖಾ ವಿಚಾರಣೆ ನಡೆದಿಲ್ಲವೇಕೆ ಎಂದು ಪ್ರಶ್ನಿಸಿದ್ದಾರೆ. ಈಕೆ ಮೇಲೆ ಅಗ್ಗದ ಬ್ಯಾಗುಗಳನ್ನು ಅತೀ ಹೆಚ್ಚು ಬೆಲೆಗೆ ಖರೀದಿಸಿದ ದೂರು ಲೋಕಾಯುಕ್ತದಲ್ಲಿ ದಾಖಲಾಗಿದೆ. ಇದರ ಬಗ್ಗೆ ತನಿಖೆಗೆ ಲೋಕಾಯುಕ್ತ ಸರ್ಕಾರಕ್ಕೆ ಪತ್ರ ಬರೆದಿದ್ದರೂ ಸರ್ಕಾರ ಮಟ್ಟದಲ್ಲಿ ಯಾವುದೇ ಕಾರಣ ಕೊಡದೆ ಈಕೆಯ ವಿರುದ್ಧದ ತನಿಖೆಗೆ ಅನುಮತಿ ನಿರಾಕರಿಸಲಾಗಿದೆ. ಸಾಮಾನ್ಯವಾಗಿ ಅಧಿಕಾರಿಗಳಿಗೆ ಇಂತಹ ಬೆಂಬಲ ಇರುತ್ತದೆಯೇ? ಎಂದು ರೂಪಾ ಪ್ರಶ್ನಿಸಿದ್ದಾರೆ.

ರೋಹಿಣಿ ಒಬ್ಬರಲ್ಲ-ಇಬ್ಬರಲ್ಲ, ಅನೇಕ ಪುರುಷ ಐಎಎಸ್ ಅಧಿಕಾರಿಗಳಿಗೆ 'ನಾಟ್ ಸೋ ಡೀಸೆಂಟ್' ಚಿತ್ರಗಳನ್ನು ಕಳುಹಿಸಿರುವ ಹಾಗೂ ಅವರನ್ನು ಉತ್ತೇಜಿಸಿರುವ ಆರೋಪಗಳಿವೆ. ಆ ಚಿತ್ರಗಳು ನನಗೆ ಸಿಕ್ಕಿವೆ ಎಂದು ತಿಳಿಸಿ ರೋಹಿಣಿಯವರ ವೈಯಕ್ತಿಕ ಫೋಟೋಗಳನ್ನು ಪೋಸ್ಟ್ ಮಾಡಿರುವ ರೂಪಾ, ಇದು ಖಾಸಗಿ ವಿಷಯವಾಗುವುದಿಲ್ಲ. ಆಲ್ ಇಂಡಿಯಾ ಸರ್ವೀಸ್ ಕಂಡಕ್ಟ್ ರೂಲ್ಸ್ ಪ್ರಕಾರ ಹಿರಿಯ ಅಧಿಕಾರಿಗಳು ಈ ರೀತಿಯ ಚಿತ್ರಗಳೊಂದಿಗೆ ಸಂಭಾಷಣೆ ಮಾಡುವುದು ಅಪರಾಧ. ಈ ಆರೋಪಗಳ ಬಗ್ಗೆ ಸರ್ಕಾರ ತನಿಖೆ ಮಾಡುವುದೇ ಎಂಬುದನ್ನು ನೋಡಬೇಕಾಗಿದೆ. ಯಾಕೆಂದರೆ ಸತ್ಯ ಹೊರಬರಬೇಕಾಗಿದೆ ಎಂದಿರುವ ರೂಪಾ, ಈಕೆ ಪ್ರೊಬೆಷನರಿಯಲ್ಲಿದ್ದಾಗ ಅಲ್ಲಿಯ ಡಿಸಿ ಹಾಗೂ ಅವರ ಪತ್ನಿಯಾಗಿರುವ ನೆರೆಯ ಜಿಲ್ಲೆಯ ಡಿಸಿ ಸಂಸಾರದಲ್ಲಿ ಹುಳಿ ಬಿದ್ದು ಅವರು ಬೇರ್ಪಟ್ಟಿದ್ದಾರೆ. ಇದು ರೋಹಿಣಿಯಿಂದಲೇ ಆಗಿದೆ ಎಂಬು ಮಾತು ಅನೇಕರಲ್ಲಿ ಕೇಳಿಬರುತ್ತಿದೆ ಎಂದಿರುವ ರೂಪಾ, ಇಷ್ಟೆಲ್ಲಾ ಆದರೂ ಈಕೆಯನ್ನು ತನಿಖೆಗೆ ಒಳಪಡಿಸದೇ ರಕ್ಷಿಸುತ್ತಿರುವುದು. ಈಕೆ ಕೆಮ್ಮಿದ್ದು, ಕ್ಯಾಕರಿಸಿದ್ದು, ತಮ್ಮ ಟಿಆರ್‌ಪಿಗೋಷ್ಕರ ಪ್ರಸಾರ ಮಾಡುವ ಮೀಡಿಯಾಗಳೇ ಈಕೆಯನ್ನು ಹೀರೋಯಿನ್ ಮಾಡುವ ಮೂಲಕ ಈಕೆ ಯಾವುದೇ ಶಿಕ್ಷೆ ಇಲ್ಲದೇ ಪ್ರತೀಬಾರಿ ರಕ್ಷಣೆ ಆಗುತ್ತಿರುವುದಕ್ಕೆ ಕಾರಣವೇ? ಅಥವಾ ಕಿಂದರಜೋಗಿ ಮಾಡಿದ ರೀತಿಹಲ್ಲಿ ಸರ್ಕಾರದಲ್ಲಿರುವ ಪ್ರಭಾವಿಗಳು ಈ ಕಿಂದರಜೋಗಿಯ ಪಾಶಕ್ಕೆ ಸಿಲುಕಿದರೆ? ಎಂದು ರೂಪಾ ಪ್ರಶ್ನಿಸಿದ್ದಾರೆ.

ಕಾನೂನು ಹೋರಾಟಕ್ಕೆ ಸಿದ್ಧ

ಅಭಿಯಾನವನ್ನು ನಡೆಸುತ್ತಿದ್ದಾರೆ. ನನ್ನ ಸಾಮಾಜಿಕ ಮಾಧ್ಯಮಗಳಿಂದ ಹಾಗೂ ವಾಟ್ಸಾಪ್ ಸ್ಟೇಟಸ್‌ಗಳಿಂದ ಸ್ಕ್ರೀನ್ ಶಾಟ್‌ಗಳ ಮೂಲಕ ಸಂಗ್ರಹಿಸಿರುವ ಫೋಟೋಗಳನ್ನು ನನ್ನ ತೇಜೋವಧೆ ಮಾಡಲು ರೂಪಾ ಐಪಿಎಸ್ ಅವರು ಬಳಸಿದ್ದಾರೆ. ಈ ಫೋಟೋಗಳನ್ನು ನಾನು ಕಳುಹಿಸಿದ್ದೇನೆ ಎನ್ನುವ ಅಧಿಕಾರಿಗಳ ಹೆಸರನ್ನು ಬಹಿರಂಗಪಡಿಸಬೇಕು ಹಾಗೂ ಅವುಗಳ ಬಗ್ಗೆ ತನಿಖೆ ನಡೆಯಬೇಕು ಎಂದು ನಾನು ಆಗ್ರಹಿಸುತ್ತೇನೆ.

ರೂಪಾ ಐಪಿಎಸ್ ಅವರ ಮೇಲೆ ಕಾನೂನು ಕ್ರಮ: ರೋಹಿಣಿ ಸಿಂಧೂರಿ: ನನ್ನ ವಿರುದ್ಧ ರೂಪಾ ಐಪಿಎಸ್ ಅವರು ನಡೆಸುತ್ತಿರುವ ವೈಯಕ್ತಿಕ ನಿಂದನೆ ಹಾಗೂ ತೇಜೋವಧೆಯ ವಿರುದ್ಧ ನಾನು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ರೂಪಾ ಐಪಿಎಸ್ ಅವರ ಮೇಲೆ ಕಾನೂನಿನ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇನೆ. ಸಕ್ಷಮ ಪ್ರಾಧಿಕಾರದ ಮುಂದೆಯೂ ದೂರನ್ನು ಸಲ್ಲಿಸಲಿದ್ದೇನೆ ಎಂದಿದ್ದಾರೆ.

ರೋಹಿಣಿ ವಿರುದ್ಧ ಡಿ.ಕೆ.ರವಿ ಪತ್ನಿ ಟ್ವೀಟ್

it surely will" (ನಿಧಾನವಾಗಿ ಅಥವಾ ವೇಗವಾಗಿ, ಒಟ್ಟಿನಲ್ಲಿ ಕರ್ಮ ನಿಮ್ಮನ್ನು ಬಿಡುವುದಿಲ್ಲ) ಎಂದು ಮಾರ್ಮಿಕವಾಗಿ ಬರೆದಿದ್ದಾರೆ. ಡಿ.ಕೆ ರವಿ, ಐಎಎಸ್, ಸಂಭಾವಿತ ವ್ಯಕ್ತಿ. ಸಿಬಿಐ ರಿಪೋರ್ಟ್‌ನಲ್ಲಿ ಅವರ ಚಾಟ್ಸ್ ಬಗ್ಗೆ ಉಲ್ಲೇಖ ಇದ್ದು, ರವಿ ಅವರು ಎಂದಾದರೂ ಎಲ್ಲೆ ಮೀರಿ ಮೆಸೇಜ್ ಮಾಡಿದ ತಕ್ಷಣವೇ ಅವರನ್ನು ಬ್ಲಾಕ್ ಮಾಡಬಹುದಿತ್ತು. ಆದರೆ ರೋಹಿಣಿ, ಡಿ.ಕೆ.ರವಿ ಅವರನ್ನು ಪರ್ಮನೆಂಟ್ ಆಗಿ ಬ್ಲಾಕ್ ಮಾಡಲಿಲ್ಲ. ಬ್ಲಾಕ್ ಮಾಡದೆ ಇದ್ದದ್ದು ಉತ್ತೇಜನ ಕೊಡುವ ಹಾಗೆ ಎಂಬಂತೆಯೇ ಕಾಣುತ್ತದೆ ಎಂಬುದು ಅನೇಕರ ಅಭಿಪ್ರಾಯ ಎಂದು ಡಿ.ರೂಪಾ ಹೇಳಿದ್ದರು.

ಸಂಘ-ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಖಾಸಗಿ ವ್ಯಕ್ತಿಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು ಹಾಗೂ ಮುಡಾದಿಂದ ನಿರ್ಮಿಸಿರುವ ವಸತಿ ಬಡಾವಣೆಗಳಲ್ಲಿ ಲಭ್ಯವಿರುವ ಸಿಎ ನಿವೇಶನಗಳನ್ನು ಅರ್ಹ ಸಂಘ-ಸಂಸ್ಥೆ, ಸೇವಾ ಟ್ರಸ್ಟ್, ಪ್ರತಿಷ್ಠಾನಗಳಿಗೆ ಮಂಜೂರು ಮಾಡಲು ಮುಡಾ ಅಧಿಸೂಚನೆ ಹೊರಡಿಸಿದೆ. ಅಂಗನವಾಡಿ, ಹಾಪ್‌ಕಾಮ್ಸ್, ಆರೋಗ್ಯ ಕೇಂದ್ರ, ವಿದ್ಯಾರ್ಥಿ ನಿಲಯ, ಧ್ಯಾನ ಕೇಂದ್ರ, ಹಾಲಿನ ಕೇಂದ್ರ, ಮಹಿಳಾ ಸ್ವ-ಸಹಾಯ ಕೇಂದ್ರ, ನ್ಯಾಯ ಬೆಲೆ ಅಂಗಡಿ, ನಾಗರಿಕ ಸೇವಾ ಕೇಂದ್ರ, ಗ್ರಂಥಾಲಯ, ಪಶು ಚಿಕಿತ್ಸಾಲಯ, ಮೀನು ಮಾರಾಟ ಮಳಿಗೆ, ಸಭಾ ಭವನ, ಯೋಗ ಕೇಂದ್ರ, ಸಹಕಾರ ಸಂಸ್ಥೆ, ಮಕ್ಕಳ ಆರೈಕೆ ಕೇಂದ್ರ, ಮಕ್ಕಳ ಹಾಲಿನ ಕೇಂದ್ರ, ಶಿಶುಪಾಲನಾ ಕೇಂದ್ರ, ಕೃಷಿ ಉತ್ಪನ್ನ ಮಾರಾಟ ಕೇಂದ್ರ, ಘನ ತ್ಯಾಜ್ಯ ವಿಂಗಡಣೆ ಕೇಂದ್ರ, ಲಲಿತ ಕಲಾ ಶಾಲೆ, ಪೊಲೀಸ್ ಠಾಣೆ, ಧಾರ್ಮಿಕ ಕೇಂದ್ರ, ವ್ಯಾಯಾಮ ಶಾಲೆ, ಮಹಿಳಾ ಕೌಶಲ್ಯ ಕೇಂದ್ರ, ಅಂಚೆ ಕಚೇರಿ, ಕಿಂಡರ್ ಗಾರ್ಡನ್, ವಿದ್ಯುತ್ ಚಾರ್ಜಿಂಗ್ ಸ್ಟೇಷನ್, ಹೊಲಿಗೆ ತರಬೇತಿ ಕೇಂದ್ರ, ಬಸ್ ನಿಲ್ದಾಣ, ಪ್ರಕೃತಿ ಚಿಕಿತ್ಸಾ ಕೇಂದ್ರ, ಸಮುದಾಯ ಭವನ, ಪತ್ತಿನ ಸಹಕಾರ ಸಂಘ, ವೃದ್ಧಾಶ್ರಮ, ಆಯುರ್ವೇದಿಕ್ ಚಿಕಿತ್ಸಾ ಕೇಂದ್ರ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ, ಬ್ಯಾಡ್ಮಿಂಟನ್ ಅಕಾಡೆಮಿ ಸೇರಿದಂತೆ ಹಲವು ಸಾರ್ವಜನಿಕ ಚಟುವಟಿಕೆಗಳಿಗೆ ಸಿಎ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

ಮುಡಾ ಕಚೇರಿ ಕೌಂಟರ್‌ನಲ್ಲಿ ಫೆಬ್ರವರಿ 20 ರಿಂದ ಮಾರ್ಚ್ 4ರವರೆಗೆ 1,000 ರೂ. ಶುಲ್ಕ ಪಾವತಿಸಿ ಪಡೆದ ಅರ್ಜಿಗಳನ್ನು ಭರ್ತಿ ಮಾಡಿ ಮಾರ್ಚ್ 4ರ ಸಂಜೆ 4.30 ಗಂಟೆವರೆಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮುಡಾ ನಗರ ಯೋಜನಾ ಶಾಖೆ ದೂರವಾಣಿ ಸಂಖ್ಯೆ 0821-2420263, ಮೊಬೈಲ್ ಸಂಖ್ಯೆ 8951806415, 9448957987 ಸಂಪರ್ಕಿಸಬಹುದು. ಸಿಎ ನಿವೇಶನಗಳ ಲೊಕೇಷನ್ ತಿಳಿಯಲು 9844383591, website: mudamysore.gov.in/Email: mudamysore@gmail.com ಅನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

ಮೈಸೂರಲ್ಲಿ ಸಂಭ್ರಮದ ಮಹಾಶಿವರಾತ್ರಿ ಆಚರಣೆ



ಅರಮನೆ ಆವರಣದ ತ್ರಿನೇಶ್ವರ



ಯದುವೀರ್, ತಮ್ಮ ಪತ್ನಿ ತ್ರಿಷಿಕಾ ಹಾಗೂ ಪುತ್ರ ಆದ್ಯವೀರ್‌ನೊಂದಿಗೆ ಪೂಜೆ ಸಲ್ಲಿಸಿದರು




ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶಿವರಾತ್ರಿ ವಿಶೇಷ ಪೂಜೆ



ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ 21 ಅಡಿ ಎತ್ತರ ರುದ್ರಾಕ್ಷಿ ಶಿವಲಿಂಗ



ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿ ಶಿವರಾತ್ರಿ ಪೂಜೆ



ಮೈಸೂರು ಬನ್ನೂರು ರಸ್ತೆಯಲ್ಲಿರುವ ಶ್ರೀ ಮಹದೇಶ್ವರ ದೇವಸ್ಥಾನದಲ್ಲಿ ಭಕ್ತ ಸಮೂಹ



ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿ ನೆರೆದಿರುವ ಭಕ್ತಸಮೂಹ

ಮೈಸೂರು,ಫೆ.19(ಎಂಟಿವೈ)- ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಶನಿವಾರ ಮಹಾಶಿವರಾತ್ರಿ ಸಂಭ್ರಮ ಮನೆ ಮಾಡಿತ್ತು. ನಗರದ ಎಲ್ಲೆಡೆ ಇರುವ ಶಿವನ ದೇವಾಲಯಗಳಲ್ಲಿ ವಿಶೇಷ ಪೂಜಾ ಮಹೋತ್ಸವ ಜರುಗಿದವು. ಮುಂಜಾನೆಯಿಂದ ರಾತ್ರಿವರೆಗೂ ಅಪಾರ ಸಂಖ್ಯೆಯ ಭಕ್ತರು ದೇವಾಲಯಗಳಿಗೆ ಬಂದು ದರ್ಶನ ಪಡೆದರು.

ಕೋವಿಡ್‌ನಿಂದಾಗಿ ಎರಡು ವರ್ಷದಿಂದ ಕೆಲವು ಕಟ್ಟುಪಾಡಿನೊಂದಿಗೆ ಸರಳವಾಗಿ ಆಚರಿಸಲಾಗಿದ್ದ ಶಿವರಾತ್ರಿ ಹಬ್ಬ, ಈ ವರ್ಷ ವಿಜೃಂಭಣೆಯಿಂದ, ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಮೈಸೂರಿನ ವಿವಿಧೆಡೆಯಿರುವ ಈಶ್ವರನ ದೇವಾಲಯ, ಮಹಾದೇಶ್ವರಸ್ವಾಮಿ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜಾ ಮಹೋತ್ಸವ ಜರುಗಿತು. ಶಿವರಾತ್ರಿ ಅಂಗವಾಗಿ ದೇವಾಲಯಗಳಲ್ಲಿ ಅಲಂಕರಿಸಿ, ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಬೆಳಗ್ಗಿನಿಂದ ದೇವಾಲಯಗಳಿಗೆ ತೆರಳಿ ದರ್ಶನ ಪಡೆದ ಭಕ್ತರು, ರಾತ್ರಿ ಜಾಗರಣೆ ಮಾಡಿ ಶಿವಾನುಗ್ರಹಕ್ಕೆ ಪಾತ್ರರಾಗಲು ಹವಣಿಸಿದರು.

ಅರಮನೆ ಆವರಣದಲ್ಲಿ: ಮೈಸೂರು ಅರಮನೆ ಆವರಣದಲ್ಲಿರುವ ತ್ರಿನೇಶ್ವರ ಸ್ವಾಮಿ ದೇವಾಲಯದಲ್ಲಿ ಮಹಾಶಿವರಾತ್ರಿ ವಿಶೇಷ ಪೂಜಾ ಮಹೋತ್ಸವ ಭಕ್ತಿಪೂರ್ವಕವಾಗಿ ಜರುಗಿತು. ವರ್ಷಕ್ಕೆ ಒಂದೆ ದಿನ ಚಿನ್ನದ ಕೊಳಗ ಧರಿಸುವ ಸಂಪ್ರದಾಯವಿದ್ದು, ಚಿನ್ನದ ಕೊಳಗದಲ್ಲಿ ಮಿಂದೇಳುತ್ತಿದ್ದ ತ್ರಿನೇಶ್ವರಸ್ವಾಮಿಯನ್ನು ಕಣ್ತುಂಭಿಕೊಳ್ಳಲು ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ಮುಗಿಬಿದ್ದರು. ಮುಂಜಾನೆಯಿಂದಲೇ ಅಭಿಷೇಕ, ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಸಹಸ್ರನಾಮಾರ್ಚನೆ ಸೇರಿದಂತೆ ವಿವಿಧ ಪೂಜಾ ಕಾರ್ಯ ಜರುಗಿದವು. ಬಳಿಕ 11 ಕೆಜಿ ತೂಕದ ಚಿನ್ನದ ಕೊಳಗ ಧರಿಸಿ, ಅಲಂಕಾರ ಮಾಡಲಾಯಿತು. ಮುಂಜಾನೆ 6 ಗಂಟೆಯಿಂದ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಶನಿವಾರ ಸಂಜೆ 6 ಗಂಟೆ, ರಾತ್ರಿ 9 ಗಂಟೆ, ಭಾನುವಾರ ಮಧ್ಯರಾತ್ರಿ 12 ಗಂಟೆ ಹಾಗೂ ಮುಂಜಾನೆ 3 ಗಂಟೆ ಜಾವದ ಪೂಜೆ ನೆರವೇರಿಸಲಾಯಿತು. ನಾಲ್ಕು ಜಾವದ ಅಭಿಷೇಕ ಹಿಂದೂ ಸಂಪ್ರದಾಯದಲ್ಲಿ ಈ ನಾಲ್ಕು ಜಾವದ ಅಭಿಷೇಕ ಹಾಗೂ ವಿಶೇಷ ಪೂಜಾ ಮಹೋತ್ಸವ ಪ್ರಮುಖ ಪಾತ್ರವಹಿಸಲಿದ್ದು, ಆ ವೇಳೆ ದರ್ಶನ ಪಡೆದರೆ ಒಳಿತಾಗಲಿದೆ ಎಂಬ ನಂಬಿಕೆಯಿದೆ. ಈ ನಾಲ್ಕು ಜಾವದಲ್ಲೂ ಭಕ್ತರು ದರ್ಶನ ಪಡೆಯಲು ಸರದಿ ಸಾಲಿನಲ್ಲಿ ನಿಲ್ಲುವ ಮೂಲಕ ಭಕ್ತಿ ಪ್ರದರ್ಶಿಸಿದರು.

ಯದುವೀರ್ ದಂಪತಿಯಿಂದ ಪೂಜೆ: ಅರಮನೆ ಆವರಣದಲ್ಲಿರುವ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಶಿವರಾತ್ರಿ ವಿಶೇಷ ಪೂಜಾ ಮಹೋತ್ಸವದ ಹಿನ್ನೆಲೆಯಲ್ಲಿ ರಾಜ ವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪತ್ನಿ ತ್ರಿಷಿಕಾ ಕುಮಾರಿ, ಪುತ್ರ ಆದ್ಯವೀರ್ ಜೊತೆ ಬಂದು ಶಿವನ ದರ್ಶನ ಪಡೆದರು. ತ್ರಿನೇಶ್ವರ ಲಿಂಗಕ್ಕೆ ಧರಿಸಿದ್ದ ಚಿನ್ನದ ಕೊಳಗ (ಮುಖವಾಡ)ಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಭಕ್ತರಿಗೆ ಪ್ರಸಾದ ವಿತರಿಸಿದರು.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎಲ್ಲಾ ರಾಜರೂ ದೇವಾಲಯಕ್ಕೆ ಬಹಳಷ್ಟು ಕೊಡುಗೆ ಕೊಟ್ಟಿದ್ದಾರೆ. ಪುರಾತನ ದೇವಾಲಯ ಇದಾಗಿದ್ದು, ಪ್ರತಿ ವರ್ಷವೂ ತ್ರಿನೇಶ್ವರ ದೇವರಿಗೆ ಪೂಜೆ ಸಲ್ಲಿಸುತ್ತೇವೆ. ಶಿವರಾತ್ರಿ ಹಬ್ಬವನ್ನು ಎಲ್ಲರಂತೆ ನಮ್ಮ ಮನೆಯಲ್ಲೂ ಆಚರಿಸುತ್ತೇವೆ. ಪ್ರತಿವರ್ಷವೂ ಈ ದೇವಾಲಯಕ್ಕೆ ಚಿನ್ನದ ಕೊಳಗ ಧರಿಸುವುದು ವಿಶೇಷ. ಶಿವರಾತ್ರಿ ದಿನ ಶಿವನ ದೇವಾಲಯಗಳಲ್ಲಿ ವಿಶೇಷ ಪೂಜೆ ಜರುಗಲಿದೆ. ಈ ದಿನ ದರ್ಶನ ಪಡೆದರೆ ಒಳಿತಾಗಲಿದೆ ಎಂಬ ಪ್ರತೀತಿ ಇದೆ. ದೇವಾಲಯಕ್ಕೆ ಬರುವ ಭಕ್ತರಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಗಣಪತಿ ಸಚ್ಚಿದಾನಂದ ಆಶ್ರಮ: ಮೈಸೂರು-ನಂಜನಗೂಡು ಮುಖ್ಯ ರಸ್ತೆಯಲ್ಲಿರುವ ಗಣಪತಿ ಸಚ್ಚಿದಾನಂದ ಆಶ್ರಮದಲ್ಲೂ ಶಿವರಾತ್ರಿ ಸಂಭ್ರಮ ಮನೆ ಮಾಡಿತ್ತು. ಆಶ್ರಮದ ನಾದ ಮಂಟಪದಲ್ಲಿ ಮಹಾಗಣಪತಿ ಹೋಮ ಮತ್ತು ರುದ್ರ ಹೋಮ, ಶ್ರೀಚಕ್ರ ಪೂಜೆ, ಪೂರ್ಣಾಹುತಿ ಮಾಡಲಾಯಿತು. ಸಚ್ಚಿದಾನಂದ ಲಿಂಗಕ್ಕೆ ರುದ್ರಾಭಿಷೇಕ ನೆರವೇರಿತು. ಬಳಿಕ ಭಕ್ತರು ಶಿವಲಿಂಗಕ್ಕೆ ಸಹಸ್ರ ಕಳಶಾಭಿಷೇಕ ನೆರವೇರಿಸಿದರು. ಸಂಗೀತ ಕಾರ್ಯಕ್ರಮ, ದ್ವಂದ್ವ ಗಾಯನ, ಭರತ ನಾಟ್ಯ ಪ್ರದರ್ಶನ ಇತರ ಕಾರ್ಯಕ್ರಮ ನಡೆದವು. ಗಣಪತಿ ಸಚ್ಚಿದಾನಂದ ಸ್ವಾಮೀಜಿ ಶಿವಲಿಂಗಕ್ಕೆ ವಿವಿಧ ಅಭಿಷೇಕ ನೆರವೇರಿಸಿ ಪೂಜೆ ಸಲ್ಲಿಸಿದರು. ವೇದಘೋಷದೊಂದಿಗೆ ನಡೆದ ಶಿವರಾತ್ರಿ ಪೂಜೆ ಭಕ್ತರನ್ನು ಭಕ್ತಿಯ ಅಲೆಯಲ್ಲಿ ತೇಲುವಂತೆ ಮಾಡಿತು.

ಪೂಜಾ ಮಹೋತ್ಸವದ ನಂತರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಜನ್ಮಕೊಂದು ಶಿವರಾತ್ರಿ ಎಂದು ಹೇಳುತ್ತಾರೆ. ಜನ್ಮಕ್ಕೆ ಒಮ್ಮೆಯೇ ಶಿವನನ್ನು ಪೂಜಿಸಬೇಕು ಎಂಬ ಅರ್ಥವಲ್ಲ. ಶಿವ ಜ್ಞಾನದಾತ ಅವನು ಎಲ್ಲರಿಗೂ ಜ್ಞಾನವನ್ನು ನೀಡುವವನು. ಶಿವರಾತ್ರಿಯ ದಿನ ಉಪವಾಸದೊಂದಿಗೆ ಜಾಗರಣೆ ಮಾಡಿ, ಶಿವನ ಬಳಿಯಿಂದ ಜ್ಞಾನ ಸಂಪಾದಿಸಬೇಕು. ಶಿವ ಪಾರ್ವತಿ ಸೇರಿದಂತೆ ಎಲ್ಲರಿಗೂ ಗುರು. ಆತ ಇಡೀ ಬ್ರಹ್ಮಾಂಡವನ್ನು ವ್ಯಾಪಿಸಿಕೊಂಡಿದ್ದಾನೆ ಎಂದರು.

ಶಿವ ಕೇಶವರಲ್ಲಿ ಭೇದವಿಲ್ಲ ಇಬ್ಬರು ಒಬ್ಬರೇ ಹಾಗಾಗಿ ನಾವು ಶಿವಧ್ಯಾನವನ್ನು ಮಾಡೋಣ. ಈ ಶಿವರಾತ್ರಿ ಸಂದರ್ಭದಲ್ಲಿ ಒಳ್ಳೆಯ ಮಳೆ, ಬೆಳೆ ಆಗಲಿ, ಬೆಳೆ ಕೈಗೆ ಸಿಗುವಂತಾಗಲಿ, ನಾಡು ಸುಭಿಕ್ಷವಾಗಲಿ, ಪ್ರಜೆಗಳಿಗೆ, ಪ್ರಜಾಪ್ರತಿನಿಧಿಗಳಿಗೆ, ಪ್ರಜೆಗಳಿಂದ ಆರಿಸಿ ಬಂದವರಿಗೆ ಭಗವಂತ ಒಳ್ಳೆಯ ಮನಸ್ಸು ಕೊಡಲಿ. ಕರ್ನಾಟಕ ಸೇರಿದಂತೆ ಇಡೀ ಪ್ರಪಂಚಕ್ಕೆ ಶಿವನ ಕೃಪೆಯಿಂದ ಒಳ್ಳೆಯದಾಗಲಿ ಎಂದು ಹಾರೈಸಿದರು.

ವಿವಿಧ ದೇವಾಲಯಗಳಲ್ಲಿ: ಜಿಲ್ಲಾದ್ಯಂತ ಮಹಾ ಶಿವರಾತ್ರಿ ಹಬ್ಬವನ್ನು ಶನಿವಾರ ಭಕ್ತರು ಸಂಭ್ರಮ, ಭಕ್ತಿಯಿಂದ ಆಚರಿಸಿದರು. ಶಿವನಿಗೆ ಪ್ರಿಯವಾದ ಬಿಲ್ವಪತ್ರೆ ಸಮರ್ಪಿಸಿದ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಮೈಸೂರಿನ ಸಿದ್ದಾರ್ಥ ನಗರ, ಕೆ.ಟಿ.ಸ್ಟ್ರೀಟ್, ಸುಣ್ಣದಕೇರಿ, ಪಡುವಾರಹಳ್ಳಿ, ಕುಂಬಾರಕೊಪ್ಪಲು, ಹಳ್ಳದಕೇರಿ ಸೇರಿದಂತೆ ವಿವಿಧೆಡೆ ಇರುವ ಮಹದೇಶ್ವರರ ದೇವಾಲಯದಲ್ಲಿ ವಿಶೇಷ ಪೂಜಾ ಮಹೋತ್ಸವ ಜರುಗಿತು. ರಾಮಾನುಜ ರಸ್ತೆಯಲ್ಲಿರುವ ಗುರುಕುಲ, ಕಾಮ-ಕಾಮೇಶ್ವರಿ ದೇವಾಲಯ, ಮಾತೃಮಂಡಳಿ ಸರ್ಕಲ್, ಕೆ.ಜಿ.ಕೊಪ್ಪಲ್, ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಚಂದ್ರಮೌಳೇಶ್ವರ ದೇವಾಲಯ, ಶ್ರೀರಾಂಪುರದ ಶಿವನ ದೇಗುಲ, ಚಾಮುಂಡಿಬೆಟ್ಟ ದಲ್ಲಿರುವ ಮಹಾಬಲೇಶ್ವರ, ಕಾಶಿವಿಶ್ವನಾಥ ದೇವಸ್ಥಾನ, ಮಹಾಲಿಂಗೇಶ್ವರ ದೇವಾಲಯ, ದಿವಾನ್ಸ್ ರಸ್ತೆಯ ಅಮೃತೇಶ್ವರ ದೇವಾಲಯ, ದನ್ವಂತ್ರಿ ರಸ್ತೆಯ ಚಿದಂಬರೇಶ್ವರ ದೇವಾಲಯ ಹಾಗೂ ಇನ್ನಿತರ ದೇವಾಲಯಗಳಲ್ಲಿ ಭಕ್ತರು ನಸುಕಿನಿಂದಲೇ ವಿಶೇಷಪೂಜೆ ಸಲ್ಲಿಸಿದರು. ಬೆಳಗ್ಗೆ 6ರಿಂದ ಮಧ್ಯರಾತ್ರಿ 12ರವರೆಗೂ ಭಕ್ತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಭಕ್ತರಿಂದಲೇ ಬಿಲ್ವಪತ್ರೆ ಅರ್ಪಣೆ: ಹನ್ನೆರಡು ಜ್ಯೋತಿರ್ಲಿಂಗ ದರ್ಶನ ಹಾಗೂ ಶಿವರಾತ್ರಿಯಂದು ಭಕ್ತಾದಿಗಳೇ ಬಿಲ್ವಪತ್ರೆ ಅಭಿಷೇಕ ಮಾಡಲು ಒಂಟಿಕೊಪ್ಪಲಿನ ಚಂದ್ರಮೌಳೇಶ್ವರ ದೇವಾಲಯದಲ್ಲಿ ಅವಕಾಶ ಮಾಡಿಕೊಡಲಾಗಿತ್ತು. ನೂರಾರು ಭಕ್ತರು ದೇಗುಲಕ್ಕೆ ಆಗಮಿಸಿ ಶಿವನ ದರ್ಶನ ಪಡೆದು ಪುನೀತರಾದರು.

ಬ್ರಹ್ಮಕುಮಾರಿ ಈಶ್ವರೀಯ ವಿವಿ: ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ವಿವಿ ವತಿಯಿಂದ ಕೈಲಾಸ ಪರ್ವತ ನಿರ್ಮಿಸಿ, 21 ಅಡಿ ಎತ್ತರ ರುದ್ರಾಕ್ಷಿ ಶಿವಲಿಂಗ ನಿರ್ಮಿಸಿದೆ. 21 ಅಡಿ ಎತ್ತರದ ಶಿವಲಿಂಗದ ದರ್ಶನ ಪಡೆಯಲು ಭಕ್ತರು ಮುಗಿಬಿದ್ದರು.

ಇಷ್ಟಾರ್ಥ ಸಿದ್ಧಿಲಿಂಗ ಪೂಜೆ: ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಆವರಣದಲ್ಲಿ ಶಿವರಾತ್ರಿ ಸಂಭ್ರಮ ಕಳೆ ಕಟ್ಟಿತ್ತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಶಿವಲಿಂಗಕ್ಕೆ ಅಭಿಷೇಕ ನೆರವೇರಿಸಿದರು. ವಿವಿಧ ಪೂಜಾ ಕೈಕಂರ್ಯ ನೆರವೇರಿದ ಬಳಿಕ ಅಲಂಕಾರ ಮಾಡಿ ಪೂಜೆ ಸಲ್ಲಿಸಿದರ ಬಳಿಕ ಇಷ್ಟಾರ್ಥ ಸಿದ್ಧಿ ಲಿಂಗ ಪೂಜೆ ನಡೆಸಿದರು. ಈ ವೇಳೆ ಹಲವು ಭಕ್ತರು ಪಾಲ್ಗೊಂಡು ಸ್ವಾಮೀಜಿ ಅವರಿಂದ ಪೂಜೆ ಮಾಡಿದರು.



ಮೈಸೂರಿನ ಕಲಾ ಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಹೆಬ್ಬಾಳಿನ ಕೆಎನ್‌ಸಿ ಇನ್ನೋವೇಟಿವ್ ಗ್ಲೋಬಲ್ ಶಾಲೆ ವಿದ್ಯಾರ್ಥಿನಿ, ವಾಣಿವಿಲಾಸ ಬಡಾವಣೆಯ ರಾಘವೇಂದ್ರ ರಾವ್ ವಾಗ್ಮಡೆ ಹಾಗೂ ಬಿ.ವೀಣಾ ದಂಪತಿ ಪುತ್ರಿ ಆರ್.ಬೃಂದಾ ಯೋಗ ಪ್ರದರ್ಶನ ನೀಡಿದರು.

ಸ್ಕೂಟರ್‌ಗೆ ಸಾರಿಗೆ ಬಸ್ ಡಿಕ್ಕಿ: ಯುವಕ ಸಾವು

ಮಹಿಳೆಗೆ ಗಾಯ, ವರಕೋಡು ಗೇಟ್ ಬಳಿ ಮಧ್ಯಾಹ್ನ ಘಟನೆ

ಮೈಸೂರು, ಫೆ.19(ಆರ್‌ಕೆ)-ಸ್ಕೂಟರ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಯುವಕ ಸಾವನ್ನಪ್ಪಿದ್ದು, ಮಹಿಳೆ ಗಾಯಗೊಂಡಿರುವ ಘಟನೆ ವರಕೋಡು ಗೇಟ್ ಬಳಿ ತಿ.ನರಸೀಪುರ ರಸ್ತೆಯಲ್ಲಿ ಇಂದು ಸಂಜೆ ಸಂಭವಿಸಿದೆ. ಮೈಸೂರಿನ ಮಂಚೇಗೌಡನ ಕೊಪ್ಪಲು ನಿವಾಸಿ ಲೋಕೇಶ್ ಅವರ ಮಗ ಮಂಜುನಾಥ(23) ಸಾವನ್ನಪ್ಪಿದ ಯುವಕ. ಗಾಯಗೊಂಡಿರುವ ಆತನ ಸಂಬಂಧಿ ನಾಗಮ್ಮ ಅವರನ್ನು ಮೈಸೂರಿನ ಕೆಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಹಬ್ಬಕ್ಕೆಂದು ಬಿಲ್ಲಹಳ್ಳಿಗೆ ಹೋಗಿದ್ದ ಅವರು, ವಾಪಸ್ ಬರುವಾಗ ವರಕೋಡು ಗೇಟ್ ಬಳಿ ಪೆಟ್ರೋಲ್ ಬಂಕ್‌ನಲ್ಲಿ ಸ್ಕೂಟರ್‌ಗೆ ಪೆಟ್ರೋಲ್ ತುಂಬಿಸಿಕೊಂಡು ಮುಖ್ಯ ರಸ್ತೆಗೆ ಬಂದಾಗ ಮೈಸೂರಿನಿಂದ ವೇಗವಾಗಿ ಬಂದ ಕೆಎಸ್‌ಆರ್‌ಟಿಸಿ ಬಸ್ ಸಂಜೆ 5 ಗಂಟೆ ವೇಳೆ ಡಿಕ್ಕಿ ಹೊಡೆಯಿತು.

ತೀವ್ರವಾಗಿ ಗಾಯಗೊಂಡಿದ್ದ ಮಂಜುನಾಥ ಮಾರ್ಗ ಮಧ್ಯೆ ಅಸುನೀಗಿರುವುದಾಗಿ ವೈದ್ಯರು ದೃಢಪಡಿಸಿದರು. ಗಾಯಾಳು ನಾಗಮ್ಮರನ್ನು ಕೆಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತ ಹಿಂದೂ ರಾಷ್ಟ್ರವಾಗಿ ಉಳಿಯಲು ಛತ್ರಪತಿ ಶಿವಾಜಿ ಕೊಡುಗೆ ಅಪಾರ

ಶಾಸಕ ಎಲ್.ನಾಗೇಂದ್ರ ಅಭಿಮತ





ಮೈಸೂರು,ಫೆ.19(ಎಂಟಿವೈ)- ಭಾರತ ಹಿಂದೂ ರಾಷ್ಟ್ರವಾಗಿ ಉಳಿಯಲು ಶಿವಾಜಿ ಮಹಾರಾಜರ ಕೊಡುಗೆ ಅಪಾರ ಎಂದು ಶಾಸಕ ಎಲ್.ನಾಗೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತದಲ್ಲಿ ಶಿವಾಜಿ ಜನಿಸದಿದ್ದರೆ ದೇಶದ ರೂಪರೇಷೆಯೇ ಬೇರೆಯಾಗಿರುತ್ತಿತ್ತು. ಶ್ರೀಮಂತಿಕೆಯಿಂದ ಕೂಡಿರುವ ಶಿವಾಜಿ ಪರಂಪರೆಯ ಜನರು ಶೈಕ್ಷಣಿಕವಾಗಿ ಆರ್ಥಿಕವಾಗಿ ಸಬಲರಾಗಬೇಕು. ರಾಜಕೀಯವಾಗಿ ಬೆಳೆದು, ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಇದಕ್ಕೆ ಬೇಕಾದ ಸೌಲಭ್ಯವನ್ನು ಸರ್ಕಾರದಿಂದ ಕೊಡಿಸುವಲ್ಲಿ ನಾನು ಶ್ರಮಿಸುತ್ತೇನೆ. ಸಮಾಜವನ್ನು '3ಬಿ' ಯಿಂದ '2ಎ' ಗೆ ಸೇರಿಸುವ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರುವ ಕೆಲಸ ಮಾಡುತ್ತೇನೆ ಎಂದರು.

ಇದೇ ವೇಳೆ ಮೇಯರ್ ಶಿವಕುಮಾರ್ ಮಾತನಾಡಿ, 500 ವರ್ಷಗಳ ನಂತರ ಶಿವಾಜಿ ಬಂದ ಮೇಲೆ ದೆಹಲಿಯಲ್ಲಿ ಹಿಂದೂ ಧ್ವಜದ ಹಾರಾಟ ಸಾಧ್ಯವಾಯಿತು. ನಾವು ಹಿಂದುಗಳಾಗಿ ಉಳಿದಿರುವುದು ಮತ್ತು ಹಿಂದುತ್ವದ ಧ್ವಜದ ಹಾರಾಟ ಸಾಧ್ಯವಾಗಿರುವುದು ಶಿವಾಜಿ ಮಹಾರಾಜರಿಂದಲೇ ಆಗಿದೆ. ಛತ್ರಪತಿ ಶಿವಾಜಿ ಮಹಾರಾಜರು ಇಲ್ಲದಿದ್ದರೆ ಕಾಶಿಗೆ ಕಳೆ ಇರುತ್ತಿರಲ್ಲಿಲ್ಲ ಎಂದು ದೆಹಲಿಯ ಪರಮಾನಂದ ಎಂಬ ಕವಿ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಶಿವಾಜಿ ಒಂದು ಜಾತಿಗೆ ಸೀಮಿತವಾದವರಲ್ಲ. ಮೈಸೂರಿನಲ್ಲಿ ಶಿವಾಜಿ ಮಹಾರಾಜರ ಪುತ್ಥಳಿಯನ್ನು ಸ್ಥಾಪಿಸುವ ನಿಮ್ಮ ಮನವಿಯನ್ನು ಪುರಸ್ಕರಿಸಿ, ಪಾಲಿಕೆಯಿಂದ ಸಾಧ್ಯವಾಗುವ ಕೆಲಸವನ್ನು ನಾವು ಮಾಡುತ್ತೇವೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಆಕಾಶವಾಣಿಯ ನಿವೃತ್ತ ಕಾರ್ಯಕ್ರಮಾಧಿಕಾರಿ, ರಂಗಕರ್ಮಿ ಎನ್.ವಿ.ರಮೇಶ್ ವಿಶೇಷ ಉಪನ್ಯಾಸ ನೀಡಿ, ದೇಶದಲ್ಲಿ ಹಿಂದುತ್ವ ರಕ್ಷಿಸಿದವರಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಪ್ರಮುಖರು. ಭಾರತದ ಸಂಸ್ಕೃತಿ ಐಕ್ಯತೆಗೆ ಶಿವಾಜಿ ಕೊಟ್ಟ ಕೊಡುಗೆ ಸ್ಮರಣೀಯ. ಮರಾಠ ಸಾಮ್ರಾಜ್ಯದ ಸಂಸ್ಥಾಪಕರು ಆಗಿದ್ದ ಶಿವಾಜಿ, 1674ರಲ್ಲಿ ಪಟ್ಟಾಭಿಷೇಕ ನೆರವೇರಿದ ಬಳಿಕ ಹಿಂದುಸ್ತಾನ ಒಗ್ಗೂಡಿಸುವಲ್ಲಿ ಶ್ರಮಿಸಿದರು. ಧಾರ್ಮಿಕ ಚಿಂತನೆಗಳನ್ನು ಬೋಧಿಸಿದ್ದ ತಾಯಿ ಜೀಜಾಬಾಯಿ, ಸದಾ ಸತ್ಯಕ್ಕೆ ಹೋರಾಡು, ಯಾವುದೇ ಆಹ್ವಾನಕ್ಕಾಗಿ ಆಸೆ ಪಡಬೇಡ, ನಿರ್ಭೀತನಾಗಿರು ಎನ್ನುತ್ತಾ ಆದರ್ಶಪ್ರಾಯದ ಕಥೆಗಳನ್ನು ಹೇಳುತ್ತಿದ್ದರು. ಇದರಿಂದ ಛತ್ರಪತಿ ಶಿವಾಜಿ ಚಿಕ್ಕವಯಸ್ಸಿನಿಂದಲೇ ರಾಜನಾಗಬೇಕೆಂಬ ಆಸೆಯನ್ನು ಹೊಂದಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ಮಾಜಿ ಶಾಸಕ ಮಾರುತಿ ರಾವ್ ಪವಾರ್, ಪಾಲಿಕೆ ಸದಸ್ಯೆ ಶೋಭಾ ಸುನೀಲ್ ಹಾಗೂ ಛತ್ರಪತಿ ಶ್ರೀ ಶಿವಾಜಿ ಜಯಂತೋತ್ಸವ ಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೆರವಣಿಗೆ: ಇದಕ್ಕೂ ಮುನ್ನ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಿಂದ ಶಿವಾಜಿ ಭಾವಚಿತ್ರದ ಮೆರವಣಿಗೆ ಆಯೋಜಿಸಲಾಗಿತ್ತು ಶಿವಾಜಿ ಭಾವಚಿತ್ರಕ್ಕೆ ಮೇಯರ್ ಶಿವಕುಮಾರ್ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು. ವಿವಿಧ ಸಾಂಸ್ಕೃತಿಕ ಕಲಾತಂಡಗಳು, ಶಿವಾಜಿ ವೇಷಧಾರಿಗಳು ಮೆರವಣಿಗೆಯಲ್ಲಿ ಸಾಗಿದರು. ಮಹಿಳೆಯರು ಸ್ಕೂಟರ್ ಜಾಥ ನಡೆಸಿದರು. ಕೆಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ ಜೆಎಲ್‌ಬಿ ರಸ್ತೆ ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿಸಿದರು. ಮೆರವಣಿಗೆಯಲ್ಲಿ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಮಾರುತಿರಾವ್ ಪವಾರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮಹಾಶಿವರಾತ್ರಿ ಹಿನ್ನೆಲೆ

ಶ್ರೀನಂಜುಡೇಶ್ವರನ ಸನ್ನಿಧಿಗೆ ಹರಿದು ಬಂದ ಭಕ್ತ ಸಾಗರ

ಜಾಗರಣೆ, ಶಿವನಾಮ ಸ್ಮರಣೆಯಲ್ಲಿ ಮಿಂದೆದ್ದ ಲಕ್ಷಾಂತರ ಭಕ್ತರು



ನಂಜನಗೂಡು, ಫೆ.19– ಗರಳಪುರಿ, ದಕ್ಷಿಣ ಕಾಶಿ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದಿರುವ ಇಲ್ಲಿನ ಶ್ರೀಕಂಠೇಶ್ವರನ ಸನ್ನಿಧಿಗೆ ಮಹಾ ಶಿವರಾತ್ರಿ ಹಬ್ಬದ ಅಂಗವಾಗಿ ರಾಜ್ಯದ ಮೂಲೆ ಮೂಲೆಯಿಂದ ಭಕ್ತ ಸಾಗರ ಹರಿದು ಬಂತು.

ಮಹಾಶಿವರಾತ್ರಿ ಜಾಗರಣೆ ಪ್ರಯುಕ್ತ ಲಕ್ಷಾಂತರ ಭಕ್ತರು ದೇವಾಲಯಕ್ಕೆ ಭೇಟಿ ನೀಡಿ ಜಾಗರಣೆ ಮಾಡುವ ಮೂಲಕ ರಾತ್ರಿಯಿಡೀ ಶಿವನಾಮ ಸ್ಮರಣೆಯ ಭಕ್ತಿ ಸಾಗರದಲ್ಲಿ ಮಿಂದೆದ್ದು ದೇವರ ಕೃಪೆಗೆ ಪಾತ್ರರಾದರು.

ಶನಿವಾರ ಮುಂಜಾನೆ 4.30ರಿಂದಲೇ ಭಕ್ತರು ಕಪಿಲಾ ನದಿಯಲ್ಲಿ ಮಿಂದು ದೇವರ ದರ್ಶನಕ್ಕಾಗಿ ಸಾಲುಗಟ್ಟಿ ನಿಂತಿದ್ದರು. ಶಿವರಾತ್ರಿ ಅಂಗವಾಗಿ ಶ್ರೀಕಂಠೇಶ್ವರ ಸ್ವಾಮಿಗೆ ಚಿನ್ನದ ಕೊಳಗ ಧರಿಸಿ ಮುತ್ತು ರತ್ನಗಳಿಂದ ಸಿಂಗರಿಸಲಾಗಿತ್ತು. ಈ ವೇಳೆ ವಿಶೇಷ ಪೂಜಾ ಕಾರ್ಯಗಳು ಜರುಗಿದವು. ಉಷಾಕಾಲದ ಪೂಜೆಯಲ್ಲಿ, ಕ್ಷೀರಾಭಿಷೇಕ, ಪದ್ಯಾಭಿಷೇಕ, ಫಲ ಪಂಚಾಮೃತಾಭಿಷೇಕ, ಏಕದಶಾವರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಶಾಲ್ಯನ್ನ, ಮಹಾ ಮಂಗಳಾರತಿ ನೆರವೇರಿಸಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು.

ದೇವಾಲಯದ ಆವರಣದಲ್ಲಿ ಭಕ್ತರು ಉರುಳು ಸೇವೆ, ದೂಪ–ದೀಪಸೇವೆ, ತುಲಾಭಾರ ಸೇವೆಗಳನ್ನು ನೆರವೇರಿಸಿದರು. ಕಪಿಲಾ ನದಿಯಲ್ಲಿ ದೀಪಗಳನ್ನು ತೇಲಿ ಬಿಟ್ಟು ಹರ್ಷ ವ್ಯಕ್ತಪಡಿಸಿದರಲ್ಲದೆ, ದೇವರ ಹುಂಡಿಗೆ ಹರಕೆ ಬೆಳ್ಳಿ, ಚಿನ್ನದ ಪದಾರ್ಥಗಳನ್ನು ಹಾಕಿ ಹರಕೆ ತೀರಿಸಿ ಭಕ್ತಿ ಮೆರೆದರು.

ನಂತರ ಪ್ರಾತಃಕಾಲ, ಸಂಗಮಕಾಲ, ಮಧ್ಯಮ ಕಾಲ ಸೇರಿದಂತೆ ಒಟ್ಟು 4 ಕಾಲಗಳಲ್ಲಿ ಪೂಜೆ ನೆರವೇರಿಸಲಾಯಿತು. ಸಂಜೆ 6 ರಿಂದ ಮೊದಲ ಜಾವದ ಪೂಜೆ, ರಾತ್ರಿ 9 ಗಂಟೆಗೆ 2ನೇ ಜಾವದ ಪೂಜೆ, ರಾತ್ರಿ 12 ಗಂಟೆಗೆ 3ನೇ ಜಾವದ ಪೂಜೆ ಮತ್ತು 3 ಗಂಟೆಗೆ 4ನೇ ಜಾವದ ಪೂಜಾ ವಿಧಿಗಳು ಸಾಂಗೋಪವಾಗಿ ನಡೆದವು. ಶನಿವಾರ ಬೆಳಗ್ಗೆಯಿಂದ ಭಾನುವಾರ ಮುಂಜಾನೆವರೆಗೂ ದೇವಾಲಯದ ಬಾಗಿಲು ತೆರೆದಿದ್ದರಿಂದ ಭಕ್ತರು ದೇವರ ದರ್ಶನ ಪಡೆದು ಭಾವಪರವಶರಾದರು.

ಶಿವರಾತ್ರಿ ಅಂಗವಾಗಿ ದೇವಾಲಯದ ಒಳಾವರಣ, ಹೊರ ಆವರಣದ ಸುತ್ತಮುತ್ತ ವಿಶೇಷವಾದ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ತಳಿರು ತೋರಣಗಳಿಂದ ಹಾಗೂ ವಿದ್ಯುತ್ ದೀಪಾಲಂಕಾರದಿಂದ ದೇವಾಲಯವನ್ನು ಅಲಂಕರಿಸಲಾಗಿತ್ತು.

ಶಿವರಾತ್ರಿ ಅಂಗವಾಗಿ ದೇವಾಲಯದ ದಾಸೋಹ ಭವನದಲ್ಲಿ ಬೆಳಗ್ಗೆಯಿಂದ ರಾತ್ರಿ 11 ಗಂಟೆವರೆಗೂ ಫಲಾಹಾರ, ಉಪಹಾರ, ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಪೋಲೀಸರು ಬಿಗಿ ಪೋಲೀಸ್ ಬಂದೋಬಸ್ತ್ ಕೈಗೊಂಡಿದ್ದರು.

ತಾಲೂಕಿನ ದೇವಿರಮ್ಮನಹಳ್ಳಿ ಶ್ರೀಶರಣ ಸಂಘಮ ಮಠದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ 108 ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಮಠಕ್ಕೆ ಆಗಮಿಸಿ ಲಿಂಗಗಳ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ತಾಲೂಕಿನ ಚಿಕ್ಕಯ್ಯನಛತ್ರದ ಪ್ರಸನ್ನ ನಂಜುಂಡೇಶ್ವರ ದೇವಾಲಯ, ಕಾಶಿ ವಿಶ್ವನಾಥನ ಸನ್ನಿಧಿ, ಶಂಕರಮಠ, ಮಲ್ಲನಮೂಲೆ ಮಠ, ದೇವನೂರು ಮಠ, ಸುತ್ತೂರಿನ ಮಠಗಳಲ್ಲೂ ಕೂಡ ಶಿವರಾತ್ರಿ ಹಬ್ಬದ ಅಂಗವಾಗಿ ಜಾಗರಣೆ ಮತ್ತು ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು. ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಗಿತ್ತು. ಸಾವಿರಾರು ಭಕ್ತರು ಬೇಟಿ ನೀಡಿ ದೇವರ ದರ್ಶನ ಪಡೆದು ಪುನೀತರಾದರು.

ಇದೇ ವೇಳೆ ಶಾಸಕ ಬಿ.ಹರ್ಷವರ್ಧನ್, ಪತ್ನಿ ಪೂರ್ಣಿಮಾ ಪ್ರಸಾದ್, ಅತ್ತೆ ಜಯಲಕ್ಷ್ಮಿ ಅವರೊಂದಿಗೆ ಕುಟುಂಬ ಸಮೇತರಾಗಿ ಶ್ರೀಕಂಠೇಶ್ವರ ಸ್ವಾಮಿ ದರ್ಶನ ಪಡೆದರು.

ಭಕ್ತರ ಮನಗೆದ್ದ ಸಾಂಸ್ಕೃತಿಕ ಕಾರ್ಯಕ್ರಮ

ದೇವಾಲಯದ ಮುಂಭಾಗ ಶಿವರಾತ್ರಿ ಜಾಗರಣೆಗಾಗಿ ಸರ್ಕಾರ ಸಾಂಸ್ಕೃತಿಕ ಸಂಗೀತ ವೈಭವ ಬೃಹತ್ ಕಾರ್ಯಕ್ರಮ ಏರ್ಪಡಿಸಿತ್ತು. ಸಂಜೆ 6.30ರಿಂದ 9ರವರೆಗೆ ಪ್ರಖ್ಯಾತ ಹಿನ್ನೆಲೆ ಗಾಯಕ ಅಜಯ್ ವಾರಿಯರ್ ಮತ್ತು ತಂಡದಿಂದ ಶಿವನಾಮ ಗಾನಾಮೃತ, ಶಿವನಾಮಸ್ಮರಣೆ ಭಕ್ತಿಗೀತೆಗಳು ಹಾಗೂ ಜೀ ಟಿವಿ ಸರಿಗಮಪ ಕಲಾವಿದರು ನಡೆಸಿಕೊಟ್ಟ ಜಾನಪದ ಚಿತ್ರ ಗೀತೆಗಳೂ ಭಕ್ತರ ಮನಗೆದ್ದವು.

ರಾತ್ರಿ 9 ರಿಂದ 10 ಗಂಟೆವರೆಗೆ ಮಂಗಳೂರಿನ ಹೆಜ್ಜೆನಾದ ತಂಡದಿಂದ ಭಾರತೀಯ ಕಲಾ ಪ್ರಕಾರ ನೃತ್ಯ ವೈಭವ, ವಿಷ್ಣುವರ್ಧನ್, ಮತ್ತು ಪುನೀತ್ ರಾಜ್‌ಕುಮಾರ್ ಅವರಿಗೆ ನೃತ್ಯ ನಮನ, ಚಲನಚಿತ್ರ ತಾರಾ ಜೋಡಿ ವಿಕ್ರಮ್ ಸೂರಿ ಹಾಗೂ ನಮಿತಾ ರಾವ್ ಅವರ ಸೂರ್ಯ ಕಲಾವಿದರ ತಂಡದಿಂದ ಮೋಹಿನಿ ಭಸ್ಮಾಸುರ ಶಿಲಾಬಾಲಿಕೆ ವೈಭವ, ಕಲಾ ಕದಂಬ ತಂಡದಿಂದ ದಕ್ಷಯಜ್ಞ ಯಕ್ಷಗಾನ, ರಾಮಾಯಣ, ಮಹಾಭಾರತದ ತುಣುಕುಗಳ ಯಕ್ಷಗಾನ ಪ್ರದರ್ಶನ, ವಿಧುಷಿ ರಮ್ಯಾ ರಾಘವೇಂದ್ರರಿಂದ ನಟರಾಜ ನಾಟ್ಯ ಶಾಲೆಯ ಭರತನಾಟ್ಯ ಕಲಾಪ್ರದರ್ಶನಗಳು ಪ್ರೇಕ್ಷಕರ ಮನಗೆದ್ದವು. ನಂತರ ಮಜಾಭಾರತ, ಗಿಜ್ಜಿಗಿಲಿಗಿಲಿ ತಂಡದ ಕಲಾವಿದರು ನಡೆಸಿಕೊಟ್ಟ ಹಾಸ್ಯೋತ್ಸವಕ್ಕೆ ಪ್ರೇಕ್ಷಕರು ನಗೆಯ ಖುಷಿ ಕಡಲಲ್ಲಿ ತೇಲಾಡಿ, ಚಪ್ಪಾಳೆ, ಶಿಳ್ಳೆ ಹೊಡೆದು ಕುಣಿದು ಕುಪ್ಪಳಿಸಿದರು. ನಂತರ ನಡೆದ ಜಾನಪದ ನೃತ್ಯ ವೈಭವ, ವೀರಗಾಸೆ, ಹಾಸ್ಯ ಸಂಭ್ರಮ, ಕಲೆಗಳು ಭಕ್ತರ ಕಣ್ಮನಸೆಳೆದು ಮೆಚ್ಚುಗೆಗೆ ಪಾತ್ರವಾದವು. ಕಾರ್ಯಕ್ರಮದಲ್ಲಿ ಸ್ಥಳೀಯ ಕಲಾವಿದರಿಗೂ ಅವಕಾಶ ಕಲ್ಪಿಸಲಾಗಿತ್ತು.




ಶಿವರಾತ್ರಿ ಹಾಗೂ 87ನೇ ನಿರಾಕಾರಿ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ ಅಂಗವಾಗಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ಹುಣಸೂರಿನ ಸಾಯಿಬಾಬ ಮಂದಿರದ ಮುಂಭಾಗದ ಮೈದಾನದಲ್ಲಿ "ದ್ವಾದಶ ಜ್ಯೋತಿರ್‌ಲಿಂಗಗಳ ನಿರ್ಮಾಣ" ಹಾಗೂ ಮರಳಿನಲ್ಲಿ ಶಿವಲಿಂಗ ಶಂಕರ, ದರ್ಶನ"ವನ್ನು ನಿರ್ಮಿಸಿತ್ತು. ಸಾವಿರಾರು ಭಕ್ತರು ಇವುಗಳನ್ನು ವೀಕ್ಷಿಸಿದರು. ಈ ವೇಳೆ ಜಿಲ್ಲಾ ರೈತ ಸಂಘದ ಗೌರವಾಧ್ಯಕ್ಷ ಕೃಷ್ಣಕುಮಾರ್, ನಗರಸಭಾ ಸದಸ್ಯರಾದ ಕೃಷ್ಣರಾಜ ಗುಪ್ತ, ಶರವಣ, ಸಿರಾಜ್, ಬ್ರಹ್ಮಕುಮಾರಿ ವಿವಿ ಸಂಚಾಲಕಿಯರಾದ ಗೀತಾ, ನಾಗಶ್ರೀ, ಮೂರ್ತಿ, ಕೃಷ್ಣ ಮೂರ್ತಿ, ವಿಶ್ವನಾಥ್, ಸಂದೀಪ್, ವಿ.ಎನ್.ದಾಸ್ ಹಾಗೂ ಇತರರಿದ್ದರು.

ಸಂಭ್ರಮದ ಶ್ರೀ ವೈದ್ಯೇಶ್ವರಸ್ವಾಮಿ ಬ್ರಹ್ಮ ರಥೋತ್ಸವ



ಪಿರಿಯಾಪಟ್ಟಣ, ಫೆ.19– ಪಟ್ಟಣದಲ್ಲಿ ಶ್ರೀ ವೈದ್ಯೇಶ್ವರಸ್ವಾಮಿ ಬ್ರಹ್ಮ ರಥೋತ್ಸವ ಭಾನುವಾರ ಸಂಭ್ರಮದಿಂದ ನಡೆಯಿತು.

ಪಟ್ಟಣದ ಒಳಕೋಟೆಯಲ್ಲಿರುವ ಶ್ರೀ ವೈದ್ಯನಾಥೇಶ್ವರ ದೇವಾಲಯದಲ್ಲಿ ಕಳೆದ 2 ದಿನಗಳಿಂದ ವಿಶೇಷ ಪೂಜೆ, ಹೋಮ ಹವನ ನಡೆದು ಶನಿವಾರ ರಾತ್ರಿ ಗಿರಿಜಾ ಕಲ್ಯಾಣೋತ್ಸವ ನೆರವೇರಿತು. ಭಾನುವಾರ ಬೆಳಗ್ಗೆ 10.30 ರಿಂದ 11.30 ಗಂಟೆಯೊಳಗೆ ಸಲ್ಲುವ ಮೇಷ ಲಗ್ನದಲ್ಲಿ ಶ್ರೀವೈದ್ಯೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ರಥವನ್ನು ವಿವಿಧ ಹೂಗಳಿಂದ ಅಲಂಕೃತಗೊಳಿಸಲಾಗಿತ್ತು. ನಂತರ ಪಾರ್ವತಿ ದೇವಿ ಹಾಗೂ ಈಶ್ವರ ಉತ್ಸವ ಮೂರ್ತಿಗಳನ್ನು ದೇವಾಲಯದ ಸುತ್ತಲೂ ಪ್ರದಕ್ಷಿಣೆ ಮಾಡಲಾಯಿತು. ಬಳಿಕ ರಥದಲ್ಲಿ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ಹಣ್ಣು ಜವನ ಎಸೆದು ಭಕ್ತಿ ಭಕ್ತಿ ಸಮರ್ಪಿಸಿದರು.

ಅನ್ನಸಂತರ್ಪಣೆ: ಜಾತ್ರಾ ಮಹೋತ್ಸವ ಅಂಗವಾಗಿ ಭಕ್ತರಿಗೆ ವೈದ್ಯೇಶ್ವರಸ್ವಾಮಿ ಭಕ್ತ ಮಂಡಳಿ ಮತ್ತು ಇತರೆ ದಾನಿಗಳಿಂದ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

ಇಂದು ನಂಜನಗೂಡಿಗೆ ಪ್ರಜಾಧ್ವನಿ ಯಾತ್ರೆ

ನಂಜನಗೂಡು, ಫೆ.19– ಆಡಳಿತರೂಢ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಲು ಕಾಂಗ್ರೆಸ್ ರೂಪಿಸಿರುವ ಪ್ರಜಾಧ್ವನಿ ಬಸ್‌ಯಾತ್ರೆ ಫೆ.20ರಂದು ನಂಜನಗೂಡಿಗೆ ಆಗಮಿಸಲಿದ್ದು, ನಗರದ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ಸಂಜೆ 5 ಗಂಟೆಗೆ ಸಮಾವೇಶ ನಡೆಯಲಿದೆ.

ತಿ.ನರಸೀಪುರ ಹಾಗೂ ವರುಣಾದಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ನಗರದ ಡಿ.ದೇವರಾಜ ಅರಸು ಸೇತುವೆ ಮೂಲಕ ನಂಜನಗೂಡಿಗೆ ಆಗಮಿಸಲಿರುವ ಪ್ರಜಾಧ್ವನಿ ಯಾತ್ರೆಗೆ ಕಾಂಗ್ರೆಸ್ ಕಾರ್ಯಕರ್ತರು ಅದ್ಧೂರಿ ಸ್ವಾಗತ ನೀಡಲು ಸಿದ್ಧತೆ ನಡೆಸಿದ್ದಾರೆ. ನಗರದ ಪುರಗಡಿಯಲ್ಲಿ ಸ್ವಾಗತ ಕಮಾನು ನಿರ್ಮಿಸಲಾಗಿದೆ. ಜೊತೆಗೆ ಬೃಹತ್ ನಂಜನಗೂಡು ರಸಬಾಳೆ ಹಣ್ಣಿನ ಹಾರ ಹಾಕಿ ಸ್ವಾಗತ ಕೋರಲು ಸಿದ್ಧತೆ ನಡೆಸಿದ್ದಾರೆ. ದಾರಿಯುದ್ದಕ್ಕೂ ಕಾಂಗ್ರೆಸ್ ನಾಯಕರ ಬೃಹತ್ ಫ್ಲೆಕ್ಸ್ ಮತ್ತು ಪಕ್ಷದ ಬಾವುಟಗಳನ್ನು ಕಟ್ಟಲಾಗಿದೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಶಕ್ತಿ ಪ್ರದರ್ಶನ ಮಾಡುವ ಸಲುವಾಗಿ ಬೃಹತ್ ಸಂಖ್ಯೆಯಲ್ಲಿ ಜನರು ಸೇರುವ ನಿರೀಕ್ಷೆ ಇದೆ. ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಕಳಲೆಕೇಶವಮೂರ್ತಿ ಸೇರಿದಂತೆ ವಿವಿಧ ರಾಜಕೀಯ ಮುಖಂಡರು ಭಾಗಿಯಾಗಲಿದ್ದಾರೆ.

ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಹೇಳಿಕೆ ನೀಡಿರುವ

ಅಶ್ವತ್ ನಾರಾಯಣ್‌ರನ್ನು ಸಂಪುಟದಿಂದ ಕೈ ಬಿಡಲು ಆಗ್ರಹ



ತಿ.ನರಸೀಪುರ, ಫೆ.19– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಸಂವಿಧಾನಿಕ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ ನಾರಾಯಣ್ ಅವರನ್ನು ಸಂಪುಟದಿಂದ ವಜಾಗೊಳಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕೆಂದು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ವರುಣಾ ಬ್ಲಾಕ್ ಘಟಕ ರಾಜ್ಯಪಾಲರನ್ನು ಒತ್ತಾಯಿಸಿದೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಹಿರಿಯ ಮುಖಂಡ ಎಂ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಟಿಪ್ಪು ಸುಲ್ತಾನ್‌ನಂತೆ ಹೊಡೆದು ಹಾಕಿ ಎಂದು ಕಾರ್ಯಕರ್ತರಿಗೆ ಕರೆ ಕೊಟ್ಟಿರುವ ಸಚಿವ ಅಶ್ವಥ್ ನಾರಾಯಣ್ ಹೇಳಿಕೆ ಖಂಡನೀಯ. ಅಸಂಬದ್ಧ ಹೇಳಿಕೆ ನೀಡಿ ಸಿದ್ದರಾಮಯ್ಯ ಅಭಿಮಾನಿಗಳಿಗೆ ನೋವುಂಟು ಮಾಡಿರುವ ಇವರಿಂದ ರಾಜ್ಯಪಾಲರು ರಾಜೀನಾಮೆ ಪಡೆದು ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಲು ಆದೇಶ ನೀಡಬೇಕು ಎಂದು ಒತ್ತಾಯಿಸಿದರು.

ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್ ಮಾತನಾಡಿ, ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಅಶ್ವಥ್ ನಾರಾಯಣ್ ಹೇಳಿಕೆ ಖಂಡನೀಯ. ಸಾರ್ವಜನಿಕವಾಗಿ ಅಸಂವಿಧಾನಿಕ ಬಳಕೆ ಮಾಡಿ ವಾರವೇ ಕಳೆಯುತ್ತಾ ಬಂದಿದ್ದರೂ, ಬಿಜೆಪಿ ಅವರ ಮೇಲೆ ಯಾವುದೇ ಕ್ರಮ ಜರುಗಿಸದಿರುವುದು ಸರಿಯಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಹಿಂದುಳಿದ ವರ್ಗ, ಅಸಂಘಟಿತರು, ಬಡ ಜನತೆಗೆ ನೀಡಿದ್ದ ಅನೇಕ ಜನಪ್ರಿಯ ಯೋಜನೆಗಳು ಇಂದಿಗೂ ಯಾರಿಂದಲೂ ಕೊಡಲು ಸಾಧ್ಯವಾಗಿಲ್ಲ. ಹಾಗಾಗಿ ಬಿಜೆಪಿ ಅವರಿಗೆ ಅವರ ಬಗ್ಗೆ ಯಾವುದೇ ಮಾತನಾಡುವ ನೈತಿಕತೆ ಇಲ್ಲ ಎಂದು ಕಿಡಿಕಾರಿದರು. ಮಾಜಿ ಕೌನ್ಸಿಲರ್ ಶ್ರೀನಿವಾಸ್, ಬಿ.ಮಹದೇವಯ್ಯ, ಎಸ್.ರಾಮಚಂದ್ರ, ಸತೀಶ್, ಆನಂದ್, ಯಜಮಾನ್ ಕಾಳಯ್ಯ, ಪುಟ್ಟಮ್ಮ, ಚಂದ್ರಮ್ಮ, ಮಹಾಲಕ್ಷ್ಮಿ, ಚೈತ್ರ ಮತ್ತಿತರರಿದ್ದರು.

ನಾಮಫಲಕದ ಹೆಬ್ಬಾಗಿಲು ನಿರ್ಮಾಣಕ್ಕೆ ಒತ್ತಾಯಿಸಿ ಪ್ರತಿಭಟನೆ



ಮೂಗೂರು, ಫೆ.19– ಇಲ್ಲಿಗೆ ಸಮೀಪದ ಕೊಳ್ಳೇಗಾಲ ತಿರುವಿನಲ್ಲಿ ವೃತ್ತ ನಿರ್ಮಿಸಿ, ನಾಮಫಲಕದ ಹೆಬ್ಬಾಗಿಲು (ಆರ್ಚ್) ನಿರ್ಮಾಣ ಮಾಡುವಂತೆ ಒತ್ತಾಯಿಸಿ, ರಸ್ತೆ ಪ್ರಾಧಿಕಾರದ ಅಧಿಕಾರಿಗಳ ಬೇಜವಾಬ್ದಾರಿ ಖಂಡಿಸಿ ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ನೇತೃತ್ವದಲ್ಲಿ ಮೂಗೂರು ಬಸ್ ನಿಲ್ದಾಣದ ಬಳಿ ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.

ಮೂಗೂರು ನಂಜುಂಡಸ್ವಾಮಿ ಮಾತನಾಡಿ, ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಧಾರ್ಮಿಕ ಕ್ಷೇತ್ರ ಶ್ರೀಮಲೆ ಮಹದೇಶ್ವರಬೆಟ್ಟ ಹಾಗೂ ವನ್ಯಜೀವಿ ಅಭಯಾರಣ್ಯ ಪ್ರವಾಸಿ ತಾಣ ಶ್ರೀಬಿಳಿಗಿರಿರಂಗನ ಬೆಟ್ಟಕ್ಕೆ ಇದೇ ಮಾರ್ಗವಾಗಿ ಸಂಚರಿಸಬೇಕಿದೆ. ಈ ರಸ್ತೆ ಸುಗಮ ಸಂಚಾರಕ್ಕೆ ವೃತ್ತ ನಿರ್ಮಿಸಿ, ರಸ್ತೆ ವಿಭಜಕ ನಾಮಫಲಕ ಅಳವಡಿಸುವಂತೆ ಅನೇಕ ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳು ಕೂಡಲೇ ಎಚ್ಚೆತ್ತು ಬೇಡಿಕೆ ಈಡೇರಿಸುವ ಪ್ರಯತ್ನಕ್ಕೆ ಮುಂದಾಗಬೇಕು ತಪ್ಪಿದಲ್ಲಿ, ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮುಖಂಡ ಎಂ.ಡಿ.ಬಸವರಾಜು ಮಾತನಾಡಿದರು. ಈ ವೇಳೆ ಗೌಡರ ನಾಗರಾಜು, ಗೌಡ್ರು ಪುಟ್ಟು, ಜಯಣ್ಣ, ನಂಜಪ್ಪ, ಮಹೇಂದ್ರ ಕುವಾರ್, ಸಿದ್ದರಾಜು, ಎಂ.ಜಗದೀಶ್, ಜಯಶಂಕರ ಮೂರ್ತಿ, ದೇವಾನಂದ್, ಮಹದೇವಪ್ಪ, ಸ್ವಾಮಿ, ಅರವಿಂದ್, ಶ್ರೀಕಂಠಸ್ವಾಮಿ, ಲೋಕೇಶ್, ಗ್ರಾಮದ ಎಲ್ಲಾ ಸಮುದಾಯದ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ರೈತಪರ ಬಜೆಟ್



ತಿ.ನರಸೀಪುರ ಫೆ.19– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರೈತಪರ ಬಜೆಟ್ ಮಂಡಿಸಿದ್ದು, ಇದ ರಿಂದ ರೈತರಿಗೆ ಅನುಕೂಲವಾಗಲಿದೆ ಎಂದು ವರುಣಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಶರತ್ ಪುಟ್ಟಬುದ್ಧಿ ತಿಳಿಸಿದ್ದಾರೆ.

ಕೊರೊನಾ ಆರ್ಥಿಕ ಸಂಕಷ್ಟದ ನಡುವೆಯೂ ಬಜೆಟ್ ಮಂಡಿಸಲಾಗಿದ್ದು, ಆರ್ಥಿಕ ಶಿಸ್ತು ಕಾಪಾಡಿಕೊಳ್ಳಲಾಗಿದೆ. ಜತೆಗೆ ತೆರಿಗೆ ಸಂಗ್ರಹ ಸಾಮರ್ಥ್ಯ ಹೆಚ್ಚಿಸಲಾಗಿದ್ದು, ಇದರಿಂದ ಮುಂದಿನ ದಿನಗಳಲ್ಲಿ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಸುಧಾರಣೆಯಾಗಲಿದೆ. ಆ ಮೂಲಕ ಜನಪರ ಯೋಜನೆಗಳಿಗೆ ಸಿಎಂ ಮತ್ತಷ್ಟು ಗಮನಹರಿಸಿದ್ದಾರೆ. ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದ್ದು, ಕಳೆದ ಬಾರಿ ಘೋಷಿಸಲಾಗಿದ್ದ ಯೋಜನೆಗಳಲ್ಲಿ ಶೇ.90ರಷ್ಟನ್ನು ಸರ್ಕಾರ ಈಡೇರಿಸಿದೆ. ಈ ನಡುವೆ ರಾಜಸ್ವ ಸ್ವೀಕೃತಿಗಳು ಶೇ.25ರಷ್ಟು ಹೆಚ್ಚಾಗಿದ್ದು, ಇದೊಂದು ಒಳ್ಳೆಯ ಬೆಳವಣಿಗೆ. ರೈತರ ಅಭ್ಯುದಯ ಗುರಿಯಾಗಿಟ್ಟುಕೊಂಡು ನೀರಾವರಿ ಕ್ಷೇತ್ರಕ್ಕೆ 25 ಸಾವಿರ ಕೋಟಿ ಅನುದಾನ ನೀಡಲಾಗಿದ್ದು, ಇದರಿಂದ ಅನ್ನದಾತನ ಬದುಕು ಸುಧಾರಿಸಲಿದೆ. ರೈತರ ಸಾಲದ ಮಿತಿಯನ್ನು ಬಜೆಟ್‌ನಲ್ಲಿ ಹೆಚ್ಚಿಸಲಾಗಿದ್ದು, ಆ ಮೂಲಕ ರೈತ ಪರವಾದ ಸರ್ಕಾರ ಎಂಬುದನ್ನು ಬೊಮ್ಮಾಯಿ ಸಾಬೀತು ಮಾಡಿದ್ದಾರೆ ಎಂದು ಶರತ್ ಪುಟ್ಟಬುದ್ಧಿ ಅವರು ವ್ಯಾಖ್ಯಾನಿಸಿದ್ದಾರೆ.

ಮಾ.1, ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಬೃಹತ್ ಸಮಾವೇಶ

ತಿ.ನರಸೀಪುರ ಕ್ಷೇತ್ರದ ಚುನಾವಣಾ ಉಸ್ತುವಾರಿ ಹೇಮಂತ್ ಕುಮಾರ್ ಗೌಡ ಮಾಹಿತಿ



ತಿ.ನರಸೀಪುರ, ಫೆ.19– ಮಲೆ ಮಹದೇಶ್ವರ ಬೆಟ್ಟದಿಂದ ಹೊರಟಿರುವ ವಿಜಯ ಸಂಕಲ್ಪ ಯಾತ್ರೆ ಒಂದು ತಂಡ ಮಾ.1ರಂದು ತಿ.ನರಸೀಪುರಕ್ಕೆ ಆಗಮಿಸಲಿದ್ದು, ಅಂದು ಪಟ್ಟಣದಲ್ಲಿ ಬೃಹತ್ ಸಮಾವೇಶ ನಡೆಯಲಿದೆ ಎಂದು ಕ್ಷೇತ್ರದ ಚುನಾವಣಾ ಉಸ್ತುವಾರಿ ಹೇಮಂತ್ ಕುಮಾರ್‌ಗೌಡ ತಿಳಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಮೂಲೆ ಮೂಲೆಗಳಿಂದ ಹೊರಟಿರುವ 4 ವಿಜಯ ಸಂಕಲ್ಪ ಯಾತ್ರೆಗಳ ಪೈಕಿ ಒಂದು ತಂಡ ಪಟ್ಟಣಕ್ಕೆ ಆಗಮಿಸಲಿದ್ದು, ಅಂದು 15 ಸಾವಿರ ಕಾರ್ಯಕರ್ತರನ್ನು ಸೇರಿಸಿ ಬೃಹತ್ ಸಮಾವೇಶ ಮಾಡಲು ಸಿದ್ಧತೆ ಕೈಗೊಳ್ಳಲಾಗಿದೆ ಎಂದರು.

ಮುಂಬರುವ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯದ 224 ಕ್ಷೇತ್ರಗಳಿಗೂ ಚುನಾವಣಾ ಉಸ್ತುವಾರಿಗಳನ್ನು ನೇಮಿಸಿದ್ದು, ತಿ.ನರಸೀಪುರ ಕ್ಷೇತ್ರದ ಉಸ್ತುವಾರಿಯನ್ನು ನನಗೆ ವಹಿಸಿದೆ. ಚುನಾವಣೆ ಮುಗಿವವರೆಗೆ ಕ್ಷೇತ್ರದಲ್ಲೇ ಇದ್ದು ಇಲ್ಲಿನ ಆಗು ಹೋಗುಗಳನ್ನು ಪರಿಶೀಲಿಸಿ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಬೇಕಾದ ಪೂರಕ ವಾತಾವರಣ ನಿರ್ಮಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಜಿಲ್ಲಾಧ್ಯಕ್ಷನಾಗಿದ್ದ ವೇಳೆ ಕ್ಷೇತ್ರದಲ್ಲಿ ಹಲವು ಬಾರಿ ಸಂಚರಿಸಿ ಜನರ ನಾಡಿ ಮಿಡಿತ ಅರಿತಿದ್ದೇನೆ ಸಾಕಷ್ಟು ಮಟ್ಟಿಗೆ ಕ್ಷೇತ್ರದ ಪರಿಚಯವಿದೆ. ಇಲ್ಲಿ ಪಕ್ಷದ ಅನೇಕ ಅನುಭವಿ ನಾಯಕರಿದ್ದಾರೆ. ಎಲ್ಲರ ಸಹಕಾರ, ಮಾರ್ಗದರ್ಶನ ಪಡೆದು ಕಳೆದ 15 ವರ್ಷಗಳಿಂದ ಪಕ್ಷಕ್ಕೆ ಕ್ಷೇತ್ರದಲ್ಲಾಗಿರುವ ಹಿನ್ನಡೆಗೆ 2023ರ ಚುನಾವಣೆಯಲ್ಲಿ ಅಂತ್ಯ ಹಾಡಬೇಕಿದೆ. ಕ್ಷೇತ್ರದಲ್ಲಿ ಬಿಜೆಪಿ ಮತ್ತೆ ಪುಟಿದೇಳುವ ಕೆಲಸ ಮಾಡಿ ಕ್ಷೇತ್ರವನ್ನು ಮತ್ತೆ ಬಿಜೆಪಿ ತೆಕ್ಕೆಗೆ ಪಡೆಯಲು ಕಾರ್ಯತಂತ್ರ ರೂಪಿಸಲಾಗುತ್ತದೆ ಎಂದರು.

ಮಾಜಿ ಸಚಿವರು ಗುತ್ತಿಗೆದಾರರನ್ನಷ್ಟೇ ಬೆಳೆಸಿದ್ದಾರೆ: ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಜನರಿಗೆ ಸ್ಪಂದಿಸುವ ಕೆಲಸ ಮಾಡಲಿಲ್ಲ. ಆದರೆ ಗುತ್ತಿಗೆದಾರರನ್ನು ಮಾತ್ರ ಬೆಳೆಸಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಮಹದೇವಪ್ಪನವರು ಸಚಿವರಾಗಿ ಇನ್ನೂ ಹಲವು ಯೋಜನೆಗಳನ್ನು ಕ್ಷೇತ್ರಕ್ಕೆ ಕೊಡಬಹುದಿತ್ತು. ಆದರೆ ಅವರು ಕಂಟ್ರಾಕ್ಟರ್‌ಗಳನ್ನು ಬೆಳೆಸಲಷ್ಟೇ ತಮ್ಮ ಅಧಿಕಾರ ಬಳಸಿಕೊಂಡರು. ಕ್ಷೇತ್ರವನ್ನು ಮಾದರಿ ಕ್ಷೇತ್ರ ಮಾಡಲು ಅವರು ವಿಫಲರಾಗಿದ್ದಾರೆ ಎಂದು ಅವರು ಆರೋಪಿಸಿದರು.

ಅಶ್ವಿನ್ ಹುಟ್ಟುಹಬ್ಬಕ್ಕಷ್ಟೇ ಸೀಮಿತ: ಈ ಹಿಂದಿನ ಚುನಾವಣೆಯಲ್ಲಿ ನಮ್ಮಲ್ಲಿ ಆದ ಕೆಲ ತಪ್ಪುಗಳಿಂದ ಅಶ್ವಿನ್ ಕುಮಾರ್ ಗೆದ್ದು ಶಾಸಕರಾಗಿದ್ದಾರೆ. ಕ್ಷೇತ್ರ ಅಭಿವೃದ್ಧಿ ಪಡಿಸಲು ವಿಫಲರಾಗಿರುವ ಅವರಿಗೆ ಯಾವುದೇ ರಾಜಕೀಯ ಇಚ್ಛಾಶಕ್ತಿ ಇಲ್ಲ. ನಮ್ಮ ಸರ್ಕಾರ ಕೊಟ್ಟ ಅನುದಾನದಲ್ಲಿ ಗುದ್ದಲಿಪೂಜೆ ಮಾಡಿಕೊಂಡು ಓಡಾಡುತ್ತಿದ್ದಾರೆ. ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಲಷ್ಟೇ ಸೀಮಿತರಾಗಿದ್ದಾರೆ ಹೊರತು ಕ್ಷೇತ್ರದ ಅಭಿವೃದ್ಧಿಗೆ ಅವರ ಕೊಡುಗೆ ಏನೂ ಇಲ್ಲ ಎಂದರು.

ಕ್ಷೇತ್ರದ ಜನರಿಗೆ ಹೊಸ ಬದಲಾವಣೆ ಬೇಕಿದೆ. ಹೊಸ ನಾಯಕತ್ವ ಬೇಕಿದೆ. ಆ ನಾಯಕತ್ವ ಕೊಡುವ ಕೆಲಸವನ್ನು ಬಿಜೆಪಿ ಮಾಡಲಿದ್ದು, 2023ರ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲ್ಲುವ ಮೂಲಕ ಕ್ಷೇತ್ರದಲ್ಲಿ ಬಿಜೆಪಿ ಬಾವುಟ ಹಾರಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಂಡಲ ಅಧ್ಯಕ್ಷ ಕೆ.ಸಿ. ಲೋಕೇಶ್ ನಾಯಕ್, ಮಾಜಿ ಶಾಸಕ ಸಿ.ರಮೇಶ್, ಜಿಲ್ಲಾ ಗ್ರಾಮಾಂತರ ಎಸ್‌ಸಿ ಕಾರ್ಯದರ್ಶಿ ಸಾಮ್ರಾಟ್, ಜಿಲ್ಲಾ ಉಪಾಧ್ಯಕ್ಷ ದಾಸಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್, ಜಿಲ್ಲಾ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಮಹದೇವಯ್ಯ, ಪ್ರಧಾನ ಕಾರ್ಯದರ್ಶಿ ಕೆ.ವಿ.ಸಿದ್ದಮಲ್ಲಪ್ಪ, ಲೋಕೇಶ್, ಮಾಜಿ ಮಂಡಲ ಅಧ್ಯಕ್ಷ ಪರಶಿವ ಮೂರ್ತಿ, ವಿಸ್ತಾರಕ ವಿನೋದ್ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

DRC CINEMAS — ದೂ : 4240422/4241800

ಸ್ಕ್ರೀನ್ 1	ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ರಾ.7.15ಕ್ಕೆ, ರಾ.9.50ಕ್ಕೆ, **ಪಠಾಣ್** (ಹಿಂ): ಸಂ.4.25ಕ್ಕೆ.
ಸ್ಕ್ರೀನ್ 2	**ವಾತಿ** (ತ): ಬೆ.10.35ಕ್ಕೆ, **ಕ್ರಾಂತಿ** (ಕ): ಮ.1.20ಕ್ಕೆ, **ಎಸ್‌ಎಲ್‌ವಿ** (ಕ): ಸಂ.4.30ಕ್ಕೆ, **ಪಠಾಣ್** (ಹಿಂ): ರಾ.7ಕ್ಕೆ, **ಒಂದೊಳ್ಳೆ ಲವ್ ಸ್ಟೋರಿ** (ಕ): ರಾ.9.50ಕ್ಕೆ.
ಸ್ಕ್ರೀನ್ 3	**ಬರೀ 10% ಬಡ್ಡಿ** (ಕ): ಬೆ.10.40ಕ್ಕೆ, **ಚಿಯೊಸ್** (ತ): ಮ.1.30ಕ್ಕೆ, **ದೊಡ್ಡಟ್ಟಿ ಬೋರೇಗೌಡ** (ಕ): ಸಂ.4.35ಕ್ಕೆ, **ಲವ್‌ಬರ್ಡ್ಸ್** (ಕ): ರಾ.7.10ಕ್ಕೆ, **ಎಂಕಿಲುಮ್ ಚಂದ್ರಿಕೆ** (ಮ): ರಾ.9.50ಕ್ಕೆ.
ಸ್ಕ್ರೀನ್ 4	**ಶೆಹಜಾದಾ** (ಹಿಂ): ಬೆ.10.40ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, **ವಾತಿ** (ತ): ಮ.1.30ಕ್ಕೆ, ಸಂ.4.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE — ದೂ : 2533444 / 2433456

ಸ್ಕ್ರೀನ್ 1	**ಶೆಹಜಾದಾ** (ಹಿಂ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್** (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	**ರೋಮಾಂಚಂ**(ಕ): ಬೆ.10.50ಕ್ಕೆ, **ಲವ್ ಬರ್ಡ್ಸ್** (ಕ): ಮ.1.35ಕ್ಕೆ, ರಾ.7.15ಕ್ಕೆ, **ವಾತಿ** (ತ): ಸಂ.4.20ಕ್ಕೆ, **ಚಿಯೊಸ್** (ತ): ರಾ.10ಕ್ಕೆ.
ಸ್ಕ್ರೀನ್ 4	**ಬರೀ 10% ಬಡ್ಡಿ** (ಕ): ಬೆ.11.20ಕ್ಕೆ, **ದೊಡ್ಡಟ್ಟಿ ಬೋರೇಗೌಡ** (ಕ): ಮ.2.10ಕ್ಕೆ, **ಸಕೂಚಿ** (ಕ): ಸಂ.4.50ಕ್ಕೆ, **ರೋಮಾಂಚಂ** (ಮ): ರಾ.7.35ಕ್ಕೆ, **ಪಠಾಣ್** (ಹಿಂ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

MVC — ದೂ : 0821–2973519

ಸ್ಕ್ರೀನ್ 1	**ಕ್ರಾಂತಿ** (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	**ಕ್ರಾಂತಿ** (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 3	**ಕ್ರಾಂತಿ** (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, **ಪಠಾಣ್** (ಹಿಂ): ರಾ.7.20ಕ್ಕೆ.
ಸ್ಕ್ರೀನ್ 4	**ಕ್ರಾಂತಿ** (ಕ): ಬೆ.7.10ಕ್ಕೆ, ಸಂ.6.50ಕ್ಕೆ, **ಪಠಾಣ್** (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, **ಗಾಂಧಿ ಗೋಡ್ಸೆ ಏಕ್ ಯುದ್ಧ್** (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS — ಮೊ.ನಂ: 8951357139 — ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, **ಪಠಾಣ್** (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, **ಧಮನ್** (ಹಿಂ): ಸಂ.4.10ಕ್ಕೆ, **ಅವತಾರ್: ದಿ ವೇ ಆಫ್ ವಾಟರ್** (3ಡಿ)(ಇಂ): ಸಂ.5.35ಕ್ಕೆ, **ಬಿಟಿಎಸ್** (ಕೊ): ಮ.1.45ಕ್ಕೆ, ಸಂ.6.50ಕ್ಕೆ, **ದಿ ವುಮನ್ ಕಿಂಗ್** (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, **ನಾಕ್ ಅಟ್ ದಿ ಕ್ಯಾಬಿನ್** (ಇಂ): ಮ.2.10ಕ್ಕೆ, ರಾ.7.50ಕ್ಕೆ, **ರನ್ ಬೇಬಿ ರನ್** (ತ): ಮ.1ಕ್ಕೆ, ಸಂ.6.55ಕ್ಕೆ, **ಮೈಕೆಲ್** (ತ): ಸಂ.4.35ಕ್ಕೆ, **ರೈಟರ್ ಪದ್ಮಭೂಷಣ್** (ತೆ): ರಾ.9.15ಕ್ಕೆ, **ಮೈಕೆಲ್** (ತೆ): ರಾ.10.55ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾತಿ (ತ) ಕ್ರಾಂತಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಾದಿ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಶೆಹಜಾದಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲವ್ ಬರ್ಡ್ಸ್ (ಕ)	2 ಪ್ರದರ್ಶನಗಳು
ಕ್ರಾಂತಿ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಪಟಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ಬಕಾಸುರನ್ (ತ)	4 ಪ್ರದರ್ಶನಗಳು
ಸಂಗಂ	
ಬರೀ 10% ಬಡ್ಡಿ–2 ಪ್ರದರ್ಶನ (ಕ) ಒಂದೊಳ್ಳೆ ಲವ್ ಸ್ಟೋರಿ (ಕ)	2 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಠಾಣ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಚಿಯೋಸ್ (ಕ)	4 ಪ್ರದರ್ಶನಗಳು

ಹಂಚೀಪುರ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಸರಗೂರು, ಫೆ.19– ತಾಲೂಕಿನ ಹಂಚೀಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಡಿ.ಪಿ.ನಟರಾಜು, ಉಪಾಧ್ಯಕ್ಷರಾಗಿ ಚನ್ನಯ್ಯ ಭಾನುವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಕಚೇರಿಯಲ್ಲಿ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಡಿ.ಪಿ.ನಟರಾಜು, ಉಪಾಧ್ಯಕ್ಷ ಸ್ಥಾನಕ್ಕೆ ಚನ್ನಯ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನಲೆಯಲ್ಲಿ ಚುನಾವಣಾಧಿಕಾರಿ ಜಿ.ಎಸ್.ಅವಿನಾಶ್ ಅವಿರೋಧ ಆಯ್ಕೆಯನ್ನು ಘೋಷಿಸಿದರು. ನಿರ್ದೇಶಕರಾದ ಗುರುಸ್ವಾಮಿ, ಎಸ್.ಕೆ.ದೇವರಾಜಪ್ಪ, ಚನ್ನಯ್ಯ, ಕಮಲಮ್ಮ, ಗುರುಮಲ್ಲಮ್ಮ, ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಎ.ಕೆ.ಚೇತನ್ ಹಾಜರಿದ್ದರು.

ನೂತನ ಅಧ್ಯಕ್ಷರಾಗಿ ಡಿ.ಪಿ.ನಟರಾಜು ಆಯ್ಕೆಯಾಗುತ್ತಿದ್ದಂತೆ ಅಭಿಮಾನಿಗಳು ಸಂಭ್ರಮಾಚರಣೆ ನಡೆಸಿದರು. ಹಂಚೀಪುರ ಮಠದ ಚನ್ನಬಸವಸ್ವಾಮೀಜಿ, ಕಿರಿಯ ತೋಂಟದಾರ್ಯಸ್ವಾಮೀಜಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಗೌಡಿಕೆ ಪುಟ್ಟಣ್ಣ ಗುರುಸಿದ್ದಪ್ಪ, ಶಿವಕುಮಾರ್, ಗಣಪತಿ, ಮಹದೇವಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಜಯಣ್ಣ, ಉಪಾಧ್ಯಕ್ಷ ನಾಗರಾಜು, ಕುಮಾರ, ತಾಪಂ ಮಾಜಿ ಸದಸ್ಯ ಮಹದೇವಸ್ವಾಮಿ, ಡಿ.ಪಿ.ಪ್ರಕಾಶ್, ಮಹೇಶ್, ರವೀಶ್, ಸಿದ್ದರಾಜು, ಶಿವಣ್ಣ, ಮಹೇಶ್, ಪಪಂ ಮಾಜಿ ಸದಸ್ಯ ನಾಗರಾಜು, ಸಿಪಿಐ ಲಕ್ಷ್ಮಿಕಾಂತ, ಎಸ್‌ಐ ಶ್ರವಣದಾಸರೆಡ್ಡಿ, ಸಿಬ್ಬಂದಿ ವರ್ಗ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.



ಹುಣಸೂರಿನ ಕಲ್ಕುಣಿಕೆಯಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಶ್ರೀಸ್ವಾಮಿಗೆ ನಾಗಾಭರಣ ಧಾರಣೆ ಮಾಡಿ ವಿಶೇಷ ಪೂಜೆ, ಪುಷ್ಪಾಲಂಕಾರ ಮಾಡಲಾಯಿತು. ಈ ಸಂದರ್ಭ ಸಾವಿರಾರು ಭಕ್ತರು ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಪುನೀತರಾದರು.

ಸಚಿವ ಡಾ.ಅಶ್ವಥ್ ನಾರಾಯಣ್ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ರಸ್ತೆ ತಡೆ



ಮೈಸೂರು,ಫೆ.19(ಎಂಟಿವೈ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊಡೆದುರುಳಿಸಿ ಎಂದು ಪ್ರಚೋದನಾಕಾರಿ ಹೇಳಿಕೆ ನೀಡಿರುವ ಸಚಿವ ಡಾ.ಅಶ್ವಥ್ ನಾರಾಯಣ್ ರಾಜೀನಾಮೆ ಆಗ್ರಹಿಸಿ ಮೇಗಳಾಪುರದಲ್ಲಿ ಮೈಸೂರು–ತಿ.ನರಸೀಪುರ ಮುಖ್ಯರಸ್ತೆಯನ್ನು ತಡೆದು ಪ್ರತಿಭಟನೆ ನಡೆಸಿದರು.

ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೇಗಳಾಪುರದಲ್ಲಿ ವಿವಿಧ ಗ್ರಾಮಗಳ ಕಾಂಗ್ರೆಸ್ ಕಾರ್ಯಕರ್ತರು, ಸಿದ್ದರಾಮಯ್ಯ ಅವರ ಅಭಿಮಾನಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸಚಿವ ಡಾ.ಅಶ್ವಥ್ ನಾರಾಯಣ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡ ಸಿದ್ದರಾಮನಹುಂಡಿ ಬಸವರಾಜ್ ಮಾತನಾಡಿ, ಜವಾಬ್ದಾರಿ ಸ್ಥಾನದಲ್ಲಿರುವ ವ್ಯಕ್ತಿಯಿಂದ ಇಂತಹ ಹೇಳಿಕೆ ನಿರೀಕ್ಷಿಸಿರಲಿಲ್ಲ. ಕೊಲೆಗೆ ಪ್ರಚೋಧನಾಕಾರಿ ಹೇಳಿಕೆ ಬಿಜೆಪಿ ಸರ್ಕಾರ ತಲೆತಗ್ಗಿಸುವಂತೆ ಮಾಡಿದೆ. ರಾಜ್ಯದ ಆರೂವರೆ ಕೋಟಿ ಜನರಿಗೂ ಜೀವಭಯವನ್ನುಂಟು ಮಾಡುವ ಹೇಳಿಕೆಯಾಗಿದೆ. ಕೂಡಲೇ ಸಚಿವ ಸ್ಥಾನದಿಂದ ಅಶ್ವಥ್‌ನಾರಾಯನ್ ಅವರನ್ನು ಕೆಳಗಿಳಿಸಬೇಕು ಎಂದು ಆಗ್ರಹಿಸಿದರು. ಮುಖ್ಯಮಂತ್ರಿ ಬೊಮ್ಮಾಯಿ ಈ ಹೇಳಿಕೆ ನೀಡಿರುವ ಸಚಿವರನ್ನು ಸಂಪುಟದಿಂದ ಕೈ ಬಿಡಬೇಕೆಂದು ಪ್ರತಿಭಟಿಸಿದರು. ಇಲ್ಲವಾದರೆ ಅವರ ವಿರುದ್ಧ ಪ್ರತಿಭಟನೆ ಮುಂದುವರಿಸುತ್ತೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮೇಗಳಾಪುರ, ಯಡಕೊಳ, ಕೀಳನಪುರ ಗ್ರಾಮ ಪಂಚಾಯತಿ ಹಾಲಿ ಅಧ್ಯಕ್ಷರು ಹಾಲಿ ಸದಸ್ಯರು ಮಾಜಿ ಅಧ್ಯಕ್ಷರು, ಚುನಾಯಿತ ಪ್ರತಿನಿಧಿಗಳೊಂದಿಗೆ ಎಪಿಎಂಸಿ ಸದಸ್ಯ ಪಿ ಬಸವರಾಜು, ಗ್ರಾ. ಪಂ.ಮಾಜಿ ಅಧ್ಯಕ್ಷ ಚಂದಶೇಖರ, ಕೀಳನಪುರ ಮಹದೇವಪ್ಪ, ಮೇಗಲಪುರ ಬಸವರಾಜು, ರಾಯನಹುಂಡಿ ರವಿ, ಉಮೇಶ್, ಶೇಖರ್, ವೀರೇಂದ್ರ, ದುದ್ದಗೆರೆ ಮಹದೇವ, ಗ್ರಾ.ಪಂ. ಅಧ್ಯಕ್ಷ ಮಹೇಶ್, ಶಿವಕುಮಾರ್, ಪಟೇಲ್ ಮಹದೇವಪ್ಪ, ಸಿದ್ದರಾಮ, ಮಂಜುನಾಥ್, ಎಂ.ಸಿ.ಹುಂಡಿ ಶಿವಪ್ರಸಾದ್, ಸೋಮಣ್ಣ, ಸಚಿನ್, ಸುರೇಶ್, ಶಿವನಾಗ, ಸಿದ್ದರಾಜು, ಶುಭಪ್ಪ. ಸೋಮಪ್ಪ, ವರುಣ ಚಿಕ್ಕದೇವಯ್ಯ, ಕೆಂಪಯ್ಯನಹುಂಡಿ ಮಾದೇವಣ್ಣ, ಬೀರಪ್ಪ, ಕೆಂಪರಾಮು, ಗಿರೀಶ್, ನಂಜುಂಡೇಗೌಡ, ಮಾದೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಹಾರಾಣಿ ಪಿಯು ಕಾಲೇಜು ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ



ಮೈಸೂರು,ಫೆ,19(ಎಂಟಿವೈ)– ಮೈಸೂರಿನ ಕೃಷ್ಣ ವಿಲಾಸ್ ರಸ್ತೆಯಲ್ಲಿರುವ ಮಹಾರಾಣಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಭಾನುವಾರ ಶಾಸಕ ಎಲ್.ನಾಗೇಂದ್ರ ಉದ್ಘಾಟಿಸಿದರು.

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಸಹಯೋಗದಲ್ಲಿ ಕುಡಿಯುವ ನೀರಿನ ಶುದ್ಧ ಘಟಕ ನಿರ್ಮಿಸಲಾಗಿದೆ. ಈ ವೇಳೆ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕಾಲೇಜಿನ ವಿದ್ಯಾರ್ಥಿನಿಯರೂ ಸೇರಿದಂತೆ ಸ್ಥಳೀಯರಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಈ ಘಟಕ ಸಹಕಾರಿಯಾಗಲಿದೆ. ಮಹಾರಾಣಿ ಕಾಲೇಜಿನ 3 ಸಾವಿರ ವಿದ್ಯಾರ್ಥಿನಿಯರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಒಂದು ಲೀಟರ್ ನೀರನ್ನು ಉಚಿತವಾಗಿ ಪಡೆದುಕೊಳ್ಳಬಹುದು. ಇನ್ನೊಂದು ಬದಿಗೆ ಸಾರ್ವಜನಿಕರಿಗೆ ನೀರು ಪಡೆದುಕೊಳ್ಳುವ ಸೌಲಭ್ಯ ಕಲ್ಪಿಸಲಾಗಿದೆ. 5 ರೂಪಾಯಿ ನಾಣ್ಯ ಹಾಕಿ 20 ಲೀಟರ್ ನೀರು ಸ್ವೀಕರಿಸಬಹುದು. ಸಾರ್ವಜನಿಕರು ಮತ್ತು ವಿದ್ಯಾರ್ಥಿನಿಯರಿಗೆ ಅನುಕೂಲವಾಗಲಿದೆ ಎಂದು ಅವರು ತಿಳಿಸಿದರು. ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಮುಖಂಡರಾದ ಪ್ರಮೋದ್, ಪರಮೇಶ್, ಸುರೇಂದ್ರ, ಸಚಿನ್, ಹರ್ಷ, ವಿ.ವಿ.ಭಟ್, ಲಕ್ಷ್ಮೀ ಹಾಗೂ ಇನ್ನಿತರರು ಉಪಸ್ಥಿತರಿದ್ದರು.





ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಮೈಸೂರು–570 022.

ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ.41/2022–23 ದಿನಾಂಕ:15.02.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 4ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ, **KW-1 wpp** ರೀತ್ಯಾ (ಏಕ ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಂತೆ), ಮೈಸೂರು ತಾಲ್ಲೂಕಿನ 04 ಕಾಮಗಾರಿಗಳಿಗೆ (ಅಂದಾಜು ಮೊತ್ತ ರೂ.15 ಲಕ್ಷಗಳಿಂದ ರೂ.9.00 ಲಕ್ಷದವರೆಗೆ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ **ದಿನಾಂಕ: 17.02.2023 ರಿಂದ 28.02.2023 ರವರೆಗೆ, ಸಾಧ್ಯವಾದರೆ ಟೆಂಡರ್ ತೆರೆಯುವ ದಿನಾಂಕ: 01.03.2023 ರ ಸಂಜೆ 5.30 ಘಂಟೆಯ ನಂತರ.**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://eprockarnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು
ಗ್ರಾಮೀಣ ಕುಡಿಯುವ ನೀರು ಮತ್ತು
ನೈರ್ಮಲ್ಯ ವಿಭಾಗ, ಮೈಸೂರು.

DIPR/DDMYS/KSMCA/1039/2022-23

